ಸಂಸ್ಕಾರ ತರಂಗಿಣೀ

ಪುಷ್ಪ – 3

ವಿಶೇಷ ವಿಧಾನದಲ್ಲಿ ಪರಿಷ್ಕೃತವಾಗಿರುವ
ದ್ವಿತೀಯ ಮುದ್ರಣ

ಚೂಡಾಕರ್ಮ
ಅಕ್ಷರಾರಂಭಃ
ಉಪನಯನಂ

ಮೊದಲ ಬಾರಿಗೆ ಕನ್ನಡದಲ್ಲಿ
ಕಪರ್ದಿಕಾರಿಕಾ
ಆಪಸ್ತಂಬ ಗೃಹ್ಯಸೂತ್ರಂ
ಯಾಜುಷ ಪ್ರಯೋಗ ಕ್ರಮಃ
ಪ್ರತಿ ವಾಕ್ಯಕ್ಕೂ ಕನ್ನಡದಲ್ಲಿ ಅರ್ಥಸಹಿತ

ಅಕ್ಷರ ಜೋಡಣೆ

ಶ್ರೀಮತಿ ಭಾರತೀ ಶರ್ಮಾ

ಅನುವಾದಕ ಲೇಖಕರು

ಮತ್ತು ಪ್ರಕಾಶಕರು

ವೇ॥ಬ್ರ॥ ಶ್ರೀ

ಎ.ಸಿ. ಶಕ್ತಿಧರ ಶರ್ಮಾ

ಸಲಹೆಗಾರರು

ವಿದ್ವಾನ್ ವೇ॥ಬ್ರ॥ ಶ್ರೀ

ಚಂದ್ರಶೇಖರ ಶರ್ಮಾ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ

ಶಿವಕುಮಾರ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ

ಕಿರಣ ಅವಧಾನಿಗಳು

ಸಲಹೆಗಾರರು

ವಿದ್ವಾನ್ ವೇ॥ಬ್ರ॥ ಶ್ರೀ

ವೇಂಕಟೇಶ ಅವಧಾನಿಗಳು

ಅಕ್ಷರ ಜೋಡಣೆ

ವೇ॥ಬ್ರ॥ ಶ್ರೀ ಶ್ರೀನಿವಾಸ ಶಾಸ್ತ್ರೀ

ಚಿತ್ರಕೂಟ ಮುದ್ರಣ ಮೇಲ್ವಿಚಾರಕರು

ಶ್ರೀ ಹೆಚ್.ಆರ್. ಶ್ರೀನಿವಾಸ

ಸಂಸ್ಕಾರ ತರಂಗಿಣೀ

ಪುಷ್ಪ – 3

ವಿಶೇಷ ವಿಧಾನದಲ್ಲಿ ಪರಿಷ್ಕೃತವಾಗಿರುವ ದ್ವಿತೀಯ ಮುದ್ರಣ

ಚೂಡಾಕರ್ಮ

ಅಕ್ಷರಾರಂಭಃ

ಉಪನಯನಂ

ಮೊದಲ ಬಾರಿಗೆ ಕನ್ನಡದಲ್ಲಿ

(ಕಪರ್ದಿಕಾರಿಕಾ–ಆಪಸ್ತಂಬ ಗೃಹ್ಯಸೂತ್ರಂ–ಯಾಜುಷ ಪ್ರಯೋಗ ಕ್ರಮಃ–ಪ್ರತಿ ವಾಕ್ಯಕ್ಕೂ ಕನ್ನಡದಲ್ಲಿ ಅರ್ಥಸಹಿತ)

ವಿಷಯಾನುಕ್ರಮಣಿಕೆ

1. ಗ್ರಂಥನಾಮ	1
2. ವಿಷಯಸೂಚಿ	2
3. ಗುರುವಂದನೆ	3
4. ಕೃತಜ್ಞತೆಗಳು	4
5. ಸಂಪಾದಕೀಯ	5
6. ನಮ್ಮ ಪ್ರಕಟಣೆಗಳು	6–7
7. ಪುಸ್ತಕಗಳು ದೊರೆಯುವ ಸ್ಥಳಗಳು	8
8. ಹಿರಿಯರ ನುಡಿ	9–11
9. ಪ್ರಸ್ತಾವನೆ	12–16
10. ಚಿಂತನ	17–19
11. ಚೂಡಾಕರ್ಮ	
ಅ) ಕಪರ್ದಿಕಾರಿಕಾ	20
ಆ) ಆಪಸ್ತಂಬ ಗೃಹ್ಯಸೂತ್ರಂ	21
ಇ) ಪ್ರಯೋಗಃ	22–32
12. ಅಕ್ಷರಾರಂಭಃ	
ಪ್ರಯೋಗಃ	32–35
13. ಉಪನಯನಂ	
ಅ) ಕಪರ್ದಿಕಾರಿಕಾ	35–39
ಆ) ಆಪಸ್ತಂಬ ಗೃಹ್ಯಸೂತ್ರಂ	39–44
ಇ) ಪ್ರಯೋಗಃ	44–96

॥ ಓಂ ಶ್ರೀ ॥

ಯಜ್ಞದೇಹ ಯಜುಶ್ಶಾಖಾ ಕಲ್ಪಸೂತ್ರ ಪ್ರವರ್ತಕ: ।
ಸಕಲಾಮ್ನಾಯವಿಜ್ಞೇಯಾತ್ ಆಪಸ್ತಂಬೋ ಮಹಾಮುನಿ: ॥
ಬೋಧಾಯನೋ ಯಂ ಭಗವಾನ್ ಮುಖ್ಯಶಿಷ್ಯಮಚೀಕರತ್
ವಿಪಶ್ಚಿದ್ದಾಶತಾನ್ ಮೇಧಾಂ ಆಪಸ್ತಂಬ: ಸ ಮೇ ಮುನಿ: ।
ಸಂತ: ತತ್ಸೂತ್ರಗಂಭೀರ ವ್ಯಾಖ್ಯಾಪ್ರಖ್ಯಾತ ವೈಭವಾ:
ಕಪರ್ದಿ ಧೂರ್ತಸ್ವಾಮ್ಯಾದ್ಯಾ: ಜೀಜೀಯಂತಾಂ ವಿಮತ್ಸರಾ: ॥
ಪ್ರಾಚೀನೇಷು ನಿಬಂಧನೇಷು ಗಹನಾನ್ ಸಂಗೃಹ್ಯ ಚಾರ್ಥಾನ್ ಬಹೂನ್
ಅಲ್ಪಜ್ಞೇನ ವಿಧಾಸ್ಯತೇ ಪರಮಯಂ ವಿದ್ವಜ್ಜನಾನುಗ್ರಹಾತ್ ।
ಧೀರಾ ಗ್ರಂಥಮಿಮಂ ವಿಲೋಕ್ಯ ಸುಧಿಯೋ ದೋಷಾನಪಾಸ್ಯಾದರಾತ್
ನೀರಕ್ಷೀರನಯೇನ ಸದ್ಗುಣಗಣಾನ್ ಗೃಹ್ಣಂತ್ವಿತಿ ಪ್ರಾರ್ಥಯೇ ॥

॥ ಅವಧೂತ ಶ್ರೀ ಚಂದ್ರಶೇಖರ ಭಾರತೀ ಪರಮಹಂಸ ಜಗದ್ಗುರವೇ ನಮಃ ॥

॥ ಪೂಜ್ಯ ಶ್ರೀ ಭಾರತೀತೀರ್ಥ ಜಗದ್ಗುರು ಸಾರ್ವಭೌಮಾಯ ನಮಃ ॥

ಜಗದ್ಗುರು ಶ್ರೀ ಆದಿಶಂಕರಾಚಾರ್ಯ ಮಹಾಸಂಸ್ಥಾನಮ್,
ಶಾರದಾ ಪೀಠಮ್, ಶೃಂಗೇರಿ

॥ ವಾತ್ಸಲ್ಯ ನಿಧಿ ಅವಧೂತ ಶ್ರೀ ವೇಂಕಟಾಚಲ ಸದ್ಗುರವೇ ನಮಃ ॥
(ಎಲ್ಲವೂ ನಿನ್ನದಯ್ಯ ನನ್ನದೇನೂ ಇಲ್ಲವಯ್ಯಾ ಗುರುನಾಥ)

॥ ಶ್ರೀ ಗುರುಭ್ಯೋ ನಮಃ ಹರಿಃ ಓಂ ॥

ಕೃತಜ್ಞತೆಗಳು

ಪವಿತ್ರವಾದ ಈ ಕೈಂಕರ್ಯದಲ್ಲಿ ಸದಾ ನಮ್ಮೊಂದಿಗಿದ್ದು ಪ್ರೋತ್ಸಾಹಿಸುತ್ತಾ ಧಾರ್ಮಿಕ ಶ್ರದ್ಧೆಯೊಂದಿಗೆ, ಸಾಮಾಜಿಕ ಕಳಕಳಿಯ ಬದ್ಧತೆಯನ್ನು ತೋರುತ್ತಿರುವ ಈ ಮಹನೀಯರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ . ಇವರೆಲ್ಲರಿಗೂ ಶ್ರೀ ಗುರುನಾಥರ ಸಾನ್ನಿಧ್ಯದ ಅನುಭೂತಿಯು ಸದಾಕಾಲ ಸಿಗುತ್ತಿರಲೆಂದು ನಾವು ಪ್ರಾರ್ಥಿಸುತ್ತೇವೆ.

1. **ಶ್ರೀಯುತ ವಿ.ಆರ್. ಗೌರೀಶಂಕರ್, ಆಡಳಿತಾಧಿಕಾರಿಗಳು, ಜಗದ್ಗುರು ಶಾರದಾ ಪೀಠ ಮಹಾ ಸಂಸ್ಥಾನಮ್,** ಶೃಂಗೇರಿ.
2. **ಡಿವೈನ್ ಲೈಫ್ ಸೊಸೈಟಿ,** ಶಿವಾನಂದ ಆಶ್ರಮ, ಹೃಷೀಕೇಶ .
3. **ಬಾಡಿ ಟೆಂಪಲ್ ಯೋಗಾಸೆಂಟರ್,** ಶಿವಮೊಗ್ಗ .
4. **ಶ್ರೀಯುತ ವಿದ್ವಾನ್, ಮಾರ್ಕಂಡೇಯ ಅವಧಾನಿಗಳು,** ಬೃಹಸ್ಪತ್ಯಾಚಾರ್ಯರು, ಮತ್ತೂರು.
5. **ಶ್ರೀಯುತ ವಿದ್ವಾನ್ ಡಾ॥ ಸುಬ್ರಾಯ ವಿ. ಭಟ್ ,** ಮೀಮಾಂಸಾ ಶಾಸ್ತ್ರ ಪ್ರಾಧ್ಯಾಪಕರು, ರಾಜೀವ್‌ಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠ, ಶೃಂಗೇರಿ.
6. **ಶ್ರೀಯುತ ಸುಬ್ರಹ್ಮಣ್ಯ ಪ್ರಸಾದ್‌ರವರು ,** ಎಸ್.ಎಲ್.ಎನ್. ರೇಡಿಯೋಸ್, ಶಿವಮೊಗ್ಗ .
7. **ಶ್ರೀಯುತ ರಾಮಪ್ರಸಾದ್, ಸಹೋದರರು,** ಅಶ್ವಿನಿ ಡಿಜಿಟಲ್ ಆಡಿಯೋಸ್, ಬೆಂಗಳೂರು .
8. **ಶ್ರೀಯುತ ಪ್ರವೀಣ್‌ರವರು,** ಬೆಂಗಳೂರು .
9. **ವೇದಬ್ರಹ್ಮ ಶ್ರೀಯುತ ಭಾನುಪ್ರಕಾಶ ಶರ್ಮರು,** ಶ್ರೀರಂಗಪಟ್ಟಣ .
10. **ಶ್ರೀಯುತ ಶರಚ್ಚಂದ್ರರವರು,** ಡಿ.ಐ.ಜಿ. (ಗುಪ್ತದಳ), ಬೆಂಗಳೂರು .
11. **ಶ್ರೀಯುತ ಡಾ॥ ಮಧುಕೇಶ್ವರ್‌ರವರು,** ತಹಶೀಲ್ದಾರ್, ಭಟ್ಕಳ.
12. **ಶ್ರೀಯುತ ವಿದ್ವಾನ್ ಕಣ್ಣನ್‌ರವರು,** ಹಿರೇಮಗಳೂರು .
13. **ಶ್ರೀಯುತ ಗಣೇಶ್‌ರವರು,** ಎಲ್.ಐ.ಸಿ. ಡೆವಲಪ್ ಮೆಂಟ್ ಆಫೀಸರ್, ಬೆಂಗಳೂರು.
14. **ಶ್ರೀಯುತ ಪ್ರಭಾಕರ್‌ರವರು,** ಇನ್‌ಫರ್‌ಮೇಷನ್ ಟೆಕ್ನಾಲಜಿ ವಿಭಾಗದ ಮುಖ್ಯಸ್ಥರು, ಮಲ್ಲಾಡ್ ಇಂಜಿನಿಯರಿಂಗ್ ಕಾಲೇಜ್, ಹಾಸನ.

ಸಂಪಾದಕರು, ಅನುವಾದಕ ಲೇಖಕರು ಮತ್ತು ಪ್ರಕಾಶಕರು

ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ

ದೂ : 9686497982, 08175225445

ಅಕ್ಷರಜೋಡಣೆ : ವೇ॥ಬ್ರ॥ಶ್ರೀ ಸಿ. ಶ್ರೀನಿವಾಸ ಶಾಸ್ತ್ರೀ, ಶೃಂಗೇರಿ. ಮತ್ತು ಶ್ರೀಮತಿ ಭಾರತೀ ಶರ್ಮಾ. ವೇ॥ಬ್ರ॥ ಶ್ರೀ ಶಕ್ತಿಧರ ಶರ್ಮಾ

ವರ್ಷ : ಜನವರಿ 2013 (ನಂದನ ಸಂವತ್ಸರ, ಪುಷ್ಯ ಮಾಸ)

ಪ್ರತಿಗಳು : 1,000

ಪುಟಗಳು : 96 + 4

ಹಕ್ಕುಗಳು : ಲೇಖಕರದ್ದು©

ಮೌಲ್ಯ : **ಅಮೂಲ್ಯ**

ಪ್ರೋತ್ಸಾಹಯುತ ಕಾಣಿಕೆ :

ಮುದ್ರಕರು : ಚಿತ್ರಕೂಟ ಪ್ರಿಂಟರ್ಸ್, ಶಿವಮೊಗ್ಗ
ದೂ : 9448449664

ಪ್ರಧಾನ ಮಾರ್ಗದರ್ಶಕರು : **ವೇ॥ ಬ್ರ॥ ಶ್ರೀ॥ ವಿದ್ವಾನ್ ಶಿವಕುಮಾರ ಅವಧಾನಿಗಳು,** ಮತ್ತೂರು.

ವೇ॥ ಬ್ರ॥ ಶ್ರೀ॥ ವಿದ್ವಾನ್ ಕಿರಣ ಅವಧಾನಿಗಳು, ಮತ್ತೂರು.

ಸಲಹೆಗಾರರು : ವೇ॥ಬ್ರ॥ ಶ್ರೀ ವಿದ್ವಾನ್ ಚಂದ್ರಶೇಖರ ಶರ್ಮಾ ಅವಧಾನಿಗಳು, ಅಗ್ರಹಾರ.

ವೇ॥ಬ್ರ॥ ಶ್ರೀ ವಿದ್ವಾನ್ ವೇಂಕಟೇಶ ಅವಧಾನಿಗಳು, ರಾವಣಾಥಪುರ.

ಈ ಪುಸ್ತಕ ಹೊರಬರಲು ಕಾರಣರಾದ ಎಲ್ಲಾ ಮಹನೀಯರಿಗೂ ಕೃತಜ್ಞತೆಗಳು

ಶ್ರೀ ಚೈತನ್ಯ ಗುರುನಾಥ ಪ್ರಕಾಶನದವರ ಪ್ರಕಟಣೆಗಳು

1 **ಅನುಷ್ಠಾನ ತರಂಗಿಣೀ**
(ನಿತ್ಯ ಪೂಜಾವಿಧಿ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತ ಗೀತೆ ಶ್ಲೋಕ ಮತ್ತು ಅರ್ಥಸಹಿತ)

2. **ಸಂಸ್ಕಾರ ತರಂಗಿಣೀ ಪುಷ್ಪ–1** (ಪುಂಸವನ ಮತ್ತು ಸೀಮಂತೋನ್ನಯನ)

3. **ಸಂಸ್ಕಾರ ತರಂಗಿಣೀ ಪುಷ್ಪ–2** (ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

4. **ಸಂಸ್ಕಾರ ತರಂಗಿಣೀ ಪುಷ್ಪ–3** (ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

5. **ಸಂಸ್ಕಾರ ತರಂಗಿಣೀ ಪುಷ್ಪ–4** (ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ಭಗವದ್ಗೀತೆಯಲ್ಲಿ ಕರ್ಮ ಭಾಗದ ವಿಚಾರ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ)

6. **ಸಂಸ್ಕಾರ ತರಂಗಿಣೀ ಸರಣಿಯ ಪುಷ್ಪ–5**
ಅನುಷ್ಠಾನ ತರಂಗಿಣೀ–ದ್ವಿತೀಯ ಮುದ್ರಣ
(ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ನಿತ್ಯ ಪೂಜಾವಿಧಿ, ಗುರುಗೀತಾ ಪಾರಾಯಣ ಕ್ರಮ ಅರ್ಥಸಹಿತ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತ ಗೀತೆ ಶ್ಲೋಕ ಮತ್ತು ಅರ್ಥಸಹಿತ)

7. **ಪ್ರಪ್ರಥಮ ಬಾರಿಗೆ ಧ್ವನಿಸುರುಳಿಯಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಬ್ರಾಹ್ಮಣ, ಆರಣ್ಯಕ, ಸಂಹಿತೆ, ಕ್ರಮ, ಘನ, ಉದಕಶಾಂತಿ ಮಂತ್ರಗಳು ಹಾಗೂ ದೇವರನಾಮ, ಕೀರ್ತನೆಗಳು.**

8. **ಸಂಸ್ಕಾರ ತರಂಗಿಣೀ ಪುಷ್ಪ–6**
(ಅಗ್ನಿಷ್ಟೋಮ ಸಂಕಲ್ಪ, ಪ್ರಣಾಮ, ನಾಂದೀ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ (ಹೋಮ))

9. **ಸಂಸ್ಕಾರ ತರಂಗಿಣೀ ಪುಷ್ಪ–7**
(ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಅಗ್ನಿಪುನಸ್ಸಂಧಾನ, ಔಪಾಸನ, ಬ್ರಹ್ಮಯಜ್ಞ, ವೈಶ್ವದೇವ, ವಿಧುರಾಗ್ನಿ ಸಂಧಾನ, ತರ್ಪಣ ಕ್ರಮ, ಯಜ್ಞೋಪವೀತ ಧಾರಣ ಕ್ರಮ, ಭೋಜನ ಪರಿಷೇಚನ ಕ್ರಮ)

10. **ಸಂಸ್ಕಾರ ತರಂಗಿಣೀ ಪುಷ್ಪ–1, 2 ದ್ವಿತೀಯ ಮುದ್ರಣ**
(ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

11. **ಸಂಸ್ಕಾರ ತರಂಗಿಣೀ ಪುಷ್ಪ–3 ದ್ವಿತೀಯ ಮುದ್ರಣ**
(ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

ಮುಂದಿನ ಪ್ರಕಟಣೆಗಳು

1 **ಸಂಸ್ಕಾರ ತರಂಗಿಣೀ ಪುಷ್ಪ – 8** (ಉಪಾಕರ್ಮ, ಪ್ರಾಯಶ್ಚಿತ್ತ ಪ್ರಕರಣ, ಆಪಸ್ತಂಬ ಗೃಹ್ಯಸೂತ್ರದಲ್ಲಿ ಬರುವ ಪತಿಪತ್ನಿಯರ ಅನ್ಯೋನ್ಯವಿಚಾರ, ಶೀಘ್ರ ಮತ್ತು ಸುಲಭ ಪ್ರಸವವಿಚಾರ, ಕುಷ್ಠ, ಕ್ಷಯಾದಿರೋಗ ನಿವಾರಣಾ ವಿಚಾರ ಹಾಗೂ ಇನ್ನಿತರ ವಿಶೇಷ ವಿಚಾರಗಳು)

2. **ಸಂಸ್ಕಾರ ತರಂಗಿಣೀ ಪುಷ್ಪ – 9** (ಆಪಸ್ತಂಬೋಕ್ತ ಗೃಹನಿರ್ಮಾಣ – ಗೃಹ ಪ್ರವೇಶ)

3. **ಸಂಸ್ಕಾರ ತರಂಗಿಣೀ ಪುಷ್ಪ – 10** (ಹದಿನಾರು ಸಂಸ್ಕಾರಗಳಲ್ಲಿ ಬರುವ ಅಷ್ಟೂ ಮಂತ್ರಗಳಿಗೆ ಭಾಷ್ಯಾರ್ಥ ಕನ್ನಡದಲ್ಲಿ)

4. **ಸಂಸ್ಕಾರ ತರಂಗಿಣೀ ಪುಷ್ಪ – 11** (ಶ್ರಾದ್ಧ)

5. **ಸಂಸ್ಕಾರ ತರಂಗಿಣೀ ಪುಷ್ಪ – 12** (ಏಕಮೇಧ ಸಂಸ್ಕಾರ [ಅಂತ್ಯೇಷ್ಟಿ])

6. **ಸಂಸ್ಕಾರ ತರಂಗಿಣೀ ಪುಷ್ಪ – 13**
(ರುದ್ರ – ಚಮಕ – ಆಶೀರ್ವಾದ ಮಂತ್ರಗಳ ಫಲಪಾಠ)

7. **ಸಂಸ್ಕಾರ ತರಂಗಿಣೀ ಪುಷ್ಪ – 14** (ಮಾರ್ಕಂಡೇಯ ಪುರಾಣದಲ್ಲಿ ಬರುವ ದುರ್ಗಾ ಸಪ್ತಶತಿಯ ಶ್ಲೋಕಗಳು ಮತ್ತು ಅರ್ಥ (ಕನ್ನಡದಲ್ಲಿ)

ಪ್ರತಿಗಳು ದೊರೆಯುವ ಸ್ಥಳಗಳು :

1. ವೇ॥ ಬ್ರ॥ ಶ್ರೀ ಎ.ಸಿ. **ಶಕ್ತಿಧರ ಶರ್ಮಾ**, ಶಿವಮೊಗ್ಗ ಮೊ. : 9686497982
2. ಶ್ರೀಮಠ ಪುಸ್ತಕಾಲಯ, ಶಾರದಾಪೀಠಮ್, ಶೃಂಗೇರಿ
3. ಶೃಂಗೇರಿ ಸ್ಟೋರ್ಸ್, ಮಾರಿಕಾಂಬ ಗದ್ದುಗೆ ಎದುರು, ಕೋಟೆ ರಸ್ತೆ, ಶಿವಮೊಗ್ಗ
4. ಉಡುಪಿ ಸ್ಟೋರ್ಸ್, ಗಾಂಧಿ ನಗರ, ಶಿವಮೊಗ್ಗ
5. ರಾಜಾರಾಮ್ ಬುಕ್ ಹೌಸ್, ಶಿವಮೊಗ್ಗ
6. ಸಪ್ನಾ ಬುಕ್ ಹೌಸ್, ಮೈಸೂರು
7. ಕರ್ನಾಟಕ ಪುಸ್ತಕ ಪ್ರದರ್ಶನ, ಸಹ್ಯಾದ್ರಿ ಥಿಯೇಟರ್ ಪಕ್ಕ, ಹಾಸನ
8. ಪ್ರಚೇತಾ ಬುಕ್ ಹೌಸ್, ಹೋಟೆಲ್ ಶಾಂತಿ ಸಾಗರ್ ಬಿಲ್ಡಿಂಗ್, ಬುಲ್‌ಟೆಂಪಲ್ ರಸ್ತೆ, ಬೆಂಗಳೂರು
9. ವೇದಾಂತ ಬುಕ್ ಹೌಸ್, ಉಮಾ ಟಾಕೀಸ್ ಹತ್ತಿರ, ಬೆಂಗಳೂರು
10. ಸಾಹಿತ್ಯ ಗಂಗಾ, ರಾಷ್ಟ್ರೋತ್ಥಾನ ಪರಿಷತ್, ಕೇಶವ ಶಿಲ್ಪ, ಉಮಾ ಟಾಕೀಸ್ ಹತ್ತಿರ, ಬೆಂಗಳೂರು
11. ಸಪ್ನಾ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು
12. ಶೃಂಗೇರಿ ಶಂಕರ ಮಠ, ಉಮಾ ಟಾಕೀಸ್ ಹತ್ತಿರ, ಬೆಂಗಳೂರು
13. ನ್ಯೂ ವೇದಾಂತ ಬುಕ್‌ಹೌಸ್, ಈಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು
14. ಬುಕ್ ಹೌಸ್, ಸರ್ಕಾರಿ ಬಸ್‌ನಿಲ್ದಾಣ, ಚಿತ್ರದುರ್ಗ
15. ಸಪ್ನ ಬುಕ್ ಹೌಸ್, ಮಂಗಳೂರು

ಹಿರಿಯರ ನುಡಿ

ಶ್ರೀ ಶಾರದಾ ಗುರು ಅನುಗ್ರಹ ಪಡೆದ ಶ್ರೀ ಶಕ್ತಿಧರ ಶರ್ಮ ನಮ್ಮ ನಾಡಿನ ಒಂದು ಶಕ್ತಿಯೇ ಸೈ. ಅವರ ಪರಿಶ್ರಮದಿಂದ ಪುರೋಹಿತರಿಗೆ ಮತ್ತು ಪ್ರಯೋಕ್ತೃಗಳಿಗೆ ಹಾಗೂ ಕರ್ಮ ಭಾಗದಲ್ಲಿ ಶ್ರದ್ಧೆಯಿರುವ ಎಲ್ಲರಿಗೂ ಸಂಸ್ಕಾರ ತರಂಗಿಣೀ ಎಂಬ ಪೂರ್ವ ಪ್ರಯೋಗ ಪುಸ್ತಕ ಬಂದದ್ದು ತುಂಬಾ ಉಪಕಾರವಾಗಿದೆ. ಈ ಕೈಪಿಡಿಯು ಜೊತೆಯಲ್ಲಿದ್ದರೆ ಗುರುವೇ ಜೊತೆಯಲ್ಲಿದ್ದಂತೆ. ನಿಮಗೆ ಯಾವ ವಿಷಯ ಬೇಕು ? – ಋಷಿ ವಾಕ್ಯ ಬೇಕೇ, ಕರ್ದಿ ಮುನಿಯ ಕಾರಿಕೆ ಇದೆ . ಸೂತ್ರಕಾರರ ವಾಕ್ಯ ಬೇಕೇ , ಆಪಸ್ತಂಬ ಗೃಹ್ಯಸೂತ್ರ ವಾಕ್ಯ ಇದೆ . ಪ್ರಯೋಗ ಬೇಕೇ, ಅಜಸ್ರಾಗ್ನಿ ಧಾರಕರೂ ಹಾಗೂ ಕರ್ಮಠರೂ ನಡೆಸಿಕೊಂಡು ಬಂದಿರುವ, ಸರಳಮಂತ್ರಾನುಪೂರ್ವಿ ಪ್ರಯೋಗ ಇದೆ. ಅಲ್ಲದೆ ಕರ್ದಿಕಾರಿಕೆ – ಅದರ ಕನ್ನಡ ಅರ್ಥ..., ಆಪಸ್ತಂಬ ಗೃಹ್ಯಸೂತ್ರ – ಅದರ ಕನ್ನಡ ಸರಳ ಅನುವಾದ ..., ಪ್ರಯೋಗ – ಅದರ ತಳಿ ಕನ್ನಡ ಅರ್ಥ . ಈ ರೀತಿಯ ಶೈಲಿ ಇವರ ಎಲ್ಲಾ ಪುಸ್ತಕಗಳಲ್ಲೂ ಬಂದಿರುವುದೇ ವಿಶೇಷತೆಯ ಲಕ್ಷಣವಾಗಿದೆ .

ಈಗಾಗಲೇ ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಅಕ್ಷರಾರಂಭ, ಉಪನಯನ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ, ಸರಳ ಪೂಜಾಕ್ರಮ, ವಿಸ್ತಾರ ಪೂಜಾಕ್ರಮ, ಅವಧೂತಗೀತೆ, ಗುರುಗೀತೆ, ಯತಿ ಆರಾಧನಾಪ್ರಯೋಗ, ಸಂಕಲ್ಪ, ಪುಣ್ಯಾಹ, ನಾಂದಿ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ (ಹೋಮ), ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಔಪಾಸನ, ಅಗ್ನಿಪ್ರನಸ್ಸಂಧಾನ, ಬ್ರಹ್ಮಯಜ್ಞ, ವೈಶ್ವದೇವ, ತರ್ಪಣಕ್ರಮ, ಭೋಜನವಿಷಯ, ಯಜ್ಞೋಪವೀತ ಧಾರಣ ವಿಚಾರ ಇಷ್ಟೂ ಕರ್ಮಗಳನ್ನು ಒಳಗೊಂಡಂತಹ ಏಳು ಗ್ರಂಥಗಳು ಸಮಾಜಕ್ಕೆ ಬಂದಾಗಿದೆ. ಹಾಗೂ ಇವುಗಳಲ್ಲಿ ಮೊದಲ ನಾಲ್ಕು ಪುಸ್ತಕಗಳು ದ್ವಿತೀಯ ಮುದ್ರಣವನ್ನೂ ಕಂಡಿವೆ.

ಮತ್ತೂ ಮುಂದಿನವುಗಳಲ್ಲಿ ಉಪಾಕರ್ಮ, ಗೃಹಪ್ರವೇಶ, ಪ್ರಾಯಶ್ಚಿತ್ತ ಪ್ರಕರಣ, ಅಂತ್ಯೇಷ್ಟಿ, ಶ್ರಾದ್ಧ, ಷೋಡಶ ಸಂಸ್ಕಾರಗಳಲ್ಲಿ ಬರುವ ಅಷ್ಟೂ

ಮಂತ್ರಗಳಿಗೆ ಕನ್ನಡದಲ್ಲಿ ಭಾಷ್ಯ ಮತ್ತು ಅರ್ಥ, ಹಾಗೂ ಧಾರ್ಮಿಕ ದೃಷ್ಟಿಯಲ್ಲಿ ಭಾರತ ಯಾತ್ರೆ ಇಷ್ಟೂ ಪುಸ್ತಕಗಳು ಬರಲಿಕ್ಕಿವೆ. ಇದಲ್ಲದೆ ಪ್ರಪ್ರಥಮ ಬಾರಿಗೆ ಸುವ್ಯವಸ್ಥಿತ (ಡಿಜಿಟಲ್ ಸ್ಟುಡಿಯೋ ರೆಕಾರ್ಡಿಂಗ್) ಡಿ.ವಿ.ಡಿ. ಧ್ವನಿಸುರುಳಿಗಳಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಸಂಪೂರ್ಣ ಬ್ರಾಹ್ಮಣ – ಆರಣ್ಯಕ – ೭ ಕಾಂಡಗಳಂದ ೧೦೨ ಸಂಹಿತಾ ಅನುವಾಕ – ಅವುಗಳಿಗೆ ಕ್ರಮಪಾಠ – ೧೦೦ ಕ್ಕೂ ಹೆಚ್ಚು ಮಂತ್ರಗಳಿಗೆ ಘನಪಾಠ - ಶರ್ಮರ ಮದದಿಯಾದ ಬಿ.ಸೌ. ಭಾರತಿಯವರ ಭಾವ ಪ್ರಧಾನವಾದ ಉತ್ತಮ ಶಾರೀರದಿಂದ ೭೦ ಕ್ಕೂ ಹೆಚ್ಚು ಭಜನೆ, ದೇವರನಾಮಗಳನ್ನು –'ವೇದನಾದ ಸಂಗಮ' ಎಂಬ ಹೆಸರಿನಿಂದ ಶರ್ಮಾ ದಂಪತಿಗಳು ಹೊರತಂದು, ವೇದ ನಾದಗಳನ್ನು ಹೇಳುವವರಿಗೆ ಮಾತ್ರವಲ್ಲದೆ ಕೇಳುವವರಿಗೂ 'ಶ್ರುತಂ ಹರತಿ ಪಾಪಾನಿ ತಥಾ ಆರೋಗ್ಯಂ ಪ್ರಯಚ್ಛತಿ' ಎಂಬ ಸ್ಮೃತಿ ವಾಕ್ಯದಂತೆ ಆರೋಗ್ಯ ಹಾಗೂ ಯಶಸ್ಸನ್ನು ಪಡೆಯುವ ಉತ್ತಮ ಅವಕಾಶವನ್ನು ಒದಗಿಸಿದ್ದಾರೆ.

ಇದಲ್ಲದೆ ಶೃಂಗೇರಿ ಶಾರದಾಪೀಠ ಸಂಸ್ಥಾನದವರು ಕನ್ನಡ, ತೆಲಗು, ತಮಿಳು, ಇಂಗ್ಲೀಷ್ ಭಾಷೆಗಳಲ್ಲಿ ಬಿಡುಗಡೆ ಮಾಡಿರುವ, ಶಂಕರಾಚಾರ್ಯರ ಜೀವನಚರಿತ್ರೆಯನ್ನು ನಿಖರವಾಗಿ ತಿಳಿಸುವ 'ಸಾಕ್ಷ್ಯಚಿತ್ರ'ದಲ್ಲಿ ಶಂಕರಾಚಾರ್ಯರ ಪಾತ್ರವನ್ನು ಶರ್ಮರು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ. ಹಾಗೂ ಶ್ರೀಮಠದವರು ಸಮಾಜದ ಸಮಸ್ತ ಜನರಿಗೂ ಕಲಿಕೆಗೆ ಅನುಕೂಲವಾಗುವಂತೆ ಹೊರತಂದಿರುವ 'ಶ್ರೀ ಲಲಿತಾಸಹಸ್ರನಾಮ' , 'ಶ್ರೀ ವಿಷ್ಣು ಸಹಸ್ರನಾಮ' ಧ್ವನಿಸುರುಳಿಗಳಲ್ಲೂ ಮತ್ತು ನಿತ್ಯ ಪೂಜೆಗಳಿಗೆ ಅಗತ್ಯವಾಗಿ ಬೇಕಾದ ಮಂತ್ರ ಭಾಗಗಳಾದ ರುದ್ರ, ಚಮಕ, ಪುರುಷಸೂಕ್ತ, ಶ್ರೀಸೂಕ್ತ, ನಾರಾಯಣಸೂಕ್ತ, ದುರ್ಗಾಸೂಕ್ತಗಳಿರುವ ಧ್ವನಿಸುರುಳಿಗಳಲ್ಲೂ ಶರ್ಮರು ತಮ್ಮ ಸ್ಪಷ್ಟ ಹಾಗೂ ಸುಶ್ರಾವ್ಯ ಕಂಠಸಿರಿಯನ್ನು ಒದಗಿಸಿರುತ್ತಾರೆ.

ಅಲ್ಲದೆ ಬೆಂಗಳೂರಿನ ಪ್ರತಿಷ್ಠಿತ ಶ್ರೀ ಸೀತಾರಾಮಾಂಜನೇಯ ವೇದಪಾಠಶಾಲೆಯವರು, ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆದೇಶ ಹಾಗೂ ಸೂಚನೆಯಂತೆ ಕೊಡಲ್ಪಡುವ ಗೌರವ ಸನ್ಮಾನಕ್ಕೆ ೨೦೦೪ರಲ್ಲಿ ಶ್ರೀಯುತ ಶರ್ಮರು **'ವೇದಭೂಷಣ'** ಎಂಬ ಬಿರುದಿನೊಂದಿಗೆ ಭಾಜನರಾಗಿರುತ್ತಾರೆ ಹಾಗೂ ೨೦೧೨ರಲ್ಲಿ ಶಿವಮೊಗ್ಗ ನಗರದ ವೈದಿಕ ಪರಿಷತ್ ವತಿಯಿಂದಲೂ ಮತ್ತು ದೆಹಲಿಯ ಭಾರತೀಯ ಜ್ಯೋತಿರ್ವಿಜ್ಞಾನ ಸಂಸ್ಥೆಯಿಂದಲೂ ಸನ್ಮಾನಕ್ಕೆ ಭಾಜನರಾಗಿರುತ್ತಾರೆ

ಈ ಎಲ್ಲಾ ಸಾಹಸ ಕೆಲಸಗಳಿಗೆ ಪ್ರೇರಕ ಶಕ್ತಿ ಯಾವುದೋ ನಾನರಿಯೇ? ಬಹುಶ: ಈ ಪುಸ್ತಕ ಕಾರ್ಯಗಳಲ್ಲಿ ಕಂಡುಬರುವ ಗುರು ನಿಷ್ಠೆ-ಭಕ್ತಿಗಳೇ ಆಂತರ್ಯದ ಶಕ್ತಿಯಾಗಿರಬೇಕು. ಇವನ್ನೆಲ್ಲಾ ಮಾಡುತ್ತಿರುವುದು ಸಾಹಸೀ, ತರುಣ, ಜಾಣ ವೇ.ಬ್ರ.ಶ್ರೀ. ಎ.ಸಿ. ಶಕ್ತಿಧರ ಶರ್ಮ. ಇವರ ಶ್ರಮಕ್ಕೆ ಬೆಲೆ ಕಟ್ಟಲಾಗೆ. ಈ ಕಾರ್ಯಕ್ಕೆ ಶ್ರೀಮಾನ್ ಚಂದ್ರಶೇಖರಶರ್ಮಾರವರು ಅಗ್ರಹಾರ (ಶ್ರೀಯುತ ಶರ್ಮರ ತಂದೆಯವರು), ಶ್ರೀಮಾನ್ ವೇಂಕಟೇಶ ಅವಧಾನಿಗಳು ರಾಮನಾಥಪುರ ಇವರುಗಳ ಸಲಹೆ ಪಡೆದಿದ್ದಾರೆ. ಅಲ್ಲದೇ ಮತ್ತೂರಿನ ತರುಣ ಅಧ್ಯಯ್ಯಿ ಶ್ರೀಮಾನ್ ಶಿವಕುಮಾರ ಅವಧಾನಿ, ತರುಣ ವಿದ್ವಾನ್ ಶ್ರೀಮಾನ್ ಕಿರಣ ಅವಧಾನಿ ಇವರುಗಳ ಪ್ರೀತಿ, ವಾತ್ಸಲ್ಯ ಯುಕ್ತ ಅಮೂಲ್ಯ ಮಾರ್ಗದರ್ಶನ ಪಡೆದಿದ್ದಾರೆ.

ಪುರೋಹಿತರ ಅಭಾವದಲ್ಲಿ, ಮಂತ್ರಾಧ್ಯಯನ ಆದವರೆಲ್ಲಾ ಈ ಪುಸ್ತಕಗಳ ಸಹಾಯದಿಂದ, ಒದಗಿಬರುವ ಸಂಸ್ಕಾರ ಮಂಗಳ ಕಾರ್ಯಗಳನ್ನು (ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ) ಎಂಬಂತೆ ಶಾಸ್ತ್ರೀಯ ತಿಳುವಳಿಕೆಯನ್ನು ಪಡೆದು ಯಥಾ ವಿಧಿಯಂತೆ ನಡೆಸಬಹುದಾಗಿದೆ . ಪ್ರತಿಯೊಬ್ಬರ ಮನೆಯಲ್ಲೂ ಈ ಸಂಸ್ಕಾರ ತರಂಗಿಣೀ ಪುಸ್ತಕಗಳಿದ್ದರೆ ಪ್ರತಿ ಮನೆಯಲ್ಲೂ ಒಬ್ಬ ಪುರೋಹಿತರು ಇದ್ದಂತೆ, ಏಕೆಂದರೆ ಕರ್ಮಾಚರಣೆಯ ವಿಚಾರದಲ್ಲಿ, ಪ್ರತಿಯೊಬ್ಬರೂ ಶಾಸ್ತ್ರೀಯ ತಿಳುವಳಿಕೆಯನ್ನು ಹೊಂದುವುದು ಅತ್ಯಂತ ಅವಶ್ಯಕವೂ, ಅಧಿಕಾರಯುತವೂ ಆಗಿದೆ. ಈ ದೃಷ್ಟಿಯಲ್ಲಿ ಈ ಪುಸ್ತಕಗಳು ತ್ರಿಮತಸ್ಥ ಬ್ರಾಹ್ಮಣರಿಗೂ ಅವಶ್ಯ ಸಂಗ್ರಾಹ್ಯವೇ ಆಗಿದೆ.

ಶ್ರೀ ಶಕ್ತಿಧರ ಶರ್ಮರು ಶೃಂಗೇರಿ ಗುರುಪೀಠದಲ್ಲಿ ಇದ್ದುಕೊಂಡು ಅಧ್ಯಯನ ಮಾಡಿದವರು, ಇವರಿಂದ ಇನ್ನೂ ಅನೇಕ ಜನೋಪಕಾರಕ ಪುಸ್ತಕಗಳು ಬರಲೀ ಎಂದು ಆಶೀರ್ವದಿಸುತ್ತೇನೆ.

–ಇತಿ ಶಮ್–

ತಾ–೫–೧–೨೦೧೩

ಸುಪ್ರೀತ ,
ಕ. ನಾ. ಮಾರ್ಕಂಡೇಯ ಅವಧಾನಿ.
ಮತ್ತೂರು ಸಂಸ್ಕೃತ ಗ್ರಾಮ, ಶಿವಮೊಗ್ಗ .

ಪ್ರಸ್ತಾವನೆ

ವಿದ್ವಾನ್, ವೇದಬ್ರಹ್ಮಶ್ರೀ, ಡಾ – ಸುಬ್ರಾಯ ಎ ಭಟ್
ಪ್ರಾಧ್ಯಾಪಕರು, ಮೀಮಾಂಸಾಶಾಸ್ತ್ರ ವಿಭಾಗ,
ರಾಜೀವಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠಂ, ಶೃಂಗೇರಿ.

ಭಾರತೀಯ ಸನಾತನ ವೈದಿಕ ಸಂಸ್ಕೃತಿಯ ಜೀವಾಳವೇ ವೇದಗಳು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ೪ ಪುರುಷಾರ್ಥಗಳಲ್ಲಿ ಮೊದಲಿನ ೩ ಸಾಧನಗಳು ಹಾಗೂ ಕೊನೆಯದಾದ ನಿತ್ಯ ನಿರತಿಶಯ ಸುಖ ಸ್ವರೂಪವಾದ ಮೋಕ್ಷವು ಸಾಧಿಸಲ್ಪಡಬೇಕಾದದ್ದು, ಅದನ್ನು ಸಾಧಿಸಿದಾಗಲೇ ಮನುಷ್ಯ ಜೀವನ ಸಾರ್ಥಕವಾಗುವುದು. ಅದಕ್ಕೆ ಧರ್ಮವೇ ಮೂಲ ಎಂಬುದಾಗಿ ಬೋಧಿಸಿ, ಅವುಗಳ ಸ್ವರೂಪ ಹಾಗೂ ಪ್ರಾಪ್ಯುಪಾಯವನ್ನು ತಿಳಿಸಿ ಮನುಷ್ಯನನ್ನು ಅಧ್ಯಾತ್ಮದೆಡೆಗೆ ಒಯ್ಯುವ ಏಕಮಾತ್ರ ಸಾಧನವಾಗಿರುವುದರಿಂದ ವೇದಗಳು ಪರಮ ಪೂಜನೀಯವಾದವುಗಳು.

ವೇದವಿಹಿತವಾದ ಯಾಗಾದಿ ಕರ್ಮಗಳೇ ಧರ್ಮ. ಧರ್ಮವೇ ಶ್ರೇಯಸ್ಸಾಧನ. ವೇದದಲ್ಲಿ ತಿಳಿಸಿದ ಈ ಯಜ್ಞಯಾಗಾದಿಗಳನ್ನು ಅರ್ಥಜ್ಞಾನ ಸಹಿತವಾಗಿ ಶ್ರದ್ಧೆಯಿಂದ ಕ್ರಮವಾಗಿ ಅನುಷ್ಠಾನ ಮಾಡಿದಾಗ ವಿಹಿತವಾದ ಫಲವನ್ನು ದೊರಕಿಸಿಕೊಡುತ್ತದೆ ಎಂಬುದು ಆರ್ಷ ಸಿದ್ಧಾಂತ.

ವೇದದ ತಾತ್ಪರ್ಯಾರ್ಥವನ್ನೇ ನಿರ್ಣಯಿಸಲು ಹೊರಟ ಪೂರ್ವಮೀಮಾಂಸಾಶಾಸ್ತ್ರದಲ್ಲಿ ಸೂತ್ರಕಾರರಾದ ಜೈಮಿನೀ ಮಹರ್ಷಿಗಳೂ ಸಹ 'ಚೋದನಾ ಲಕ್ಷಣೋಽರ್ಥೋ ಧರ್ಮಃ' ಎಂಬುದಾಗಿ ವೇದದಲ್ಲಿ ತಿಳಿಸಿದ ಶ್ರೇಯಸ್ಸಾಧನೀಭೂತವಾದ ಯಾಗಾದಿಗಳೇ ಧರ್ಮವೆಂದು ತಿಳಿಸಿ, ವೇದದ ತಾತ್ಪರ್ಯಾರ್ಥವನ್ನೇ ಬಹು ವಿಸ್ತಾರವಾಗಿ ವಿಮರ್ಶಿಸಿದ್ದಾರೆ. ಮೀಮಾಂಸಾ

ಭಾಷ್ಯಕಾರರಾದ ಶಖರ ಸ್ವಾಮಿಗಳೂ ಸಹ 'ಸ ಹಿ ನಿಶ್ರೇಯಸೇನ ಪುರುಷಂ ಸಂಯುನಕ್ತೀತಿ ಪ್ರತಿಜಾನೀಮಹೇ' ಎಂಬುದಾಗಿ ಧರ್ಮವೇ ಐಹಿಕ ಮತ್ತು ಆಮುಷ್ಮಿಕ ಸುಖ ಸಾಧನವೆಂದು ಸ್ಪಷ್ಪಪಡಿಸಿದ್ದಾರೆ.

ವೇದದಲ್ಲಿ ವಿಹಿತವಾದ ಧರ್ಮವೆಂಬುದಾಗಿ ಪ್ರಚುರಪಡಿಸಿದ ಯಾಗಾದಿ ರೂಪವಾದ ಕರ್ಮಗಳನ್ನು ಪ್ರಧಾನವಾಗಿ ನಿತ್ಯ, ನೈಮಿತ್ತಿಕ, ಮತ್ತು ಕಾಮ್ಯವೆಂಬುದಾಗಿ ೩ ವಿಧವಾಗಿ ವಿಭಾಗಿಸಿದ್ದಾರೆ. ರಾಜಾಜ್ಞೆಯಂತೆ ನಿಯಮೇನ ಮಾಡಲೇಬೇಕಾದದ್ದಾಗಿ ವಿಹಿತವಾದ ಕರ್ಮಗಳು – ನಿತ್ಯಕರ್ಮಗಳು. ಉದಾ– ಸಂಧ್ಯಾವಂದನೆ, ಔಪಾಸನೆ, ಅಗ್ನಿಹೋತ್ರಾದಿಗಳು. ಪಾಪಕ್ಷಯವೇ ಈ ಕರ್ಮಗಳ ಫಲ.

ನಿಮಿತ್ತ ಒದಗಿದಾಗ ನಿಯಮೇನ ಮಾಡಲೇಬೇಕಾದ ಕರ್ಮಗಳು – ನೈಮಿತ್ತಿಕ ಕರ್ಮಗಳು. ಉದಾ– ಗ್ರಹಣ ಪ್ರಯುಕ್ತವಾದ ಸ್ನಾನಾದಿಗಳು, ಮಗು ಹುಟ್ಟಿದಾಗ ಮಾಡಬೇಕಾದ ವೈಶ್ವಾನರೇಷ್ಟಿ ಮೊದಲಾದ ಶ್ರೌತಸ್ಮಾರ್ತ ಕರ್ಮಗಳು, ಈ ಕರ್ಮಗಳಿಗೂ ಪಾಪಕ್ಷಯವೇ ಫಲ.

ಪಶುಪುತ್ರಾದಿ ಐಶ್ವರ್ಯ ಕಾಮನೆಯಿಂದ ಅನುಷ್ಠಾನ ಮಾಡುವ ಕರ್ಮಗಳು – ಕಾಮ್ಯಕರ್ಮಗಳು. ಉದಾ– ಸೋಮಯಾಗ, ಕಾರೀರೇಷ್ಟಿ, ಪೌಷ್ಟಿಕಾದಿ ಸೈತ್ಯುಕ್ತಕರ್ಮಗಳು, ಇವುಗಳಿಗೆ ಆಯಾವಿಧಿ ವಾಕ್ಯಗಳಲ್ಲಿ ಅಥವಾ ಪ್ರಕರಣಗಳಲ್ಲಿ ತಿಳಿಸಿದ ಸ್ವರ್ಗಾದಿಗಳೇ ಫಲ.

ಈ ಎಲ್ಲವನ್ನೂ ಅರ್ಥಜ್ಞಾನ ಪುರಸ್ಸರ, ವಿಧಿವತ್ತಾಗಿ ಆಚರಿಸಿದಾಗಲೇ ವಿಹಿತವಾದ ಫಲ ದೊರಕುವುದು. ಆಗಲೇ ಅಧ್ಯಯನ ಮಾಡಿದ ವೇದವು ಸಫಲವಾಗುವುದು. ಅಂದರೆ ಮೊದಲು ವೇದಾಧ್ಯಯನ, ನಂತರ ಅಧ್ಯಯನ ಮಾಡಿದ ವೇದದ ಅರ್ಥಜ್ಞಾನ, ಅರ್ಥಜ್ಞಾನ ತಿಳಿದು ಕರ್ಮಾನುಷ್ಠಾನ, ಅದರಿಂದ ಪಾಪಕ್ಷಯ, ಸ್ವರ್ಗಾದಿ ಸಿದ್ಧಿ. ಹಾಗಾಗಿಯೇ ವೇದಗಳ ಅರ್ಥಜ್ಞಾನ, ಉಚ್ಚಾರಣೆ,

ವೇದವಿಹಿತ ಕರ್ಮಾನುಷ್ಠಾನದ ಸ್ವರೂಪ ಪರಿಚಯಾದಿಗಳಿಗೆ ಅನಿವಾರ್ಯವಾದ ವೇದದ ೬ ಅಂಗಗಳನ್ನು ಅಧ್ಯಯನ ಮಾಡಬೇಕೆಂದು, 'ಷಡಂಗೋ ವೇದೋ ಅಧ್ಯೇಯೋ ಜ್ಞೇಯಶ್ಚ' ಇತ್ಯಾದಿ ಶ್ರುತಿಗಳು ತಿಳಿಸುತ್ತಿವೆ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೌತಿಷ, ಕಲ್ಪ ಇವು ವೇದದ ೬ ಅಂಗಗಳು.

ಯಜ್ಞಗಳ ಅನುಷ್ಠಾನ ವಿಧಾನವನ್ನು(ಸ್ವರೂಪ) ತಿಳಿಸುವ ಗ್ರಂಥವೇ ಕಲ್ಪ. ಯಾಗಗಳ ಪ್ರಯೋಗ(ಅನುಷ್ಠಾನ)ವನ್ನೇ ತಿಳಿಸುವುದರಿಂದ ಈ ಗ್ರಂಥಗಳಿಗೂ ಪ್ರಯೋಗ ಗ್ರಂಥಗಳು ಎಂದು ಹೆಸರು ಬಂದಿದೆ. ಸಂಜ್ಞಾ, ಪರಿಭಾಷಾದಿಗಳಿಂದ ಅವುಗಳ(ಯಾಗಗಳ) ಲಕ್ಷಣವನ್ನು ತಿಳಿಸುವ ಸೂತ್ರಗಳಿಗೆ ಕಲ್ಪಸೂತ್ರಗಳು ಎಂದು ಹೆಸರು.

ಈ ಕಲ್ಪಗಳು ಬೇರೆ ಬೇರೆ ವೇದ ಶಾಖೆಗಳಲ್ಲಿ ಬೇರೆ ಬೇರೆಯಾಗಿವೆ, ಹಾಗೆಯೇ ಒಂದೇ ಶಾಖೆಯಲ್ಲೂ ಅನೇಕ ಸೂತ್ರಗಳು ಕಾಣಸಿಗುತ್ತವೆ. ಋಕ್ ಶಾಖಾನುಯಾಯಿಗಳಿಗೆ – ಆಶ್ವಲಾಯನ ಕಲ್ಪಸೂತ್ರ, ಸಾಮವೇದಿಗಳಿಗೆ – ದ್ರಾಹ್ಯಾಯಣ ಸೂತ್ರ, ಯಜುರ್ವೇದದಲ್ಲೂ ಶುಕ್ಲ ಯಜುಶ್ಶಾಖೆಯಲ್ಲಿ ಭಿನ್ನ ಸೂತ್ರಗಳು ಹಾಗೂ ತೈತ್ತಿರೀಯ ಯಜುಶ್ಶಾಖೆಯಲ್ಲಿ – ಬೋಧಾಯನೀಯ, ಆಪಸ್ತಂಬೀಯ, ಹಿರಣ್ಯಕೇಶೀಯ ಕಲ್ಪಸೂತ್ರಗಳು ಈಗ ಪ್ರಚಲಿತವಿರುವ ಮುಖ್ಯ ಕಲ್ಪಸೂತ್ರಗಳು. ಈ ಕಲ್ಪಸೂತ್ರಗಳ ಪರಂಪರೆಯನ್ನೇ ಗೋತ್ರಪ್ರವರವನ್ನು ಉಚ್ಚರಿಸುವಾಗ ಹೇಳುವ ಸೂತ್ರಗಳು ತಿಳಿಸುತ್ತವೆ.

ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮಸೂತ್ರ ಮತ್ತು ಯಜುರ್ವೇದ ಕಲ್ಪದಲ್ಲಿ ಶುಲ್ಬಸೂತ್ರ – ಇವುಗಳ ಸಮುದಾಯವನ್ನೇ ಕಲ್ಪಸೂತ್ರ ಎಂದು ಕರೆದಿದ್ದಾರೆ. ಶ್ರೌತಸೂತ್ರಗಳು, ಸಾಕ್ಷಾತ್ ಶ್ರೌತಕರ್ಮಗಳ ಅನುಷ್ಠಾನ ಪ್ರಕಾರವನ್ನು ಮತ್ತು ಸಂಬಂಧಿಸಿದ ಮಂತ್ರವಿನಿಯೋಗಾದಿಗಳನ್ನು ತಿಳಿಸುತ್ತವೆ. ಗೃಹ್ಯಸೂತ್ರಗಳು, ಗೃಹಸ್ಥರು ಅನುಷ್ಠಾನಮಾಡಬೇಕಾದ ಯಾಗಗಳನ್ನು, ಔಪಾಸನಾಗ್ನಿಯಲ್ಲಿ ಮಾಡುವ

ಕರ್ಮಗಳನ್ನು, ಮತ್ತು ಉಪನಯನವೇ ಮೊದಲಾದ ಸಂಸ್ಕಾರಗಳ ಅನುಷ್ಠಾನ ಕ್ರಮವನ್ನು ತಿಳಿಸುತ್ತವೆ. ಧರ್ಮಸೂತ್ರಗಳು, ಯಜಮಾನ–ಋತ್ವಿಜರುಗಳಿಗೆ ಸಂಬಂಧಿಸಿದ ನಿಯಮಗಳನ್ನು, ಬ್ರಾಹ್ಮಣ–ಕ್ಷತ್ರಿಯಾದಿ ವರ್ಣಗಳಿಗೆ ಸಂಬಂಧಿಸಿದ ಧರ್ಮಪಾಲನೆಯ ಬಗ್ಗೆ, ಬ್ರಹ್ಮಚರ್ಯಾದಿ ಆಶ್ರಮ ಧರ್ಮಗಳು ಮತ್ತು ಸಮಸ್ತ ಮನುಕುಲಕ್ಕೆ ಸಂಬಂಧಿಸಿದ ಎಲ್ಲಾ ಸಾಮಾನ್ಯಧರ್ಮ ವಿಚಾರಗಳನ್ನೂ ತಿಳಿಸುತ್ತವೆ. ಶುಲ್ಬಸೂತ್ರಗಳು, ಯಜ್ಞಾನುಷ್ಠಾನಕ್ಕೆ ಉಪಯುಕ್ತವಾದ ಯಜ್ಞಶಾಲಾ ನಿರ್ಮಾಣ ಸಂಬಂಧಿ ವಿಚಾರಗಳನ್ನು ತಿಳಿಸುತ್ತವೆ. ಹೀಗೆ ಈ ಎಲ್ಲಾ ವಿಭಾಗಗಳೂ ಸಾಕ್ಷಾತ್ತಾಗಿ, ಅಥವಾ ಪರಂಪರೆಯಿಂದ ಯಜ್ಞಗಳ ಅನುಷ್ಠಾನದ ಸಂಬಂಧವನ್ನು ಹೊಂದಿವೆ, ಹಾಗಾಗಿಯೇ ಇವುಗಳಿಗೆ ಏಕವಾಕ್ಯತೆ ಇದೆ.

ಆಪಸ್ತಂಬ ಕಲ್ಪಸೂತ್ರದಲ್ಲಿ ಹೇಳುವುದಿದ್ದರೆ – ಮೊದಲನೇ ಪ್ರಶ್ನೇ ಸರ್ವಕರ್ಮಸಾಧಾರಣ ಪರಿಭಾಷಾ ಸೂತ್ರಗಳು. ಎರಡರಿಂದ ಇಪ್ಪತ್ತನಾಲ್ಕನೇ ಪ್ರಶ್ನೆಗಳವರೆಗೆ(೨೩ ಪ್ರಶ್ನೆಗಳು) ಶ್ರೌತಸೂತ್ರಗಳು. ಮುಂದಿನ ೩ ಪ್ರಶ್ನೆಗಳು(೨೫,೨೬,೨೭) ಗೃಹ್ಯಸೂತ್ರಗಳು. ಈ ಮೂರರಲ್ಲಿ ಕೊನೆಯದು(೨೭ನೇ ಪ್ರಶ್ನೆ) ಪಿತೃಮೇಧ ಸೂತ್ರಗಳು. ೨೮,೨೯ ನೇ ಪ್ರಶ್ನೆಗಳು ಧರ್ಮಸೂತ್ರಗಳು. ೩೦ನೇ ಪ್ರಶ್ನೆ ಶುಲ್ಬಸೂತ್ರಗಳು. ಹೀಗೆ ಒಟ್ಟಿಗೆ ೩೦ ಪ್ರಶ್ನಾತ್ಮಕವಾದದ್ದು ಆಪಸ್ತಂಬ ಕಲ್ಪಸೂತ್ರ.

ಅವುಗಳಲ್ಲಿ ಸ್ಮಾರ್ತಕರ್ಮಗಳೂ ಮತ್ತು ಏಕಾಗ್ನಿಸಾಧ್ಯವಾದ (**ಔಪಾಸನಾಗ್ನಿಯಲ್ಲಿ ನಿರ್ವಹಿಸುವ**), ಉಪನಯನಾದಿ ಸಂಸ್ಕಾರಗಳ ಪ್ರಯೋಗವನ್ನು, ಸಂಬಂಧಿಸಿದ ಸೂತ್ರ ಮತ್ತು ಕಪರ್ದಿಕಾರಿಕೆಗಳನ್ನು ಸಂಗ್ರಹಿಸಿ ಕನ್ನಡದಲ್ಲಿ ಭಾವಾನುವಾದವನ್ನು ತಿಳಿಸಿ, ಸಂಸ್ಕಾರ ತರಂಗಿಣೀ ಎಂಬ ಹೆಸರಿನಲ್ಲಿ ಗ್ರಂಥವನ್ನು ಪ್ರಕಟಿಸಿ ಹೊರತರುತ್ತಿದ್ದಾರೆ ನಮ್ಮ ವೇದಬ್ರಹ್ಮ ಶ್ರೀಯುತ ಶಕ್ತಿಧರ ಶರ್ಮರು. ಸ್ಮಾರ್ತಕರ್ಮಗಳಿಗೆಲ್ಲಾ ಮೂಲ ಆಧಾರ ಗೃಹ್ಯಸೂತ್ರಗಳು. ಕಪರ್ದಿಸ್ವಾಮಿಗಳು

ಕಾರಿಕಾರೂಪದಲ್ಲಿ ಪ್ರಯೋಗವನ್ನು ತಿಳಿಸಿದ್ದಾರೆ. ಇವುಗಳ ಆಧಾರದ ಮೇಲೆ ವಿಧಿವತ್ತಾಗಿ ಪ್ರಯೋಗವನ್ನೂ ತಿಳಿಸಿ ಅನುಷ್ಠಾನ ಮಾಡುವ ಕ್ರಮವನ್ನೂ ಈ ಗ್ರಂಥಗಳಲ್ಲಿ ತಿಳಿಸಿಕೊಟ್ಟಿದ್ದಾರೆ.

ಆಪಸ್ತಂಬ ಪ್ರಯೋಗ ಗ್ರಂಥವು ಬೇರೆ ಬೇರೆ ವಿದ್ವಾಂಸರಿಂದ ಅನೇಕ ಪ್ರಕಾಶನಗಳಲ್ಲಿ ಉಪಲಬ್ಧವಿದ್ದರೂ, ಆಯಾ ಪ್ರಕರಣಗಳಿಗೆ ಸಂಬಂಧಿಸಿದ ಕಾರಿಕೆ, ಮೂಲ ಗೃಹ್ಯಸೂತ್ರ ಸಹಿತವಾಗಿ ಪ್ರಕಟಿತವಾದ ಪ್ರಯೋಗಗ್ರಂಥ ಇಲ್ಲವೇಇಲ್ಲ ಎಂಬುವಷ್ಟು ಅತಿವಿರಳ. ಇದೇ ಈ ಗ್ರಂಥಮಾಲಿಕೆಯ ವಿಶೇಷ ಲಕ್ಷಣವಾಗಿದೆ. ಗೃಹ್ಯಸೂತ್ರಗಳ ಅಧ್ಯಯನ ಕ್ರಮವೂ ಈಗ ನಮ್ಮಲ್ಲಿಲ್ಲ, ಹೀಗಿರುವಾಗ ಶ್ರೀಯುತ ಶರ್ಮರು ಈ ವಿಶಿಷ್ಟವಾದ ಪ್ರಕಾಶನಕ್ಕೆ ವಹಿಸಿದ ಶ್ರಮವು ಅತ್ಯಮೂಲ್ಯ.

ಇದು ವೈದಿಕ ಸಮಾಜಕ್ಕೆ ತುಂಬಾ ಉಪಯುಕ್ತವಾದದ್ದು. ವೈದಿಕರಿಗೆ, ಪ್ರಯೋಗದ ಮೂಲಪ್ರಮಾಣವಾದ ಸೂತ್ರ, ಕಾರಿಕೆಗಳನ್ನು ತಿಳಿದುಕೊಳ್ಳಲು ಆಸಕ್ತರಾದ ಜಿಜ್ಞಾಸುಗಳಿಗೆ, ವಿದ್ಯಾರ್ಥಿಗಳಿಗೆ, ಸಮಸ್ತ ಆಸ್ತಿಕ ಬಂಧುಗಳಿಗೆ ಈ ಗ್ರಂಥಗಳು ತುಂಬಾ ಉಪಯುಕ್ತವಾಗಿವೆ. ಕರ್ಮಜ್ಞಾನವನ್ನು ಹೊಂದಿ, ಅನುಷ್ಠಾನವನ್ನು ಮಾಡಿದಾಗ ಮಾತ್ರ ಆ ವೈದಿಕ ಕರ್ಮ ವಿಶೇಷಫಲವನ್ನೇ ಕೊಡುವುದೆಂದು ಶಾಸ್ತ್ರಗಳೇ ತಿಳಿಸುತ್ತಿವೆ.

ಇವರಿಂದ ಇನ್ನೂ ಹೆಚ್ಚಿನ ಸನಾತನ ಪರಂಪರೆಯ ಸೇವೆ ನಡೆಯಲು, ಇವರಿಗೆ ಹಾಗೂ ಈ ವಿಷಯದಲ್ಲಿ ಅಮೂಲ್ಯ ಮಾರ್ಗದರ್ಶನ ನೀಡುತ್ತಿರುವ ಮಹನೀಯರಾದ ವಿದ್ವಾನ್, ಶ್ರೀಮಾನ್ ಶಿವಕುಮಾರ ಅವಧಾನಿಗಳಿಗೂ ಮತ್ತು ವಿದ್ವಾನ್, ಶ್ರೀಮಾನ್ ಕಿರಣ ಅವಧಾನಿಗಳಿಗೂ ಆಯುಷ್ಯ, ಆರೋಗ್ಯ ಮತ್ತು ಭಾಗ್ಯವನ್ನು ಅನುಗ್ರಹಿಸಲೆಂದು ವೇದಮಾತೆಯಾದ ಶಾರದಾಂಬೆ ಮತ್ತು ಜಗದ್ಗುರುಗಳ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇನೆ.

ಚಿಂತನ .....

ಈ ಎಲ್ಲ ವಿಚಾರಗಳಿಗೂ ಆಧಾರ – ಕರ್ಮಭಾಗದ ಪಿತೃಗಳಾದ ಋಷಿಗಳೇ ಹೊರತು, ದೇಹಭಾವದ ಅಂದರೆ ಶರೀರವನ್ನು ಕೊಟ್ಟಂತಹ ಪಿತೃಗಳಲ್ಲ. ಏಕೆಂದರೆ ನಮಗಿಂತ ಮೊದಲು ಭೂಮಿಗೆ ಬಂದಿರುತ್ತಾರಾದ್ದರಿಂದ ಹಾಗೂ ನಮ್ಮ ದೇಹವು ಭೂಮಿಗೆ ಬರಲು ಅವಕಾಶ ಮಾಡಿರುತ್ತಾರಾದ್ದರಿಂದ ಅವರು ನಮಗೆ ಹಿರಿಯರು, ಪಿತೃಗಳು, ಆದರಣೀಯರಾಗಿರುತ್ತಾರೆಯೇ ವಿನ: ಅವರೆಂದಿಗೂ ಅತ್ಯಂತ ಸೂಕ್ಷ್ಮವಾದ, ಗೂಢವಾದ, ವಿಸ್ತಾರವಾದ ಜ್ಞಾನದ ರಾಶಿಯ ಕರ್ತೃವಾಗಲೂ, ಆಧಾರವಾಗಲೂ ಸಾಧ್ಯವಿಲ್ಲ, ಏಕೆಂದರೆ ಅವರುಗಳೂ ಸಹ ಅವರವರ ಜನ್ಮಾಂತರದ ಪಾಪಪುಣ್ಯಗಳ ಫಲಗಳನ್ನು ಅನುಭವಿಸಲು ಬಂದಿರುವವರೇ ಆಗಿರುತ್ತಾರೆ. ಹಾಗಾಗಿಯೇ ನಾವುಗಳು ನಮಸ್ಕಾರ ಮಾಡುವಾಗ ಹೇಳುವ ಪ್ರವರದಲ್ಲಿ, ಜನ್ಮಕ್ಕೆ ಕಾರಣರಾದ ತಂದೆ, ಅಜ್ಜ, ಮುತ್ತಜ್ಜರ ಹೆಸರುಗಳನ್ನು ಹೇಳುವುದಿಲ್ಲ!, ಬದಲಿಗೆ ಕರ್ಮಭಾಗದ ಪಿತೃಗಳಾದ, ನಮ್ಮ ಪರಂಪರೆಯ ಮಹರ್ಷಿಗಳ ಹೆಸರುಗಳನ್ನು(ನಾವು ಅವರ ಪರಂಪರೆಯವರು ಎಂದು) ಹೇಳುವುದು. ಹಾಗಾಗಿ ಇಂದು ನಾವುಗಳು ನೋಡುತ್ತಿರುವ, ಹಾಗೆಯೇ ಕೇಳುತ್ತಿರುವ ಅನೇಕ ರೀತಿಯ ಸಮುದಾಯಗಳ ಭಿನ್ನ ಭಿನ್ನ ನಡವಳಿಕೆಗಳನ್ನು 'ಇದೇ ನಮ್ಮ ಸಂಪ್ರದಾಯ – ಆಚಾರ' ಎಂಬ ಬ್ರಹ್ಮಾಸ್ತ್ರದಂತಹ ವಾಕ್ಯಗಳಿಂದ ಅವರುಗಳು ಮಾಡಿಕೊಳ್ಳುವ ಯಾವ ಸಮರ್ಥನೆಗೂ ಬೆಲೆಯಿಲ್ಲ.

ಏಕೆಂದರೆ, ಕರ್ಮಭಾಗದ ಪಿತೃಗಳಾದ, ಸಹಸ್ರ ಸಹಸ್ರ ವರ್ಷಗಳು ಭಗವಂತನನ್ನು ಧ್ಯಾನಿಸಿ, ಮಂತ್ರದ್ರಷ್ಟಾರರಾದ ಋಷಿಪುಂಗವರು ಶಾಸ್ತ್ರಗ್ರಂಥಗಳನ್ನು ಭಗವಂತನ ಸೂಚನೆಯಂತೆ ರಚಿಸಿ, ಸಮಸ್ತ ಲೋಕಕ್ಕೆ ಏನನ್ನು ಆದೇಶಿಸಿ ಉಪದೇಶಿಸಿದ್ದಾರೋ ಆ ನಡವಳಿಕೆಗಳನ್ನು, ಆ ನಿಯಮಗಳನ್ನು ಮನುಷ್ಯರು ತಲತಲಾಂತರ ವರ್ಷಗಳಿಂದ ಅವಿಚ್ಛಿನ್ನವಾಗಿ ಚಾಚೂತಪ್ಪದೆ ಅನುಸರಿಸುವಂತಹ ಪ್ರಕ್ರಿಯೆಗೇ – ಅಂತಹ ವ್ಯವಸ್ಥಿತವಾದ ನಡವಳಿಕೆಗೇ **ಸಂಪ್ರದಾಯ – ಆಚಾರ** ಎಂದು ಹೆಸರೇ ಹೊರತು, ನಾವು ನೀವು ಮಾಡುವಂತಹ, ಆಚರಿಸುವಂತಹ,

ಶಾಸ್ತ್ರಗಳಲ್ಲಿಲ್ಲದಿರುವ, ಶಾಸ್ತ್ರಗಳಿಗೆ ಪೂರಕವಲ್ಲದ ಹಾಗೂ ಶಾಸ್ತ್ರವಿರೋಧವಾದ ಯಾವ ಕ್ರಿಯೆಗಳಿಗೂ ಸಂಪ್ರದಾಯ ಎಂದು ಹೇಳಲು ಬರುವುದಿಲ್ಲ!!. ಭಗವಂತನು ತನ್ನ ಮೂಲಕ ರಚಿತವಾಗಿರುವ ಶಾಸ್ತ್ರಗಳನ್ನು ಕೇವಲ ಅನುಸರಿಸಲು ಮಾತ್ರ ಮನುಷ್ಯರಿಗೆ ಅವಕಾಶವನ್ನು ಕೊಟ್ಟಿದ್ದಾನೆಯೇ ಹೊರತು ಅದನ್ನು ಮೀರಲು ಅವಕಾಶ ಕೊಟ್ಟಿಲ್ಲ. ಹಾಗಾಗಿಯೇ ಗೀತೆಯಲ್ಲಿ ಕೃಷ್ಣನು – ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ । ಜ್ಞಾತ್ವಾ ಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥ ಎಂದು ಹೇಳಿರುವುದು. ಹಾಗೆಯೇ,

ವೇದೋಕ್ತ: ಪ್ರಥಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರ: । ಶಿಷ್ಟಾಚಾರ ಸ್ತೃತೀಯಸ್ತು ತ್ರಿವಿಧಂ ಧರ್ಮಲಕ್ಷಣಂ ॥

ಅಂದರೆ – ವೇದಗಳಲ್ಲಿ ಹೇಳಿದ ಧರ್ಮವೇ ಮುಖ್ಯ, ಅದಕ್ಕೇ ಮೊದಲ ಪ್ರಾಶಸ್ತ್ಯ । ಧರ್ಮಶಾಸ್ತ್ರಗಳಲ್ಲಿ ಹೇಳಿರುವುದಕ್ಕೆ ೨ನೇ ಆದ್ಯತೆ । ಶಿಷ್ಟಾಚಾರಕ್ಕೆ ೩ನೇ ಆದ್ಯತೆ, ಅದೂ ಶ್ರುತಿ, ಸ್ಮೃತಿ, ಪುರಾಣಾದಿಶಾಸ್ತ್ರಗಳು ಒಪ್ಪುವಂತಹ(ವಿರೋಧವಲ್ಲದ) ಶಿಷ್ಟಾಚಾರಕ್ಕೆ ೩ನೇ ಆದ್ಯತೆ ॥

ಮತ್ತೂ,

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ । ಲೋಚನಾಭ್ಯಾಂ ವಿಹೀನಸ್ಯ ದರ್ಪಣ: ಕಿಂ ಕರಿಷ್ಯತಿ ॥

ಅಂದರೆ, ಯಾವಾತನಿಗೆ ಸ್ವಯಂ ಪ್ರಜ್ಞೆ ಇರುವುದಿಲ್ಲವೋ, ಅವನಿಗೆ ಶಾಸ್ತ್ರವು ಏನನ್ನು ತಾನೇ ಮಾಡುತ್ತದೆ. ೨ ಕಣ್ಣುಗಳೂ ಇಲ್ಲದವನಿಗೆ ಕನ್ನಡಿಯು ತಾನೇ ಏನನ್ನು ಮಾಡುತ್ತದೆ. ಮನುಷ್ಯನಿಗೆ ಶಾಸ್ತ್ರಜ್ಞಾನವು ಅತ್ಯವಶ್ಯಕ, ಸ್ವಂತ ಬುದ್ಧಿಯಿಂದ ಶಾಸ್ತ್ರವನ್ನು ವಿವೇಚಿಸಿ, ಮುಕ್ತವಾಗಿ ಒಪ್ಪಿಕೊಳ್ಳುವಂತಹ ಮನೋಧರ್ಮವನ್ನು ಬೆಳಸಿಕೊಳ್ಳಬೇಕು. ಶಾಸ್ತ್ರಗಳು ಮನುಷ್ಯರಿಗೆ ಒಳಿತನ್ನು ಮಾಡುವುದಕ್ಕಾಗಿಯೇ ಹೊರಟಿವೆ. ಶಾಸ್ತ್ರಗ್ರಂಥಗಳು ಋಷಿಗಳ ತಪಸ್ಸಿನ ಫಲರೂಪಗಳು. ಮುಮುಕ್ಷುಗಳಿಗೆ ಇವು ದಾರಿದೀಪಗಳಾಗಿವೆ. ಮೋಕ್ಷವು ಒಂದೆರಡು ಜನ್ಮಗಳಲ್ಲಿ ಸಿದ್ಧಿಸುವಂತಹದ್ದಲ್ಲ, ಮನುಷ್ಯನು ಅದನ್ನು ಪಡೆಯಲು ಪ್ರತಿಜನ್ಮದಲ್ಲಿಯೂ ಪ್ರಯತ್ನಶೀಲನಾಗಿರಬೇಕು.

ಹೀಗೆ ಪ್ರಯತ್ನಶೀಲನಾಗಬೇಕಾದರೆ ಶಾಸ್ತ್ರಗಳು ಅತ್ಯವಶ್ಯಕ. ಅವುಗಳನ್ನು ಧಿಕ್ಕರಿಸಿದರೆ, ಕುರುಡನು ಕನ್ನಡಿಯನ್ನು ತಿರಸ್ಕರಿಸಿದಂತೆ ಆಗುತ್ತದೆ. ಸರ್ವಸ್ಯ ಲೋಚನಂ ಶಾಸ್ತ್ರಂ – ಎನ್ನುವಂತೆ ನಮ್ಮ ಬದುಕಿನ ಸಾರ್ಥಕತೆಗೆ ಶಾಸ್ತ್ರವೆಂಬ ಕಣ್ಣು ಬೇಕು, ಅದಿಲ್ಲದಿದ್ದರೆ ಅವನು ಕುರುಡನೇ ಸರಿ.

ಕೊನೆಯದಾಗಿ

ಅವಶ್ಯಂ ಪಿತರಾಚಾರಂ!, ಹೌದು ಕರ್ಮಮಾರ್ಗದ ವಿಷಯದಲ್ಲಿ ಅವಶ್ಯವಾಗಿ ನಮ್ಮ ಪಿತೃಗಳ ಆಚಾರವನ್ನು, ನಡವಳಿಕೆಗಳನ್ನು ಅನುಸರಿಸಬೇಕು, ಅದೇ ಸಂಪ್ರದಾಯ–ಆಚಾರ. ಆದರೆ ಯಾವ ಪಿತೃಗಳ?, ಅಂದರೆ ಕರ್ಮಪಿತೃಗಳಾದ ಋಷಿಗಳ ವಚನಗಳನ್ನು ಮೊದಲು ಅಧ್ಯಯನ ಮಾಡಿ, ಹಾಗೆಯೇ ಅರ್ಥಜ್ಞಾನ ತಿಳಿದು, ನಂತರ ನಿಷ್ಕಾಮವಾಗಿ ಕರ್ಮಾಚರಣೆಯನ್ನು ಮಾಡಿದರೆ, ಅದರಿಂದ ಚಿತ್ತಶುದ್ಧಿ, ತನ್ಮೂಲಕ ಬ್ರಹ್ಮಜ್ಞಾನ(ಸಚ್ಚಿದಾನಂದ ಸ್ವರೂಪ) ಪ್ರಾಪ್ತಿಯಾಗುತ್ತದೆ.

ಪ್ರಸ್ತುತ, ಈ ಸಂಚಿಕೆಯ ಉಪನಯನ ಪ್ರಕರಣದಲ್ಲಿ ಗೋಪೀಚಂದನದ ವಿಷಯ – ಉದಕಶಾಂತಿಯ ವಿಷಯ – ಗಾಯತ್ರೀಮಂತ್ರದ ಉಪದೇಶದ ಸಮಯದಲ್ಲಿ ಮಾಡುವ ಆಚಾರ್ಯಪೂಜೆಯ ವಿಷಯ – ವಟುವು ಕೇಳುವ ಭಿಕ್ಷೆಯ ವಿಷಯ – ದಂಡ ಧಾರಣೆಯ(ಕೋಲಿನ) ವಿಷಯಗಳ ಬಗ್ಗೆ ವಿಸ್ತಾರವಾದ ಹಾಗೂ ಸ್ಪಷ್ಟವಾದ ವಿಮರ್ಶೆಗಳನ್ನು ಮಾಡಲಾಗಿದ್ದು, ಓದುಗರು ಅವುಗಳನ್ನು ತಪ್ಪದೇ ಗಮನಿಸಬೇಕೆಂದು ವಿನಂತಿಸುತ್ತೇವೆ.

ವೇದಬ್ರಹ್ಮ ಶ್ರೀ ಎ.ಸಿ ಶಕ್ತಿಧರ ಶರ್ಮಾ.

1. ಚೂಡಾಕರ್ಮ – ಕಪರ್ದಿಕಾರಿಕಾ

ನಾಮಾದಿ ನಾಂದೀಕರಣಂ ಪುಣ್ಯಾಹಂ ದ್ವಿಜ ಭೋಜನಂ । ರಕ್ಷಾಬಂಧನಂ ಅನ್ನಾದಿ ಚೌಲಾದ್ಯಂಕುರಮೇವ ಚ । ಗರ್ಭೇಮಾತುಃ ಕುಮಾರಸ್ಯ ನ ಕುರ್ಯಾತ್ ಚೌಲ ಕರ್ಮಣಿ । ಪಂಚಮಾಸಾದಧಃ ಕುರ್ಯಾತ್ ಅತ ಊರ್ಧ್ವಂ ನ ಕಾರಯೇತ್ । ಪೂರ್ಣೆತೇ ಪಂಚಮೇ ಮಾಸಿ ತತಃ ಕಾಂತಾತು ಗರ್ಭಿಣೀ । ತತ್ಪೂರ್ವೇಷು ಚ ಮಾಸೇಷು ಗುರ್ವಿಣೀತ್ಯಭಿಧೀಯತೇ । ಗರ್ಭಿಣೀ ನಾಮ ಸಾ ಪ್ರೋಕ್ತಾ ಚೂಡಾಕರ್ಮ ನ ಕಾರಯೇತ್ । ಯದಿ ವಾ ಗರ್ಭಿಣೀ ಕುರ್ಯಾತ್ ನ ಕುರ್ಯಾತ್ ಮೌಂಜೀ ಬಂಧನಂ । ಪ್ರಧಾನಾಹುತಯೋಷ್ಟಾತ್ರ ಧಾತಾ ದದಾತು –, ಯಸ್ತ್ವಾ ಹೃದಾದಿಭಿಃ— । ತತೋ ಜಯಾದಿಕಂ ಕುರ್ಯಾತ್ ಕೇಶ ಸಂಸ್ಕಾರಮಾಚರೇತ್ ॥

ಚೌಲಕ್ಕೆ ಮೊದಲು ನಾಮಕರಣ, ಪುಣ್ಯಾಹ, ನಾಂದೀ, ಬ್ರಾಹ್ಮಣ ಸತ್ಕಾರಗಳನ್ನು ಮಾಡಬೇಕು । ಅನ್ನಪ್ರಾಶನ, ಅಂಕುರಾರೋಪಣ, ರಕ್ಷಾಬಂಧನಗಳನ್ನೂ ಚೌಲಕ್ಕೆ ಮೊದಲು ಮಾಡಬೇಕು । ಮಗುವಿನ ತಾಯಿಯು ಗರ್ಭಿಣಿ ಆಗಿದ್ದಲ್ಲಿ ಚೌಲವನ್ನು ಮಾಡಬಾರದು । ೫ ತಿಂಗಳು ತುಂಬುವುದಕ್ಕೆ ಮುಂಚೆ ಮಾಡಬಹುದು ಅದರ ನಂತರ ಮಾಡಬಾರದು । ೫ ತಿಂಗಳು ತುಂಬಿದನಂತರ ಅವಳು 'ಗರ್ಭಿಣೀ' ಎಂದು ಕರೆಯಲ್ಪಡುತ್ತಾಳೆ । ಮೊದಲ ೫ ತಿಂಗಳುಗಳು ಅವಳು 'ಗುರ್ವಿಣೀ' ಎಂದು ಕರೆಯಲ್ಪಡುತ್ತಾಳೆ । ಗರ್ಭಿಣೀ ಎಂದು ಕರೆಯಲ್ಪಡುವ ಕಾಲಗಳಲ್ಲಿ ಚೂಡಾಕರ್ಮವನ್ನು ಮಾಡಬಾರದು । ಗರ್ಭಿಣಿಯಾಗಿದ್ದ ಕಾಲಗಳಲ್ಲಿ ಮೌಂಜೀಬಂಧನವನ್ನೂ (ಉಪನಯನ) ಸಹ ಮಾಡಬಾರದು । ಈ ಚೌಲಕರ್ಮದಲ್ಲಿ ಧಾತಾ ದದಾತು – ಮತ್ತು ಯಸ್ತ್ವಾಹೃದಾ ಎಂಬ ೮ ಪ್ರಧಾನ ಆಹುತಿಗಳು ಇವೆ । ನಂತರ ಜಯಾದಿಗಳನ್ನು ಮಾಡಿ ಕೇಶ ಸಂಸ್ಕಾರವನ್ನು ಮಾಡಬೇಕು ॥

ಚೂಡಾಕರ್ಮ – ಆಪಸ್ತಂಬ ಗೃಹ್ಯಸೂತ್ರಂ

ಜನ್ಮನೋಧಿ ತೃತೀಯೇ ವರ್ಷೇ ಚೌಲಂ ಪುನರ್ವಸ್ವೋಃ । ಬ್ರಾಹ್ಮಣಾನಾಂ ಭೋಜನಮುಪಾಯನವತ್ । ಸೀಮಂತವತ್ ಅಗ್ನೇರುಪಸಮಾಧಾನಾದಿ । ಅಪರೇಣಾಗ್ನಿಂ ಪ್ರಾಂಚಮುಪವೇಷ್ಯ ತ್ರೇಣ್ಯಾ ಶಲಲ್ಯಾ ತ್ರಿಭಿಃ ದರ್ಭಪುಂಜೀಲ್ಯೈಃ ಶಲಾಲುಗ್ಲಪ್ಸೇನೇತಿ ತೂಷ್ಣೀಂ ಕೇಶಾನ್ವಿನೀಯ । ಯಥರ್ಷಿ ಶಿಖಾ ನಿದಧಾತಿ । ಯಥಾ ವೈಷಾಂ ಕುಲಧರ್ಮ ಸ್ಯಾತ್ । ಅಪಾಗ್ಂ ಸಂಸರ್ಜನಾತ್ ಆಕೇಶ ನಿಧಾನಾತ್ ಸಮಾನಂ । ಕ್ಷುರಂ ಪ್ರಕ್ಷಾಳ್ಯ ನಿದಧಾತಿ । ತೇನತ್ರ್ಯಹಂ ಕರ್ಮ ನಿವೃತ್ತಿಃ । ವರಂ ದದಾತಿ । ಏವಂ ಗೋದಾನಂ ಅನ್ಯಸ್ಮಿನ್ ಅಪಿ ನಕ್ಷತ್ರೇ ಷೋಡಷೇ ವರ್ಷೇ ॥

ಹುಟ್ಟಿದ ೩ನೇ ವರ್ಷದಲ್ಲಿ ಚೂಡಾಕರ್ಮವನ್ನು ಪುನರ್ವಸೂ ನಕ್ಷತ್ರದಲ್ಲಿ ಮಾಡಬೇಕು । ಬ್ರಾಹ್ಮಣರನ್ನು ಪೂಜಿಸಿ(ನಾಂದೀ), ಉಪನಯನದಂತೆ । ಸೀಮಂತಕರ್ಮದಂತೆ ಅಗ್ನಿಯ ಪ್ರತಿಷ್ಠೆ ಮಾಡಿ । ಅಗ್ನಿಯ ಪಶ್ಚಿಮದಲ್ಲಿ ಪೂರ್ವಕ್ಕೆ ಮುಖವಾಗಿರುವಂತೆ ಕೂರಿಸಿಕೊಂಡು ೩ ದರ್ಭೆಗಳಿಂದ, ೩ ಕವಲಿರುವ ಕಾಡುಹಂದಿಯ ೧ ಮುಳ್ಳು, ಮತ್ತು ಬಾಚಣಿಕೆ ಇವುಗಳಿಂದ ಅಮಂತ್ರಕವಾಗಿ ಕೂದಲನ್ನು ನೆನೆಸಿ, ಅವರವರ ಪರಂಪರೆಯ ಋಷಿಗಳ ಸಂಖ್ಯೆಗನುಗುಣವಾಗಿ ಶಿಖೆಯನ್ನು ಬಿಡಬೇಕು। ಇಲ್ಲದಿದ್ದರೆ ಅವರವರ ಕುಲಧರ್ಮಕ್ಕನುಗುಣವಾಗಿಯೂ ಶಿಖೆಯನ್ನು ಬಿಡಬಹುದು । ನೀರಿನಿಂದ ಪ್ರೋಕ್ಷಿಸಿ ತಲೆಯ ೪ ದಿಕ್ಕುಗಳಲ್ಲೂ ಕೂದಲುಗಳನ್ನು ಕತ್ತರಿಸಿ ತಟ್ಟೆಯಲ್ಲಿ ಇಡುವವರೆಗೂ ಉಪನಯನ ಕರ್ಮದಲ್ಲಿ ಮಾಡುವಂತೆಯೇ ಇಲ್ಲಿಯೂ ಮಾಡುವುದು। ಕತ್ತಿಯನ್ನು ತೊಳೆದು ಇಡುವುದು। ಆ ಕತ್ತಿಯಿಂದ ೩ ದಿನಗಳು ಯಾವುದೇ ಕಾರ್ಯಗಳನ್ನು ಮಾಡಬಾರದು। ಬ್ರಹ್ಮರನ್ನು ಉಪಚರಿಸಿ ಉದ್ವಾಸನೇ ಮಾಡುವುದು। ೧೬ ನೇ ವಯಸ್ಸಿನಲ್ಲಿ ಮೊದಲಸಲ ಮುಖಕ್ಷೌರ ಮಾಡಿಕೊಳ್ಳಬೇಕಾದರೆ ಬೇರೆ ನಕ್ಷತ್ರಗಳಲ್ಲಾದರೂ ಸಹ ಚೂಡಾಕರ್ಮದಂತೆಯೇ ಮಾಡಬೇಕು ॥

ಚೂಡಾಕರ್ಮ – ಪ್ರಯೋಗಃ

ಮಂಗಳ ಸ್ನಾನಂ, ನಿತ್ಯಾಹ್ನಿಕಂ ಕೃತ್ವಾ । ಆಚಮನಂ–ಆಸನವಿಧಿಂ–ಪವಿತ್ರಧಾರಣಂ–ಘಂಟಾನಾದಂ–ಪ್ರಾಣಾಯಾಮಂ–ದೀಪಪೂಜಾಂ ಚ ಕೃತ್ವಾ ॥

ಮಂಗಳ ಸ್ನಾನ, ನಿತ್ಯಾಹ್ನಿಕಗಳನ್ನೂ ಸಹ ಮಾಡಿ । ಆಚಮನವನ್ನು, ಆಸನವಿಧಿಯನ್ನು, ಪವಿತ್ರಧಾರಣೆಯನ್ನು, ಘಂಟಾನಾದವನ್ನು, ಪ್ರಾಣಾಯಾಮವನ್ನು, ದೀಪಪೂಜೆಗಳನ್ನೂ ಕೂಡ ಮಾಡಿ ॥

ಪ್ರಾರಿಪ್ಸಿತಸ್ಯ ಕರ್ಮಣಃ ನಿರ್ವಿಘ್ನೇನ ಪರಿಸಮಾಪ್ತ್ಯರ್ಥಂ ಗಣಪತಿ ಪೂಜಾಂ, ತದಾದೌ ಕಲಶಪೂಜಾಂ ಚ ಕರಿಷ್ಯೇ ಇತಿ ಸಂಕಲ್ಪ್ಯ – ಕೃತ್ವಾ ॥

ಮುಂದೆ ಮಾಡಲಿರುವ ಕರ್ಮದ ನಿರ್ವಿಘ್ನತೆಗಾಗಿ ಗಣಪತಿಪೂಜೆಯನ್ನು, ಅದಕ್ಕೆ ಮೊದಲು ಕಲಶಪೂಜೆಯನ್ನೂ ಸಹ ಮಾಡುತ್ತೇನೆ ಎಂದು ಸಂಕಲ್ಪಿಸುವುದು – ಕಲಶಪೂಜೆ ಮತ್ತು ಗಣಪತಿಪೂಜೆಗಳನ್ನು ಮಾಡುವುದು ॥

ಶುಭತಿಥೌ.....ಶ್ರೀಪರಮೇಶ್ವರ ಪ್ರೀತ್ಯರ್ಥಂ, ...ಗೋತ್ರೇ ....ನಕ್ಷತ್ರೇ ....ರಾಶೌ ಜಾತಸ್ಯ .....ಶರ್ಮಾ ನಾಮಧೇಯಸ್ಯ, ...ನಕ್ಷತ್ರೇ ....ರಾಶೌ ಜಾತಾಯಾ: .....ನಾಮ್ನ್ಯಾ: ಮಮ ಧರ್ಮಕಾಂತಾಯಾ:, ...ಗೋತ್ರೇ .....ನಕ್ಷತ್ರೇ .....ರಾಶೌ ಜಾತಂ .....ಶರ್ಮಾಣಂ ಮಮ ಕುಮಾರಂ ಚೂಡಾಕರ್ಮ ಕರ್ಮಣಾ ಸಂಸ್ಕರಿಷ್ಯೇ – ಇತಿ ಸಂಕಲ್ಪ್ಯ ॥

ಸಂಕಲ್ಪವನ್ನು ಪ್ರಾರಂಭಿಸಿ, ಹೇಳುತ್ತಾ.....ಶ್ರೀ ಪರಮೇಶ್ವರ ಪ್ರೀತ್ಯರ್ಥವಾಗಿ 'ಈ' ಗೋತ್ರದಲ್ಲಿ 'ಈ' ನಕ್ಷತ್ರದಲ್ಲಿ, 'ಈ' ರಾಶಿಯಲ್ಲಿ ಹುಟ್ಟಿರುವ ಈ ಹೆಸರಿನ ನನ್ನ ಮಗುವನ್ನು ಚೂಡಾಕರ್ಮ ಕರ್ಮದಿಂದ ಸಂಸ್ಕರಿಸುತ್ತೇನೆ – ಎಂದು ಸಂಕಲ್ಪಿಸುವುದು ॥

ಕರಿಷ್ಯಮಾಣ ಚೂಡಾಕರ್ಮಾಂಗಂ ಸ್ಥಲ ಶುದ್ಧ್ಯರ್ಥಂ ವೃದ್ಧ್ಯರ್ಥಂ ಅಭ್ಯುದಯಾರ್ಥಂ ಚ ಬ್ರಾಹ್ಮಣೈಸ್ಸಹ ಸ್ವಸ್ತಿ ಪುಣ್ಯಾಹವಾಚನಂ ಕರಿಷ್ಯೇ ಇತಿ ಸಂಕಲ್ಪ್ಯ – ಕೃತ್ವಾ ॥

ಮಾಡುವಂತಹ ಚೂಡಾಕರ್ಮದ ಅಂಗವಾಗಿ ಮೊದಲು ಸ್ಥಳಶುದ್ಧಿ, ವೃದ್ಧಿ, ಅಭ್ಯುದಯಕ್ಕಾಗಿ ಬ್ರಾಹ್ಮಣರೊಂದಿಗೆ ಸ್ವಸ್ತಿ ಪುಣ್ಯಾಹವಾಚನವನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ – ಪುಣ್ಯಾಹವನ್ನು ಮಾಡುವುದು ॥

ಕರಿಷ್ಯಮಾಣ ಚೂಡಾಕರ್ಮಾಂಗಂ ನಾಂದೀ ಸಮಾರಾಧನಂ ಕರಿಷ್ಯೇ ಇತಿ ಸಂಕಲ್ಪ್ಯ – ಕೃತ್ವಾ ॥

ಮಾಡುವಂತಹ ಚೂಡಾಕರ್ಮದ ಅಂಗವಾಗಿ ನಾಂದೀಸಮಾರಾಧನೆಯನ್ನು ಮಾಡುತ್ತೇನೆ ಎಂದು ಸಂಕಲ್ಪಿಸುವುದು – ನಾಂದಿಯನ್ನು ಮಾಡುವುದು ॥

ಕರಿಷ್ಯಮಾಣ ಚೂಡಾಕರ್ಮಾಂಗಂ ಅಂಕುರಾರೋಪಣಕರ್ಮ ಕರಿಷ್ಯೇ ಇತಿ ಸಂಕಲ್ಪ್ಯ – ಕೃತ್ವಾ ॥

ಮಾಡುವಂತಹ ಚೂಡಾಕರ್ಮದ ಅಂಗವಾಗಿ ಅಂಕುರಾರೋಪಣಕರ್ಮವನ್ನು ಮಾಡುತ್ತೇನೆ ಎಂದು ಸಂಕಲ್ಪಿಸುವುದು – ಅಂಕುರಾರೋಪಣವನ್ನು ಮಾಡುವುದು ॥

ಕರಿಷ್ಯಮಾಣ ಚೂಡಾಕರ್ಮಾಂಗಂ ರಕ್ಷಾಬಂಧನಕರ್ಮ ಕರಿಷ್ಯೇ ಇತಿ ಸಂಕಲ್ಪ್ಯ – ಕೃತ್ವಾ ॥

ಮಾಡುವಂತಹ ಚೂಡಾಕರ್ಮದ ಅಂಗವಾಗಿ ರಕ್ಷಾಬಂಧನಕರ್ಮವನ್ನು ಮಾಡುತ್ತೇನೆ ಎಂದು ಸಂಕಲ್ಪಿಸುವುದು – ರಕ್ಷಾಬಂಧನವನ್ನು ಮಾಡುವುದು ॥

ಕುಮಾರಂ ಭೋಜಯೇತ್, ಮಾತ್ರಾ ಸಹೈವ ಭೋಜನಂ । ಆಚಾರ್ಯಃ, ಚೂಡಾಕರ್ಮ ಹವನಾರ್ಥಂ ಸ್ಥಂಡಿಲೋಲ್ಲೇಖನಾದಿ ಅಗ್ನಿ ಪ್ರತಿಷ್ಠಾಪನಂ ಕರಿಷ್ಯೇ, ಇತಿ ಸಂಕಲ್ಪ್ಯ । ಪರ್ಯುಕ್ಷ್ಯ, ಪರಿಮೃಜ್ಯ । ಸಭ್ಯನಾಮಾನಮಗ್ನಿಂ (ಲೌಕಿಕ) ಪ್ರತಿಷ್ಠಾಪ್ಯ, ಪ್ರಜ್ವಾಲ್ಯ । ಪರಿಸ್ತೀರ್ಯ । ಪಾತ್ರಪ್ರಯೋಗೇ, ಜಲದ್ವಯ ಯುತಂ – ಶಲಲೀಂ – ದರ್ಭಪುಂಜೀಲಾನ್ – ಕ್ಷುರಂ – ಶಲಾಲುಗ್ಲಪ್ಸಂ ಚ ಅಭಿಪ್ರಯುಂಜ್ಯಾತ್ ॥

ಮಗುವಿಗೆ ಊಟ ಮಾಡಿಸಿ, ತಾಯಿಯೂ ಸಹ ಜೊತೆಯಲ್ಲಿ ಊಟಮಾಡಬೇಕು । ಆಚಾರ್ಯರು ಚೂಡಾಕರ್ಮದ ಹೋಮಕ್ಕಾಗಿ ಕುಂಡ ಸಂಸ್ಕಾರವೇ ಮೊದಲಾಗಿ ಅಗ್ನಿ ಪ್ರತಿಷ್ಠಾಪನೆಯನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ । ಕುಂಡಕ್ಕೆ ನೀರನ್ನು ಪ್ರೋಕ್ಷಿಸಿ, ತಿಕ್ಕಿ ಸ್ವಚ್ಛಗೊಳಿಸಿ । ಸಭ್ಯ ಎಂಬ ಹೆಸರಿನ ಲೌಕಿಕ ಅಗ್ನಿಯನ್ನು ಪ್ರತಿಷ್ಠೇ ಮಾಡಿ, ಜ್ವಲಿಸಿ । ಪರಿಸ್ತರಣವನ್ನು ಹಾಕಿ । ಪಾತ್ರ ಪ್ರಯೋಗದಲ್ಲಿ ವಿಶೇಷವಾಗಿ ಬಿಸಿ ಹಾಗು ತಣ್ಣನೆಯ ನೀರು – ದರ್ಭೆಯಕಟ್ಟು – ಮುಳ್ಳುಹಂದಿಯ ಮುಳ್ಳು – ಕತ್ತರಿ – ಶಲಾಲುಗ್ಲಪ್ಸ (ಮುಳ್ಳತ್ತಿಕಾಯಿ/ಬಾಚಣಿಕೆ) ಇವುಗಳೆಲ್ಲವನ್ನೂ ಜೋಡಿಸಿಕೊಳ್ಳಬೇಕು ॥

ಪ್ರೋಕ್ಷಣೀ ಪಾತ್ರ ಸಂಸ್ಕಾರಾದಾರಭ್ಯ ಷಟ್ಪಾತ್ರ ಪ್ರಯೋಗೇಣ ಆಜ್ಯ ಭಾಗಾಂತಂ ಕೃತ್ವಾ । ಮುಖಾಹುತಿ: ನ । ಕುಂಡೇ ಉಪಚಾರ ಪೂಜಾಂ ಆರಭ್ಯ, ಧೂಪ ದೀಪಾಂತಂ ಕೃತ್ವಾ । ನೈವೇದ್ಯ ಸ್ಥಾನೇ, ಧಾತಾ ದದಾತು ನಃ - ಇತಿ ಚತಸ್ರೋ ಯಸ್ತ್ವಾ ಹೃದಾ – ಇತಿ ಚತಸ್ರಃ ಇತಿ ಅಷ್ಟಾವಾಜ್ಯಾಹುತೀರ್ಜುಹೋತಿ ॥

ಪ್ರೋಕ್ಷಣೀ ಪಾತ್ರ ಸಂಸ್ಕಾರದಿಂದ ಆರಂಭಿಸಿ, ೬ ಪಾತ್ರೆಗಳ ಪ್ರಯೋಗದಿಂದ ಆಜ್ಯಭಾಗಾಂತದ ವರೆಗೆ ಪ್ರಯೋಗಮಾಡಿ । ಮುಖಾಹುತಿಯು ಇಲ್ಲ । ಅಗ್ನಿ ದೇವನಿಗೆ ಉಪಚಾರ ಪೂಜೆಯನ್ನು ಆರಂಭಿಸಿ ಧೂಪ ದೀಪಗಳನ್ನು ಮಾಡಿ ।

ನೈವೇದ್ಯ ಸ್ಥಾನದಲ್ಲಿ, ಈ ಕೆಳಗಿನ ೮ ಮಂತ್ರಗಳಿಂದ ಆಜ್ಯದಿಂದ ಆಹುತಿಗಳನ್ನು ಕೊಟ್ಟು ॥

ಮಂತ್ರಾಃ –

೧. ಓಂ ಧಾತಾ ದದಾತು ನೋ ರಯಿಮೀಶಾನೋ ಜಗತಸ್ಪತಿಃ । ಸನಃ ಪೂರ್ಣೇನ ವಾವನತ್ಸ್ವಾಹಾ ॥ ಧಾತ್ರ ಇದಂ ನಮಮ ॥

೨. ಓಂ ಧಾತಾ ಪ್ರಜಾಯಾ ಉತರಾಯ ಈಶೇ ಧಾತೇದಂ ವಿಶ್ವಂ ಭುವನಂ ಜಜಾನ । ಧಾತಾ ಪುತ್ರಂ ಯಜಮಾನಾಯ ದಾತಾ ತಸ್ಮಾ ಉ ಹವ್ಯಂ ಘೃತವದ್ವಿಧೇಮ ಸ್ವಾಹಾ ॥ ಧಾತ್ರ ಇದಂ ನಮಮ ॥

೩. ಓಂ ಧಾತಾ ದದಾತು ನೋ ರಯಿಂ ಪ್ರಾಚೀಂ ಜೀವಾತು ಮಕ್ಷಿತಾಮ್ । ವಯಂ ದೇವಸ್ಯ ಧೀಮಹಿ ಸುಮತಿಗ್ಂ ಸತ್ಯರಾಧಸಃ ಸ್ವಾಹಾ ॥ ಧಾತ್ರ ಇದಂ ನಮಮ ॥

೪. ಓಂ ಧಾತಾ ದದಾತು ದಾಶುಷೇ ವಸೂನಿ ಪ್ರಜಾ ಕಾಮಾಯ ಮೀಢುಷೇ ದುರೋಣೇ । ತಸ್ಮೈ ದೇವಾ ಅಮೃತಾಸ್ಸಂವ್ಯಯಂ ತಾಂ ವಿಶ್ವೇದೇವಾಸೋ ಅದಿತಿಃ ಸಜೋಷಾಃ ಸ್ವಾಹಾ ॥ ಧಾತ್ರ ಇದಂ ನಮಮ ॥

೫. ಓಂ ಯಸ್ತಾ ಹೃದಾ ಕೀರಿಣಾ ಮನ್ಯಮಾನೋಽಮರ್ತ್ಯಂ ಮರ್ತ್ಯೋ ಜೋಹವೀಮಿ । ಜಾತವೇದೋ ಯಶೋ ಅಸ್ಮಾಸುಧೇಹಿ ಪ್ರಜಾಭಿರಗ್ನೇ ಅಮೃತತ್ವಮಶ್ಯಾಗ್ ಸ್ವಾಹಾ ॥ ಅಗ್ನಯೇ ಪುತ್ರವತ ಇದಂ ನಮಮ ॥

೬. ಓಂ ಯಸ್ಮೈ ತ್ವಗ್ಂ ಸುಕೃತೇ ಜಾತವೇದ ಉ ಲೋಕಮಗ್ನೇ
ಕೃಣವಸ್ಯೋನಮ್ । ಅಶ್ವಿನಗ್ಂ ಸಪುತ್ರಿಣಂ ವೀರವಂತಂ ಗೋಮಂತಗ್ಂ
ರಯಿಂ ನಶತೇ ಸ್ವಸ್ತಿ ಸ್ವಾಹಾ ॥ ಅಗ್ನಯೇ ಪುತ್ರವತ ಇದಂ ನಮಮ ॥

೭. ಓಂ ತ್ವೇ ಸುಪುತ್ರಶವಸೋ ವೃತ್ರನ್ಯಾಮ ಕಾತಯಃ । ನತ್ವಾಮಿಂದ್ರಾತಿ
ರಿಚ್ಯತೇ ಸ್ವಾಹಾ ॥ ಇಂದ್ರಾಯ ಪುತ್ರಿಣ ಇದಂ ನಮಮ ॥

೮. ಓಂ ಉಕ್ಥ ಉಕ್ತೇ ಸೋಮ ಇಂದ್ರಂ ಮಮಾದ ನೀಥೇನೀಥೇ
ಮಘವಾನಗ್ಂ ಸುತಾಸಃ । ಯದೀಗ್ಂ ಸಬಾಧಃ ಪಿತರಂ ನ
ಪುತ್ರಾಸ್ಸಮಾನ ದಕ್ಷಾ ಅವಸೇ ಹವಂ ತೇ ಸ್ವಾಹಾ ॥ ಇಂದ್ರಾಯ
ಪುತ್ರಿಣ ಇದಂ ನಮಮ ॥

ಸ್ವಿಷ್ಟಕೃತ್ ನ । ಜಲಂ ಪ್ರೋಕ್ಷ್ಯ, ಅನೂಯಾಜ ಸಮಿಧಹೋಮಂ ತಥಾ
ಇಧ್ಮಸನ್ನಹನಹೋಮಂ ಚ ಕೃತ್ವಾ । ಜಯಾದಿ ಪ್ರತಿಪದ್ಯತೇ (ಅತ್ರ,
ಕೇಚಿತ್ ಪಕ್ಷೇ ರಾಷ್ಟ್ರಭೃತ್ ಹೋಮ: ನ) । ಪರಿಧ್ಯಂಜನಂ ನ ।
ಲೇಪಕಾರ್ಯಂ ನ । ಪರಿಧಿ (ಶಮ್ಯಾಃ) ನಿರಸನಂ ಕೃತ್ವಾ । ಸಂಸ್ರಾವಹೋಮ:
ನ । ಅನಾಜ್ಞಾತ ಪ್ರಾಯಶ್ಚಿತ್ತಂ, ಸರ್ವಪ್ರಾಯಶ್ಚಿತ್ತಹೋಮಂ ಚ ಕೃತ್ವಾ ।
ಪೂರ್ಣಾಹುತಿ: ನ । ಉತ್ತರ ಪರಿಷೇಚನಂ ಕೃತ್ವಾ ॥

ಸ್ವಿಷ್ಟಕೃತ್ ಹೋಮವು ಇಲ್ಲ । ನೀರನ್ನು ತಿಕ್ಕಿ, ಅನೂಯಾಜ ಸಮಿತ್ತಿನ
ಹೋಮ ಹಾಗೆಯೇ ಇಧ್ಮವನ್ನು ಕಟ್ಟಿದ್ದ ನಾರಿನಹೋಮವನ್ನೂ ಮಾಡಿ ।
ಜಯಾದಿ ಹೋಮಮಾಡಿ (ಈ ಕರ್ಮದಲ್ಲಿ ರಾಷ್ಟ್ರಭೃತ್ ಹೋಮವಾದ
ಋತಾಷಾಟ್ ಹೋಮವನ್ನು ಮಾಡದೆಯೂ ಇರಬಹುದು, ವಿವರಣೆಗಾಗಿ ಸಂಸ್ಕಾರ

ತರಂಗಿಣೀ ಪುಷ್ಪ–೬ ರಲ್ಲಿ ಪುಟ ೧೩೫ ನ್ನು ನೋಡಿ) । ಪರಿಧ್ಯಂಜನ ಇಲ್ಲ । ಲೇಪಕಾರ್ಯ ಇಲ್ಲ । ಪರಿಧಿಗಳನ್ನು (ಶಮ್ಯೆ) ನಿರಸನ ಅಂದರೆ ಕುಂಡದ ಹೊರಕ್ಕೆ ಉತ್ತರಕ್ಕೆ ಪರಿಧಿಗಳನ್ನು (ಶಮ್ಯೆ) ಹಾಕಿ । ಸಂಸ್ರಾವಹೋಮ ಇಲ್ಲ । ಅನಾಜ್ಞಾತಾದಿ ಪ್ರಾಯಶ್ಚಿತ್ತ ಮತ್ತು ಸರ್ವಪ್ರಾಯಶ್ಚಿತ್ತ ಹೋಮಗಳನ್ನು ಸಹ ಮಾಡಿ । ಪೂರ್ಣಾಹುತಿಯು ಇಲ್ಲ । ಉತ್ತರ ಪರಿಷೇಚನವನ್ನು ಮಾಡಿ ॥

ಭದ್ರಾಕರಣಂ (ಕ್ಷೌರಂ)

ಅಪರೇಣಾಗ್ನಿಂ ಪ್ರಾಂಚಮುಪವೇಶ್ಯ ॥

ಕುಮಾರನನ್ನು ಅಗ್ನಿಯ ಪಶ್ಚಿಮದಲ್ಲಿ ಪೂರ್ವಾಭಿಮುಖವಾಗಿ ಕೂರಿಸಿ ॥

ತೂಷ್ಣೀಂ ಕೇಶಾನ್ ವಿನೀಯ ॥

ಕುಮಾರನ ತಲೆಯನ್ನು ಸುಮ್ಮನೆ(ಅಮಂತ್ರಕವಾಗಿ) ಬಾಚುವುದು ॥

ಉಷ್ಣೇನ ವಾಯವಿತಿ – ಉಷ್ಣಾಃ ಶೀತಾಃ ಆಪ ಆನೀಯ, ಮಂತ್ರಃ – ಓಂ ಉಷ್ಣೇನ ವಾಯ ಉದಕೇನೇ ಹ್ಯದಿತಿಃ ಕೇಶಾನ್, ವಪತು ॥

ಮೇಲಿನ ಮಂತ್ರದಿಂದ ಬಿಸಿ – ತಣ್ಣನೆಯ ನೀರನ್ನು ಸೇರಿಸುವುದು ॥

ಆಪ ಉನ್ದಂತು – ಇತಿ ಕುಮಾರಸ್ಯ ಶಿರ ಉನತ್ತಿ, ಮಂತ್ರಃ – ಓಂ ಆಪ ಉನ್ದಂತು ಜೀವಸೇ ದೀರ್ಘಾಯುತ್ವಾಯ ವರ್ಚಸೇ । ಜ್ಯೋಕ್ಚ ಸೂರ್ಯಂ ದೃಶೇ ॥

ಮೇಲಿನ ಮಂತ್ರದಿಂದ ನೀರನ್ನು ಕುಮಾರನ ತಲೆಗೆ ಪ್ರೋಕ್ಷಿಸಿ ಸವರುವುದು ॥

ತ್ರೀನ್ ತ್ರೀನ್ ದರ್ಭಾನ್ ಅಂತರ್ಧಾಯ ಪ್ರತಿದಿಶಂ ಪ್ರವಪತಿ ॥

೩–೩ ದರ್ಭೆಗಳೊಂದಿಗೆ ಹತ್ತಾರು ಕೂದಲುಗಳನ್ನು ಪ್ರತಿದಿಕ್ಕಿನಲ್ಲೂ ಕತ್ತರಿಸಬೇಕು ॥

ಯೇನಾವಪತ್ – ಇತಿ ಪುರಸ್ತಾತ್ ವಪತಿ, ಯಜ್ಞಶರ್ಮೇತಿ ನಾಮಗ್ರಹಣಂ, ಮಂತ್ರಃ –

ಓಂ ಯೇನಾವಪತ್ಸವಿತಾ ಕ್ಷುರೇಣ ಸೋಮಸ್ಯ ರಾಜ್ಞೋ ವರುಣಸ್ಯ ವಿದ್ವಾನ್ । ತೇನ ಬ್ರಹ್ಮಾಣೋ ವಪತೇದಮಸ್ಯಾಯುಷ್ಮಾನ್ ಜರದಷ್ಟಿರ್ಯಥಾಸದಯಂ .....ಶರ್ಮಾ ॥

ಮೇಲಿನ ಮಂತ್ರದಿಂದ ಕುಮಾರನ ತಲೆಯ ಪೂರ್ವಭಾಗದ ಕೂದಲುಗಳನ್ನು ದರ್ಭೆಗಳ ಸಹಿತ ಕತ್ತರಿಸುತ್ತಾನೆ । ಪೂರ್ವದಿಕ್ಕಿನ ಮಂತ್ರದಲ್ಲಿ "ಯಜ್ಞಶರ್ಮಾ" ಎನ್ನುವಕಡೆ ಕುಮಾರನ ಹೆಸರಿನ ಮುಂದೆ "ಶರ್ಮಾ" ಎಂಬುದನ್ನು ಸೇರಿಸಿ ಹೇಳಬೇಕು ॥

ದಕ್ಷಿಣತೋ ಮಾತಾ, ಬ್ರಹ್ಮಚಾರೀ ವಾ ಅನಡುಹೇ ಶಕೃತ್ ಪಿಂಡೇ ಯವಾನ್ನಿಧಾಯ ತಸ್ಮಿನ್ ಕೃತ್ತ ಕೇಶಾನ್ ಉಪಯಮ್ಯ । ಅಪ ಉಪಸ್ಪೃಶೇತ್ ॥

ವಟುವಿನ ದಕ್ಷಿಣ(ಬಲ)ಭಾಗದಲ್ಲಿ ತಾಯಿಯಾಗಲೀ, ಬ್ರಹ್ಮಚಾರಿಯಾಗಲೀ ನಿಂತುಕೊಂಡು ತಟ್ಟೆಯಲ್ಲಿ ಎತ್ತಿನ ಸಗಣಿ ಉಂಡೆಯನ್ನು ಇಟ್ಟುಕೊಂಡು ಅದರಲ್ಲಿ ಆರತಿ ನೀರನ್ನು ಹಾಕಿಕೊಂಡು, ಜವೇಗೋಧಿ ಅಥವಾ ಅರಳು ಮತ್ತು ದೂರ್ವೆಗಳನ್ನು ಹಾಕಿಕೊಂಡು ಕತ್ತರಿಸಿದ ಕೂದಲು ಮತ್ತು ದರ್ಭೆಗಳನ್ನು ಆ ತಟ್ಟೆಯಲ್ಲಿ ಹಾಕಬೇಕು । ಕೈಯನ್ನು ತೊಳೆದುಕೊಂಡು ॥

ಯತ್ ಕ್ಷುರೇಣ - ಇತಿ ವಪಂತಂ ಅನುಮಂತ್ರಯತೇ, ಮಂತ್ರಃ –

ಓಂ ಯತ್ ಕ್ಷುರೇಣಮರ್ಚಯತಾ ಸುಪೇಶಸಾ ವಪ್ತಾ ವಪಸಿ ಕೇಶಾನ್ ।
ಶುಂಧಿ ಶಿರೋ ಮಾಸ್ಯಾಯುಃ ಪ್ರಮೋಷೀಃ ॥

ಮೇಲಿನ ಮಂತ್ರವನ್ನು ತಾಯಿ ಅಥವಾ ಬ್ರಹ್ಮಚಾರಿಯು ತಂದೆಯನ್ನು (ಕತ್ತರಿಸುವವನನ್ನು) ಕುರಿತು ಹೇಳಬೇಕು ॥

ಯೇನಪೂಷಾ – ಇತಿ ದಕ್ಷಿಣತಃ, ಮಂತ್ರಃ –

ಓಂ ಯೇನ ಪೂಷಾ ಬೃಹಸ್ಪತೇರಗ್ನೇರಿಂದ್ರಸ್ಯ ಚಾಯುಷೇವಪತ್ ।
ತೇನಾಸ್ಯಾಯುಷೇ ವಪ ಸೌಶ್ಲೋಕ್ಯಾಯ ಸ್ವಸ್ತ್ಯಯೇ ॥

ಮೇಲಿನ ಮಂತ್ರದಿಂದ ಕುಮಾರನ ತಲೆಯ ದಕ್ಷಿಣಭಾಗದ ಕೂದಲುಗಳನ್ನು ದರ್ಭೆಗಳ ಸಹಿತವಾಗಿ ಕತ್ತರಿಸಿ ತಟ್ಟೆಯಲ್ಲಿ ಹಾಕಬೇಕು ॥

ಯೇನ ಭೂಯಃ – ಇತಿ ಪಶ್ಚಾತ್, ಮಂತ್ರಃ –

ಓಂ ಯೇನ ಭೂಯಶ್ಚರಾತ್ಯಯಂ ಜ್ಯೋಕ್ಚ ಪಶ್ಯಾತಿ ಸೂರ್ಯಮ್ ।
ತೇನಾಸ್ಯಾಯುಷೇ ವಪ ಸೌಶ್ಲೋಕ್ಯಾಯ ಸ್ವಸ್ತ್ಯಯೇ ॥

ಮೇಲಿನ ಮಂತ್ರದಿಂದ ಕುಮಾರನ ತಲೆಯ ಪಶ್ಚಿಮಭಾಗದ ಕೂದಲುಗಳನ್ನು ದರ್ಭೆಗಳ ಸಹಿತವಾಗಿ ಕತ್ತರಿಸಿ ತಟ್ಟೆಯಲ್ಲಿ ಹಾಕಬೇಕು ॥

ಯೇನ ಪೂಷಾ – ಇತಿ ಉತ್ತರತಃ, ಯಜ್ಞಶರ್ಮನ್ ಇತಿ ನಾಮಗ್ರಹಣಂ, ಮಂತ್ರಃ –

ಓಂ ಯೇನ ಪೂಷಾ ಬೃಹಸ್ಪತೇರಗ್ನೇರಿಂದ್ರಸ್ಯ ಚಾಯುಷೇವಪತ್ । ತೇನ ತೇ ವಪಾಮಿ .....ಶರ್ಮನ್ನಾಯುಷಾ ವರ್ಚಸಾ ಯಥಾ ಜ್ಯೋಕ್ಸುಮನಾ ಅಸಾಃ ॥

ಮೇಲಿನ ಮಂತ್ರದಿಂದ ಕುಮಾರನ ತಲೆಯ ಉತ್ತರಭಾಗದ ಕೂದಲುಗಳನ್ನು ದರ್ಭೆಗಳ ಸಹಿತವಾಗಿ ಕತ್ತರಿಸಿ ತಟ್ಟೆಯಲ್ಲಿ ಹಾಕಬೇಕು। ಇಲ್ಲಿ 'ಯಜ್ಞಶರ್ಮನ್' ಎಂಬ ಜಾಗದಲ್ಲಿ ವಟುವಿನ ಹೆಸರಿನ ಮುಂದೆ 'ಶರ್ಮನ್' ಶಬ್ದವನ್ನು ಸೇರಿಸಿ ಹೇಳುವುದು ॥

ದಕ್ಷಿಣತೋ ಮಾತಾ, ಬ್ರಹ್ಮಚಾರೀ ವಾ ಉಪ್ತ್ವಾಯ ಕೇಶಾನ್ - ಇತಿ ತಾನ್ ಉದುಂಬರ ಮೂಲೇ ದರ್ಭಸ್ತಂಬೇ ವಾ ನಿದಧಾತಿ, ಮಂತ್ರಃ –

ಓಂ ಉಪ್ತ್ವಾಯ ಕೇಶಾನ್ ವರುಣಸ್ಯ ರಾಜ್ಞೋ ಬೃಹಸ್ಪತಿಸ್ಸವಿತಾ ಸೋಮೋ ಅಗ್ನಿಃ । ತೇಭ್ಯೋ ನಿಧಾನಂ ಬಹುಧಾನ್ವವಿಂದನ್ನಂತರಾದ್ಯಾವಾಪೃಥಿವೀ ಅಪಸ್ಸುವಃ ॥

ವಟುವಿನ ದಕ್ಷಿಣ ಭಾಗದಲ್ಲಿ ತಾಯಿ ಅಥವಾ ಬ್ರಹ್ಮಚಾರಿಯು ಮೇಲಿನ ಮಂತ್ರದಿಂದ ಔದುಂಬರ ವೃಕ್ಷದ ಬುಡದಲ್ಲಾಗಲೀ ದರ್ಭೆಗಳ ಮೇಲಾಗಲೀ ರಂಗವಲ್ಲಿಯನ್ನು ಹಾಕಿ ಆ ತಟ್ಟೆಯನ್ನು ಇಡುತ್ತಾರೆ ॥

ಕ್ಷುರಂಪ್ರಕ್ಷಾಳ್ಯ ನಿದಧಾತಿ ತೇನತ್ಯ್ಯಹಂ ಕರ್ಮ ನಿವೃತ್ತಿಃ । ಕುಮಾರಸ್ಯ ಮಂಗಳ ಸ್ನಾನಂ ॥

ಕ್ಷೌರಮಾಡಿರುವ ಆ ಕತ್ತರಿಯನ್ನು ತೊಳೆದು ಇಡಬೇಕು ಅದರಿಂದ ೩ ದಿನಗಳು ಯಾವುದೇ ಕೆಲಸ ಮಾಡಬಾರದು । ವಟುವಿಗೆ ಮಂಗಳ ಸ್ನಾನ ಮಾಡಿಸುವುದು ॥

ಅನಂತರಂ ಪ್ರಣೀತಾಮೋಕ್ಷಣಾದಿ ಬ್ರಹ್ಮ ವಿಸರ್ಜನಾಂತಂ ಕೃತ್ವಾ । ಉತ್ಥಾಯ, ಮಂಗಳನೀರಾಜನಂ, ಮಂತ್ರಪುಷ್ಪಾಂಜಲಿಂ ಚ ಕೃತ್ವಾ । ಅಗ್ನೇನಯ ಇತ್ಯಗ್ನಿಪ್ರದಕ್ಷಿಣಂ ಕೃತ್ವಾ । ಸ್ವಸ್ತಿ ಶ್ರದ್ಧಾಂ ಇತಿ ಅಗ್ನಿಂ ಪ್ರಾರ್ಥ್ಯ, ನಮಸ್ಕೃತ್ಯ ॥

ನಂತರ ಪ್ರಣೀತಾಮೋಕ್ಷಣೆ, ಬ್ರಹ್ಮೋದ್ವಾಸನೆಯ ವರೆಗೂ ಪ್ರಯೋಗ ಮಾಡಿ । ಎದ್ದು, ಅಗ್ನಿದೇವನಿಗೆ ಮಂಗಳಾರತಿಯನ್ನು, ಪುಷ್ಪಾಂಜಲಿಯನ್ನೂ ಸಹ ಮಾಡಿ । ಅಗ್ನೇನಯ, ಎಂಬ ಮಂತ್ರದಿಂದ ಅಗ್ನಿಪ್ರದಕ್ಷಿಣೆಯನ್ನು ಮಾಡಿ । ಸ್ವಸ್ತಿ ಶ್ರದ್ಧಾಂ, ಎಂಬ ಶ್ಲೋಕದಿಂದ ಅಗ್ನಿದೇವನನ್ನು ಪ್ರಾರ್ಥಿಸಿ । ನಮಸ್ಕರಿಸಿ ॥

ಉಪವಿಷ್ಯ, ಪ್ರಾಗಾದಿ ಪರಿಸ್ತರಣಂ ಉತ್ತರೇ ವಿಸೃಜೇತ್ । ಯಸ್ಯಸ್ಮೃತ್ಯಾ ಚ ನಾಮೋಕ್ತ್ಯಾ ತಪಃ ಕರ್ಮ ಕ್ರಿಯಾದಿಷು । ನ್ಯೂನಂ ಸಂಪೂರ್ಣತಾಂ ಯಾತು ಸದ್ಯೋ ವಂದೇ ತಮಚ್ಯುತಂ । ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ । ಯತ್ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ । ಅನೇನ ಮಯಾ ಆಚರಿತ ಚೂಡಾಕರ್ಮ ಕರ್ಮಣಾ ಭಗವಾನ್ ಸರ್ವಾತ್ಮಕಃ ವಾಸುದೇವಃ ಪ್ರೀಯತಾಂ । ಮಧ್ಯೇ ಮಂತ್ರ ತಂತ್ರ ಸ್ವರ ವರ್ಣ ನ್ಯೂನ ಅತಿರಿಕ್ತ ಲೋಪ ದೋಷ ಪ್ರಾಯಶ್ಚಿತ್ತಾರ್ಥಂ ಮಹಾಮಂತ್ರ ಜಪಂ ಕರಿಷ್ಯೇ । ಅಚ್ಯುತಾಯ ನಮಃ । ಅನಂತಾಯ ನಮಃ । ಗೋವಿಂದಾಯ ನಮಃ ॥

ಕುಳಿತು, ಕುಂಡಕ್ಕೆ ಹಾಕಿರುವ ಪರಿಸ್ತರಣಗಳನ್ನು ಪೂರ್ವದಿಂದ ಕ್ರಮವಾಗಿ ತೆಗೆದು, ಕುಂಡದ ಹೊರಗೆ ಉತ್ತರಭಾಗದಲ್ಲಿ ಹಾಕುವುದು । ಮೇಲಿನ ರೀತಿ ಯಸ್ಯಸ್ಮೃತ್ಯದಿಂದ ಕರ್ಮಸಮಾಪನೆಯನ್ನು ಮಾಡಬೇಕು ॥

ಆವಾಹಿತ ದೇವತಾನ್ ಉದ್ವಾಸ್ಯ । ಪವಿತ್ರಗ್ರಂಥಿಂ ವಿಸ್ರಸ್ಯ । ಆಚಮನಂ, ಆಸನ ವಿಧಿಂ ಚ ಕುರ್ಯಾತ್ ॥

ಆವಾಹಿಸಿರುವ ದೇವತೆಗಳನ್ನು ಉದ್ವಾಸನೆಮಾಡಿ । ಪವಿತ್ರದ ಗಂಟನ್ನು ಬಿಚ್ಚಿ । ಆಚಮನವನ್ನು, ಆಸನವಿಧಿಯನ್ನೂ ಸಹ ಮಾಡಬೇಕು ॥

ಏವಮೇವ ಷೋಡಷೇವರ್ಷೇ ಗೋದಾನಂ ॥

೧೬ನೇ ವಯಸ್ಸಿನಲ್ಲಿ ಮೊದಲಸಲ ಮುಖಕ್ಷೌರವನ್ನು ಮಾಡಿಸುವಾಗಲೂ ಹೀಗೆಯೇ ಕರ್ಮವನ್ನು ಆಚರಿಸಬೇಕು ॥

2. ಅಕ್ಷರಾರಂಭಃ – ಪ್ರಯೋಗಃ

ಪಂಚಮ ವರ್ಷೇ ಅಕ್ಷರ ಲೇಖಿನ ಪಠನಾರಂಭಃ ಉತ್ತರಾಯಣೇ ಕಾರ್ಯಃ । ಮಂಗಳ ಸ್ನಾನಂ, ನಿತ್ಯಾಹ್ನಿಕಂ ಚ ಕೃತ್ವಾ । ಆಚಮನಂ – ಆಸನವಿಧಿಂ – ಪವಿತ್ರಧಾರಣಂ – ಘಂಟಾನಾದಂ – ಪ್ರಾಣಾಯಾಮಂ – ದೀಪಪೂಜಾಂ ಚ ಕೃತ್ವಾ ॥

ಹುಟ್ಟಿದ ಐದನೇ ವರ್ಷದಲ್ಲಿ ಮೊದಲಸಲ ಅಕ್ಷರಾಭ್ಯಾಸ ಕಾರ್ಯವನ್ನು ಉತ್ತರಾಯಣದಲ್ಲಿ ಮಾಡುವುದು । ಮಂಗಳ ಸ್ನಾನ, ನಿತ್ಯಾಹ್ನಿಕಗಳನ್ನೂ ಸಹ ಮಾಡಿ । ಆಚಮನವನ್ನು, ಆಸನವಿಧಿಯನ್ನು, ಪವಿತ್ರಧಾರಣೆಯನ್ನು, ಘಂಟಾನಾದವನ್ನು, ಪ್ರಾಣಾಯಾಮವನ್ನು, ದೀಪಪೂಜೆಗಳನ್ನೂ ಕೂಡ ಮಾಡಿ ॥

ಶುಭ ತಿಥೌ.....ಏವಂ ಗುಣ ವಿಶೇಷಣ ವಿಶಿಷ್ಟಾಯಾಂ ಮಮ.....ಪ್ರೀತ್ಯರ್ಥಂ, ...ಗೋತ್ರೇ ....ನಕ್ಷತ್ರೇ ....ರಾಶೌ ಜಾತಸ್ಯ .....ಶರ್ಮಾ ನಾಮಧೇಯಸ್ಯ, ...ನಕ್ಷತ್ರೇ ....ರಾಶೌ ಜಾತಾಯಾ: .....ನಾಮ್ನ್ಯಾ: ಮಮ ಧರ್ಮಕಾಂತಾಯಾ:, ...ಗೋತ್ರೇ, ...ನಕ್ಷತ್ರೇ, ...ರಾಶೌ ಜಾತಂ.... ಶರ್ಮಾಣಂ ಮಮ ಕುಮಾರಂ, ಸಕಲ ವಿದ್ಯಾ ಪಾರಂಗತತ್ವ ಸಿದ್ಧ್ಯರ್ಥಂ, ಗ್ರಹಣಶಕ್ತಿ, ಮೇಧಾಶಕ್ತಿ, ಸ್ಮರಣಶಕ್ತಿ, ಇಚ್ಛಾಶಕ್ತಿ ಪ್ರಾಪ್ತ್ಯರ್ಥಂ ಗಣಪತಿ, ಸರಸ್ವತಿ, ಸ್ವವೇದ, ಸೂತ್ರಕಾರ, ಶ್ರೀಗುರು ಪೂಜನ ಪೂರ್ವಕಂ ಅಕ್ಷರ ಲೇಖಿನ ಪಠನಾರಂಭ ಕರ್ಮಣಾ ಸಂಸ್ಕರಿಷ್ಯೇ ಇತಿ ಸಂಕಲ್ಪ್ಯ ॥

ಸಂಕಲ್ಪಿಸಿ .....ಈ ಗೋತ್ರದಲ್ಲಿ, ಈ ನಕ್ಷತ್ರದಲ್ಲಿ, ಈ ರಾಶಿಯಲ್ಲಿ ಹುಟ್ಟಿರುವ ಈ ಹೆಸರಿನ ನನ್ನ ಕುಮಾರನನ್ನು ಸಕಲ ವಿದ್ಯೆಯೂ ಪ್ರಾಪ್ತಿಯಾಗಲೆಂದು, ಗ್ರಹಣ ಶಕ್ತಿ, ಮೇಧಾ ಶಕ್ತಿ ಹಾಗೂ ಸ್ಮರಣ ಶಕ್ತಿಗಳು ಸಿದ್ಧಿಯಾಗಲೆಂದು ಗಣಪತಿ, ಸರಸ್ವತಿ, ವೇದಪುರುಷ, ಸೂತ್ರಕಾರರೂ ಹಾಗೂ ಶ್ರೀಗುರುದೇವರುಗಳ ಪೂಜೆಯನ್ನು ಮಾಡುವ ಮೂಲಕ ಅಕ್ಷರಗಳನ್ನು ಬರೆಸುವ ಮತ್ತು ಓದಿಸುವ ಕರ್ಮದಿಂದ ಸಂಸ್ಕರಿಸುತ್ತೇನೆ ಎಂದು ಸಂಕಲ್ಪಿಸಿ ॥

ಸಂಕಲ್ಪಿತ ತತ್ತದ್ದೇವತಾನ್ ಸ್ವಸ್ವ ಮಂತ್ರೇಣ ಆವಾಹ್ಯ । ಉಪಚಾರ ಪೂಜಾಂ ಕೃತ್ವಾ ॥

ಅಥ ಪ್ರಾರ್ಥಯೇತ್–

ವಕ್ರತುಂಡ ಮಹಾಕಾಯ ಕೋಟಿಸೂರ್ಯ ಸಮಪ್ರಭ । ನಿರ್ವಿಘ್ನಂ ಕುರು ಮೇ ದೇವ ಸರ್ವಕಾರ್ಯೇಷು ಸರ್ವದಾ॥

ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ । ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ ॥

ಗುರುರ್ಬ್ರಹ್ಮಾ ಗುರುರ್ವಿಷ್ಣು: ಗುರುರ್ದೇವೋ ಮಹೇಶ್ವರ: । ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥

ಸಂಕಲ್ಪಿಸಿರುವ ಆಯಾಯಾ ದೇವತೆಗಳನ್ನು ಆಯಾಯಾ ಮಂತ್ರಗಳಿಂದ ಆವಾಹಿಸಿ ಉಪಚಾರ ಪೂಜೆಗಳನ್ನು ಮಾಡಿ । ಗಣಪತಿ, ಸರಸ್ವತಿ ಹಾಗೂ ಗುರುದೇವರುಗಳ ಪ್ರಾರ್ಥನೆಯನ್ನು ಮಾಡಿ ॥

ಸ್ವರ್ಣಪಾತ್ರಸ್ಥ ತಂಡುಲೋಪರಿ ಪ್ರಣವಪೂರ್ವಕಂ ಕುಲದೇವತಾನಾಮ, ಶಿವಾಯ ಸಿದ್ಧಂ ನಮಃ , ನಮೋ ನಾರಾಯಣಾಯ , ಶ್ರೀಗುರವೇನಮಃ, ವಾಗ್ದೇವ್ಯೈ ನಮಃ ಇತಿ ತ್ರಿಸ್ಸಮ್ಯಕ್ ಲೇಖಯಿತ್ವಾ , ಪಾಠಯೇತ್ । ತತಃ ಕುಮಾರಸ್ಯ ನಿಟಿಲೇ ಗಂಧಂ ಲೇಪಯಿತ್ವಾ ಲಿಖಿತಾಕ್ಷರಾನ್ ತತ್ರ ವಿನ್ಯಸೇತ್ । ತತಃ ಆಶೀರ್ವಚನ ಫಲ ದಾನಾದಿ ಕುರ್ಯಾತ್ ॥

ಅಕ್ಕಿ ತುಂಬಿರುವ ತಟ್ಟೆಯಲ್ಲಿ ಓಂಕಾರಪೂರ್ವಕವಾಗಿ ಕುಲದೇವತೆಯ ಹೆಸರು, ಓಂ ಶಿವಾಯ ಸಿದ್ಧಂ ನಮಃ ಎಂದು, ಓಂ ನಮೋ ನಾರಾಯಣಾಯ ಎಂದು, ಓಂ ಶ್ರೀ ಗುರವೇ ನಮಃ ಎಂದು, ಓಂ ವಾಗ್ದೇವ್ಯೈ ನಮಃ ಎಂದು ಈ ರೀತಿಯಾಗಿ ಮೂರು ಸಲ ಮಗುವಿನ ಹತ್ತಿರ ಬರೆಸುವುದು ಹಾಗೂ ಹೇಳಿಸುವುದು । ಆಮೇಲೆ ಮಗುವಿನ ಹಣೆಗೆ ಗಂಧವನ್ನು ಲೇಪಿಸಿ, ದೇವರ ಹೆಸರುಗಳನ್ನು ಬರೆದಿರುವಂತಹ ಅಕ್ಕಿಯ ಮೇಲೆ ಕುಮಾರನ ಹಣೆಯನ್ನು ತಗುಲಿಸುವುದು । ಬ್ರಾಹ್ಮಣರಿಂದ ಆಶೀರ್ವಾದವನ್ನು ಮಗುವಿಗೆ ಕೊಡಿಸಿ ಬ್ರಾಹ್ಮಣರಿಗೆ ಫಲ ದಾನಾದಿಗಳನ್ನು ಕೊಡುವುದು ॥

ಯಸ್ಯಸ್ಮೃತ್ಯಾ ಚ ನಾಮೋಕ್ತ್ಯಾ ತಪಃ ಕರ್ಮ ಕ್ರಿಯಾದಿಷು । ನ್ಯೂನಂ ಸಂಪೂರ್ಣತಾಂ ಯಾತು ಸದ್ಯೋ ವಂದೇ ತಮಚ್ಯುತಂ। ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ । ಯತ್ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ । ಅನೇನ ಮಯಾ ಆಚರಿತ ಅಕ್ಷರಲೇಖನ ಪಠನಾರಂಭ ಕರ್ಮಣಾ ಭಗವಾನ್ ಸರ್ವಾತ್ಮಕಃ ವಾಸುದೇವಃ ಪ್ರೀಯತಾಂ । ಮಧ್ಯೇ ಮಂತ್ರ ತಂತ್ರ ಸ್ವರ ವರ್ಣ ನ್ಯೂನ ಅತಿರಿಕ್ತ ಲೋಪ ದೋಷ ಪ್ರಾಯಶ್ಚಿತ್ತಾರ್ಥಂ ಮಹಾಮಂತ್ರ ಜಪಂ ಕರಿಷ್ಯೇ । ಅಚ್ಯುತಾಯ ನಮಃ । ಅನಂತಾಯ ನಮಃ । ಗೋವಿಂದಾಯ ನಮಃ ॥

ದೇವತಾ ಉದ್ವಾಸನಂ ಕೃತ್ವಾ । ಪವಿತ್ರಗ್ರಂಥಿಂ ವಿಸ್ರಸ್ಯ । ಆಚಮನಂ, ಆಸನವಿಧಿಂ ಚ ಕುರ್ಯಾತ್ ॥

ಮೇಲಿನಂತೆ ಯಸ್ಯಸ್ಮೃತ್ಯಾದಿಂದ ಕರ್ಮಸಮಾಪನೆಯನ್ನು ಮಾಡುವುದು । ಆವಾಹಿಸಿರುವ ದೇವತೆಗಳನ್ನು ಉದ್ವಾಸನೆ ಮಾಡಿ । ಪವಿತ್ರದ ಗಂಟನ್ನು ಬಿಚ್ಚಿ । ಆಚಮನವನ್ನು, ಆಸನ ವಿಧಿಯನ್ನು ಸಹ ಮಾಡುವುದು ॥

3. ಉಪನಯನಂ – ಕಪರ್ದಿಕಾರಿಕಾ

ವಿಪ್ರೋಪನಯನಂ ವಸಂತೇ ಗ್ರೀಷ್ಮೇ ರಾಜನ್ಯ ಏವ ಚ । ಶರದಿ ವೈಶ್ಯಜಾತಿಸ್ತು ತೇಜೋ ವರ್ಚೋ ಯಶೋಬಲಂ । ನಾಂದೀಶ್ರಾದ್ಧಂ ಪಿತಾ ಕುರ್ಯಾತ್ ಪುತ್ರೀ ಪುತ್ರ ವಿವಾಹಯೋಃ। ಉತ್ತರೇಷು ವಿವಾಹೇಷು ಸ್ವಯಂ ಕುರ್ಯಾತ್ತು ನಾಂದಿಕಂ । ಅಸಗೋತ್ರಸ್ಸಗೋತ್ರೋವಾ ಯ ಆಚಾರ್ಯೋಪನಾಯನೇ । ಆಚಾರ್ಯಃ ಪಿತರಂ ತತ್ರ ವೃದ್ಧೌ ಶ್ರಾದ್ಧೇ ತು ದೇವತಾಃ । ಅಸ್ಯಾರ್ಥಃ – ನಿಮಿತ್ತಾಂತರೇಪಿ ಪಿತ್ರಾದಿ ವಿಯೋಗಾತ್ಮಾ ತಾ

ಮಹಾದಯಃ ಉಪವೀತಂ ಕುರ್ವಂತಿ । ತಥಾ ಆಚಾರ್ಯ ಪಿತರ ಏವ ನಾಂದೀ ದೇವತಾಃ ॥

ವಸಂತ ಋತುವಿನಲ್ಲಿ ಬ್ರಾಹ್ಮಣನಿಗೆ ಉಪನಯನವು, ಗ್ರೀಷ್ಮಋತುವಿನಲ್ಲಿ ಕ್ಷತ್ರಿಯನಿಗೆ । ಶರದ್ ಋತುವಿನಲ್ಲಿ ವೈಶ್ಯನಿಗೆ ಉಪನಯನವು ಹೀಗೆ ಮಾಡುವುದರಿಂದ ತೇಜಸ್ಸು ವರ್ಚಸ್ಸು ಯಶಸ್ಸು ಹಾಗೂ ಬಲವೂ ದೊರಕುವುದು । ನಾಂದೀ ಶ್ರಾದ್ಧವನ್ನು ಮಗನ ಮತ್ತು ಮಗಳ ಮದುವೆಯಲ್ಲಿ ತಂದೆಯು ಮಾಡಬೇಕು । ಏನೇ ಅಥವಾ ಮುಂದಿನ ವಿವಾಹಗಳಲ್ಲಿ ತಾನೇ ನಾಂದಿಯನ್ನು ಮಾಡಿಕೊಳ್ಳಬೇಕು । ಸಗೋತ್ರನೋ, ಬೇರೆಗೋತ್ರದವನೋ, ಉಪನಯನದಲ್ಲಿ ಯಾರು ಆಚಾರ್ಯನೋ ಅವನು ಮತ್ತು ಪಿತೃಗಳು ಇವರುಗಳೇ ನಾಂದೀ ಶ್ರಾದ್ಧದಲ್ಲಿ ದೇವತೆಗಳು । ಇದರ ಅರ್ಥ– ಕಾರಣಾಂತರದಿಂದ ತಂದೆಯೇ ಮೊದಲಾದವರು ವಿಯೋಗವಾಗಿದ್ದರೆ ಆಗ ಮಾತಾಮಹಾದಿಗಳು ಉಪನಯನವನ್ನು ಮಾಡಬೇಕು । ಹಾಗಾಗಿ ಆಚಾರ್ಯ ಹಾಗು ಪಿತೃಗಳೇ ನಾಂದೀ ದೇವತೆಗಳು ॥

ಪಿತ್ರ್ಯೇವೋಪನಯೇತ್ ಪುತ್ರಂ ತದಭಾವೇ ಪಿತುಃ ಪಿತಾ । ತದಭಾವೇ ಪಿತುರ್ಭ್ರಾತಾ ತದಭಾವೇತು ಸೋದರಃ । ತದಭಾವೇತು ಪತ್ನೀ ಸ್ಯಾತ್ ಉಪಾಧ್ಯಾಯೇನ ಕಾರಯೇತ್ । ಮಾಘಾದಿ ಪಂಚ ಮಾಸೇಷ್ವಿತಿ ನಿಯಮನಾತ್ ಅಧ್ಯಯನಶೀಲ ಧನಯುಕ್ತೋ ಭವತೀಹ ಭಾವ್ಯೋ ಮತಿಮಾನ್ ದೀರ್ಘಾಯುಃ ಮೌಂಜೀಬಂಧನೇ ಗದಿತಃ । ವಸಂತಕಾಲೇ ಸಂಪ್ರಾಪ್ತೇ ಶುಕ್ಲಪಕ್ಷೇ ಗ್ರಹೋಯದಿ । ನೈಮಿತ್ತಿಕಾ ಪ್ರಶಸ್ತೋಯಂ ಪ್ರಶಸ್ತೇಚ ಉಪನಾಯನಂ ॥

ತಂದೆಯು ಮಗನಿಗೆ ಉಪನಯನವನ್ನು ಮಾಡಬೇಕು । ತಂದೆಯಿಲ್ಲದಿದ್ದಲ್ಲಿ ತಂದೆಯ ತಂದೆಯು ಮಾಡಬೇಕು । ಅಜ್ಜನೂ ಇಲ್ಲದಿದ್ದಲ್ಲಿ ದೊಡಪ್ಪ, ಚಿಕ್ಕಪ್ಪಂದಿರು ಅವರೂ ಇಲ್ಲದಿದ್ದಲ್ಲಿ ಅಣ್ಣಂದಿರು ಉಪನಯನವನ್ನು ಮಾಡಬೇಕು । ಇವರುಗಳು ಯಾರೂ ಇಲ್ಲದಿದ್ದ ಪಕ್ಷದಲ್ಲಿ ತಾಯಿಯೇ ಪುರೋಹಿತರಿಂದ ಮಗನಿಗೆ ಉಪನಯನವನ್ನು

ಮಾಡಿಸಬೇಕು । ಮಾಘಾದಿ ೫ ಮಾಸಗಳು ವಸಂತಋತುವೆಂದೇ ಪ್ರಸಿದ್ಧವಾಗಿರುವುದರಿಂದ ಅವುಗಳಲ್ಲಿ ಉಪನೀತನಾದವನು ಅಧ್ಯಯನಶೀಲನೂ ಧನಯುಕ್ತನೂ ಬುದ್ಧಿವಂತನೂ ದೀರ್ಘಾಯುವೂ ಆಗುತ್ತಾನೆಂದು ಪ್ರಸಿದ್ಧವಾಗಿದೆ । ವಸಂತಕಾಲವು ಬಂದಾಗ ಶುಕ್ಲಪಕ್ಷದಲ್ಲಿ ಗುರು ಗ್ರಹಾದಿಗಳ ಬಲವು ಪ್ರಶಸ್ತವಾದಾಗ ಉಪನಯನ ಕಾಲವು ಶ್ರೇಷ್ಠವಾಗಿದೆ ॥

ತ್ರಯೋದಶ್ಯಾದಿ ಚತ್ವಾರಿ ಸಪ್ತಮ್ಯಾದಿ ದಿನತ್ರಯಂ । ಚತುರ್ಥೀ ಏಕದಾ ಪ್ರೋಕ್ತಾಃ ಅಷ್ಟಾವೇತಿ ಗಳಗ್ರಹಾಃ । ಜೀವ, ಶುಕ್ರ, ಕುಜ ಜ್ಞಾಶ್ಚ ಋಗ್ವೇದಾದಿ ಅಧಿಪಾಃ ಕ್ರಮಾತ್ । ಸೌಮ್ಯಾಯ ನೇತಿಶಸ್ತಂ ಚ ಚೈತ್ರೇ ಮೀನೇ ಸ್ಥಿರೇ ರವೌ । ನಿರ್ವಿಷಾದೇವ ಮಂತ್ರಂ ಚ ಅಶುಭೇ ಗೋಚರೇ ಸ್ಥಿತೇ । ಅಜಾದಿ ಚಾಪ ಮೀನೇಷು ಶುಭದಶ್ಚ ಉಪನಾಯನೇ । ಶಾಖಾಧಿಪತಿ ಲಗ್ನಂ ಚ ಶಾಖಾಧಿಪ ಬಲಂ ಶಿಶೋಃ । ಶಾಖಾಧಿಪತಿ ವಾರಂ ಚ ತ್ರಿತಯಂ ದುರ್ಲಭಂ ಭುವಿ ॥

ತ್ರಯೋದಶ್ಯಾದಿ ೪ ತಿಥಿಗಳೂ–ಸಪ್ತಮ್ಯಾದಿ ೩ ತಿಥಿಗಳೂ । ಕೃಷ್ಣ ಪಕ್ಷದ ಚತುರ್ಥಿಯೂ ಈ ೮ ಗಳಗ್ರಹಗಳೆಂದು ಪ್ರಸಿದ್ಧವಾಗಿವೆ (ಗಳಗ್ರಹಗಳಲ್ಲಿ ಉಪನೀತನಾದರೆ ಪುನಃ ಉಪನಯನ ಆಗಬೇಕೆಂದು ವಚನವಿದೆ) । ಕ್ರಮವಾಗಿ, ಋಗ್ವೇದಕ್ಕೆ ಗುರುವೂ, ಯಜುರ್ವೇದಕ್ಕೆ ಶುಕ್ರನೂ, ಸಾಮವೇದಕ್ಕೆ ಕುಜನೂ ಅಧಿಪತಿಗಳಾದ್ದರಿಂದ ಆಯಾಯಾ ವೇದದವರು ಆಯಾಯಾ ಗ್ರಹಗಳ ಬಲವನ್ನು ಕಂಡುಕೊಂಡು ಉಪನಯನವನ್ನು ಮಾಡಬೇಕು । ಉತ್ತರಾಯಣದಲ್ಲಿ ಉಪನಯನವು ಪ್ರಶಸ್ತವಾದರೂ ಮೀನ ಚೈತ್ರದಲ್ಲಿ ಅಂದರೆ ರವಿಯು ಮೀನದಲ್ಲಿದ್ದಾಗ ಉಪನಯನವು ಅತಿ ಪ್ರಶಸ್ತವಾದುದು । ಅಶುಭಗ್ರಹಗಳಾದ ಕುಜ, ರವಿ, ಶನಿಗಳು ಗೋಚರದಲ್ಲಿ ಬಲಿಷ್ಠವಾಗಿದ್ದರೆ ಉಪನಯನವು ಕರ್ಮಹೀನವಾಗುತ್ತದೆ । ಆದರೆ ಕಟಕ, ಮೀನ, ಧನಸ್ಸುಗಳಲ್ಲಿ ಮತ್ತು ಅದರ ನವಾಂಶಗಳಲ್ಲಿ ಗುರುವಿದ್ದಾಗ ಉಪನಯನವು ತುಂಬಾ ಶುಭಕರವಾಗಿದೆ । ಶಿಶುವಿನ ಶಾಖಾಧಿಪತಿಯ ಲಗ್ನವೂ, ಶಾಖಾಧಿಪತಿಯ ಬಲವೂ । ಶಾಖಾಧಿಪತಿಯವಾರವೂ

ಉಪನಯನದಲ್ಲಿ ದೊರೆತರೆ ಅದು ತುಂಬಾ ಪ್ರಶಸ್ತತಮ, ಆದರೆ ಅದು ದುರ್ಲಭವೇ ಸರಿ ॥

ಬಾಲಸ್ಯ ಬಲಹೀನೋಪಿ ಶಾಂತ್ಯಾ ಜೀವೋ ಬಲಪ್ರದಃ । ಯಥೋಕ್ತ ವತ್ಸರೇ ಕುರ್ಯಾತ್ ಅನುಕ್ತೋ ಚೋಪನಾಯನೇ । ಯುಕ್ತೇನ ವರ್ಷೇಣ ಗುರೋಃ ಬಲೇ ಚ ಶಾಂತ್ಯಾ ಪ್ರಶಸ್ತಂ ವ್ರತಬಂಧಕರ್ಮ । ಅನುಕ್ತವರ್ಷೇಪಿ ಶುಚಿಪ್ರದೇಪಿ ನಚೇತ್ತ್ಯೋರರ್ಧ ಬಲಿರ್ಬಲೀಯಾನ್ । ಬಲಾಯ ಕರ್ತುಂ ಬಲಖೇಚರಾಣಾಂ । ಅನುಕ್ತಕಾಲೇ ಯದಿ ಕರ್ಮ ಕುರ್ಯಾತ್ । ಅಕಾಲ ಚೂತಂ ಹಿ ಯಥಾ ಪ್ರಶಸ್ತಂ ಯಸ್ಮಿನ್ ಗ್ರಹಾನರ್ಚನ ಮುಕ್ತಕಾಲೇ । ಉಕ್ತಕಾಲೇ ಭವೇತ್ ವಿಪ್ರಃ ಶಾಂತ್ಯಾ ಜೀವೋ ಬಲಪ್ರದಃ । ಅನ್ಯತ್ರ ಏಕಾದಶಸ್ಥೋಪಿ ವ್ಯರ್ಥಂ ಸ್ಯಾತ್ ಉಪನಾಯನಂ ॥

ಹುಡುಗನಿಗೆ ಗುರುಬಲವಿಲ್ಲದಿದ್ದರೂ ಗುರುಗ್ರಹಕ್ಕೆ ಶಾಂತಿ ಮಾಡಿದರೆ ಬಲಪ್ರದನಾಗುತ್ತಾನೆ । ಆದ್ದರಿಂದ ಸೂತ್ರಕಾರರ ಮತದಂತೆ ಹೇಳಿದ ಗರ್ಭಾಷ್ಟಮಾದಿಗಳಲ್ಲಿ ಸಂಸ್ಕಾರ ಕರ್ಮಗಳನ್ನು ಮಾಡಬೇಕು । ಯುಕ್ತವಾದ ಗರ್ಭಾಷ್ಟಮಾದಿಗಳಲ್ಲೂ, ಗುರುಬಲವಿದ್ದಾಗಲೂ ಶಾಂತಿಕರ್ಮಗಳಿಂದ ಬಲವನ್ನು ಪಡೆದು ಉಪನಯನವನ್ನು ನಡೆಸುವುದು ಪ್ರಶಸ್ತವಾದುದು । ಸೂತ್ರಕಾರರು ಹೇಳಿಲ್ಲದ ವರ್ಷಗಳಲ್ಲಿ ಶುಚಿಪ್ರದವಾದ ಗುರುಬಲವಿದ್ದರೂ ಶಾಂತ್ಯಾದಿಗಳನ್ನು ನಡೆಸಿದರೂ ಆ ಉಪನಯನವು ಅರ್ಧಬಲವನ್ನೇ ಹೊಂದಿರುತ್ತದೆ । ಇವುಗಳನ್ನು ಪರಿಹಾರ ಮಾಡಬೇಕೆಂಬುವವನು ಗುರುಗ್ರಹಾದಿಗಳ ಬಲವನ್ನು, ಕಾಲವನ್ನು, ಚೆನ್ನಾಗಿಯೇ ಪರೀಕ್ಷಿಸಿ ನಡೆಸಬೇಕಾಗುತ್ತದೆ । ಉದಾಹರಣೆಗೆ ಅಕಾಲದಲ್ಲಿರುವ ಮಾವು ಹೇಗೆ ಪ್ರಶಸ್ತವೋ ಅದಕ್ಕಿಂತಲೂ ಉಕ್ತಕಾಲದಮಾವೇ ಹೆಚ್ಚು ಪ್ರಶಸ್ತವಾದ್ದರಿಂದ ಉಕ್ತಕಾಲದಲ್ಲೇ ಗ್ರಹಗಳ ಅರ್ಚನೆಯಿಂದ ಉಪನಯನವನ್ನು ನಡೆಸುವುದೇ ಅತ್ಯಂತ ಶ್ರೇಷ್ಠವಾದುದು । ಉಕ್ತಕಾಲದಲ್ಲಿ ಬ್ರಾಹ್ಮಣನು ಗುರುಬಲಕ್ಕೋಸ್ಕರ ಶಾಂತ್ಯಾದಿಗಳನ್ನು ಮಾಡಿ ಉಪನಯನ ಮಾಡುವುದೇ ಶ್ರೇಯಸ್ಕರ । ಹಾಗಿಲ್ಲದೇ ಯಾವುದೇ ೧೧ ನೇ ಮನೆಯಲ್ಲಿದ್ದರೂ ಕಾಲಾತೀತವಾದರೆ ಉಪನಯನವು ವ್ಯರ್ಥವೇ ಸರಿ ॥

ಜನ್ಮತೃತೀಯೇ ಯದಿ ರಾಶಿ ಸಂಸ್ಥೇ । ಯಚ್ಛತಿ ಪೂಜಾಂ ದಶಮೇ ಗುರುಶ್ಚ ।
ನೈಚ್ಛಂತಿ ಪೂಜಾಂ ಚ ಚತುರ್ಥೀ ಸಂಸ್ಥೇ ತಥಾಷ್ಟಯೇ ದ್ವಾದಶಾಗೇ ಚ
ಜೀವೇ । ಮೀನೇ ಚಾಪ ಕುಳೀರಸ್ಥೇ ಜೀವೇ ಜನ್ಮಾಂತ ಮೃತ್ಯುದಃ ।
ಅತಿಸೌಖ್ಯಂ ವಟೋಃ ಕುರ್ಯಾತ್ ವಸಿಷ್ಠ ವಚನಂ ಯಥಾ । ಅಷ್ಟಮಃ
ಜನ್ಮ ಲಗ್ನಾಭ್ಯಾಂ ದ್ವಾದಶಂ ನೈವ ಕಾರಯೇತ್ । ಯದಿ ಸರ್ವ
ಗುಣೋಪೇತಂ ಅಷ್ಟಮಂ ನೈವ ಕಾರಯೇತ್ ॥

ಜನ್ಮರಾಶಿಯಿಂದ ಗುರುವು ೩ ನೇ ರಾಶಿಯಲ್ಲಿದ್ದಾಗಲೀ । ೧೦ ನೇ
ಮನೆಯಲ್ಲಿದ್ದಾಗಲೀ ಪೂಜೆಗಳಿಂದ ಉತ್ತಮ ಫಲಗಳನ್ನೇ ಕೊಡುತ್ತಾನೆ । ಗುರುವು
೪ ನೇ ಮನೆಯಲ್ಲೂ ೮ ನೇ ಅಥವಾ ೧೨ ನೇ ಮನೆಯಲ್ಲಿದ್ದಾಗ ಪೂಜೆಗಳಿಂದಲೂ
ಸಹ ಉಪನಯನವನ್ನು ಇಷ್ಟ ಪಡುವುದಿಲ್ಲ । ಮೀನ, ಧನಸ್ಸು ಅಥವಾ ಕಟಕ
ರಾಶಿಗಳಲ್ಲಿ ಗುರುವಿದ್ದಾಗ ಉಪನಯನವಾದರೆ ಆ ವಟುವಿಗೆ ಪೂರ್ಣಾಯುಷ್ಯವನ್ನೂ ।
ಅತ್ಯಂತ ಸುಖವನ್ನೂ ಸಕಲ ವಿದ್ಯೆಗಳನ್ನೂ ನೀಡುತ್ತಾನೆ ಎಂಬುದು ವಸಿಷ್ಠರ
ವಚನವಾಗಿದೆ । ಆದರೆ ೮ನೇ ಮನೆಯಲ್ಲೂ, ಜನ್ಮರಾಶಿಯಲ್ಲೂ, ಜನ್ಮಲಗ್ನದಲ್ಲೂ,
ದ್ವಾದಶಸ್ಥಾನದಲ್ಲೂ ಗುರುವಿದ್ದಾಗ ಉಪನಯನ ಮಾಡಬಾರದು । ಕಡೆಗೆ ಎಲ್ಲಾ
ಒಳ್ಳೆಯ ಗುಣ ಅಂಶಗಳಿದ್ದರೂ ಗುರುವು ಅಷ್ಟಮದಲ್ಲಿದ್ದಾಗ ಉಪನಯನ ಮಾಡಲೇ
ಬಾರದು ॥

ಉಪನಯನಂ – ಆಪಸ್ತಂಬ ಗೃಹ್ಯಸೂತ್ರಂ

ಉಪನಯನಂ ವ್ಯಾಖ್ಯಾಸ್ಯಾಮಃ । ಗರ್ಭಾಷ್ಟಮೇಷು ಬ್ರಾಹ್ಮಣಂ
ಉಪನಯೀತ । ಗರ್ಭೈಕಾದಶೇಷು ರಾಜನ್ಯಂ, ಗರ್ಭದ್ವಾದಶೇಷು ವೈಶ್ಯಂ ।
ವಸಂತೋ ಗ್ರೀಷ್ಮಃ ಶರತ್ ಇತಿ ಋತವೋ ವರ್ಣಾನುಪೂರ್ವ್ಯೇಣ ॥

ಉಪನಯನವನ್ನು ವ್ಯಾಖ್ಯಾನ ಮಾಡುತ್ತೇವೆ । ಗರ್ಭಾಷ್ಟಮಗಳಲ್ಲಿ ಬ್ರಾಹ್ಮಣನಿಗೆ
ಉಪನಯನ ಮಾಡಬೇಕು । ಗರ್ಭದ ೧೧ ನೇ ವರ್ಷದಲ್ಲಿ ಕ್ಷತ್ರಿಯನಿಗೆ, ಗರ್ಭದ

೧೨ ನೇ ವರ್ಷದಲ್ಲಿ ವೈಶ್ಯನಿಗೆ ಉಪನಯನ ಮಾಡಬೇಕು । ವಸಂತಋತುವಿನಲ್ಲಿ ಬ್ರಾಹ್ಮಣನಿಗೆ, ಗ್ರೀಷ್ಮಋತುವಿನಲ್ಲಿ ಕ್ಷತ್ರಿಯನಿಗೆ, ಶರದೃತುವಿನಲ್ಲಿ ವೈಶ್ಯನಿಗೆ ॥

ಬ್ರಾಹ್ಮಣಾನ್ ಭೋಜಯಿತ್ವಾ ಆಶಿಶೋ ವಾಚಯಿತ್ವಾ ಕುಮಾರಂ ಭೋಜಯಿತ್ವಾ । ಅನುವಾಕಸ್ಯ ಪ್ರಥಮೇನ ಯಜುಷಾಪಃ ಸಂಸೃಜ್ಯ ಉಷ್ಣಾಶ್ಶೀತಾಸ್ಸಾನೀಯ ಉತ್ತರಯಾ ಶಿರಉನತ್ತಿ । ತ್ರೀನ್‌ಸ್ತ್ರೀನ್ ದರ್ಭಾನ್ ಅಂತರ್ಧಾಯ ಉತ್ತರಾಭಿಃ ಚತಸೃಭಿಃ ಪ್ರತಿ ಮಂತ್ರಂ ಪ್ರತಿ ದಿಶಂ ಪ್ರವಪತಿ । ವಪಂತಂ ಉತ್ತರಯಾ ಅನುಮಂತ್ರಯತೇ ದಕ್ಷಿಣತೋ ಮಾತಾ ಬ್ರಹ್ಮಚಾರೀ ವಾ । ಅನಡುಹೇ ಶಕೃತ್ ಪಿಂಡೇ ಯವಾನ್ನಿಧಾಯ ತಸ್ಮಿನ್ ಕೇಶಾನ್ ಉಪಯಮ್ಯ ಉತ್ತರಯೋದುಂಬರ ಮೂಲೇ ದರ್ಭಸ್ತಂಬೇ ವಾ ನಿದಧಾತಿ । ಸ್ನಾನಂ ॥

ಬ್ರಾಹ್ಮಣರಿಗೆ ಉಪಚರಿಸಿ ಆಶೀರ್ವಾದ ಪಡೆದು (ನಾಂದೀ) ಕುಮಾರನನ್ನು ಭೋಜಿಸಿ । ಅನುವಾಕದ ಮೊದಲ ಮಂತ್ರದಿಂದ ಬಿಸಿ ಹಾಗು ತಣ್ಣನೆಯ ನೀರನ್ನು ಸೇರಿಸಿ ಮುಂದಿನ ಮಂತ್ರದಿಂದ ತಲೆಯನ್ನು ತಿಕ್ಕುತ್ತಾನೆ । ೩, ೩ ದರ್ಭೆಗಳನ್ನು ಕೂದಲಿನ ಒಳಗೆ ಸೇರಿಸಿ ಮುಂದಿನ ೪ ಮಂತ್ರಗಳಲ್ಲಿ ಪ್ರತಿ ದಿಕ್ಕಿನಲ್ಲೂ ೧ ಮಂತ್ರ ಹೇಳಿ ದರ್ಭೆಗಳ ಸಹಿತ ಕೂದಲುಗಳನ್ನು ಕತ್ತರಿಸಬೇಕು । ಮುಂದಿನ ಮಂತ್ರದಿಂದ ಕತ್ತರಿಸುವವರನ್ನು ಕುರಿತು ತಾಯಿ ಅಥವಾ ಬ್ರಹ್ಮಚಾರಿಯು ಅನುಮಂತ್ರಣೇ ಮಾಡಬೇಕು । ಎತ್ತಿನ ಸಗಣಿಯಲ್ಲಿ ಜವೆಗೋಧಿಯನ್ನು ಹಾಕಿ ಕತ್ತರಿಸಿರುವ ಕೂದಲುಗಳನ್ನು ಅದರಲ್ಲಿ ಹಾಕಿಕೊಂಡು ಮುಂದಿನ ಮಂತ್ರದಿಂದ ಔದುಂಬರ ಮರದ ಬುಡದಲ್ಲಿಯೋ ಅಥವಾ ದರ್ಭೆಗಳ ಮೇಲೋ ಅದನ್ನು ಇಡಬೇಕು । ನಂತರ ಮಂಗಳಸ್ನಾನವನ್ನು ಮಾಡಿಸುವುದು ॥

ಅಗ್ನೇರುಪಸಮಾಧಾನಾದಿ ಆಜ್ಯಭಾಗಾಂತೇ ಪಾಲಾಶೀಂ ಸಮಿಧಂ ಉತ್ತರಯಾಧಾಪ್ಯೋತ್ತರೇಣಾಗ್ನಿಂ ದಕ್ಷಿಣೇನ ಪದಾಶ್ಮಾನಮಾ ಸ್ಥಾಪಯತ್ಯಾತಿಷ್ಠೇತಿ । ವಾಸಃ ಸದ್ಯಃ ಕೃತ್ವೋತಂ ಉತ್ತರಾಭ್ಯಾಂ

ಅಭಿಮಂತ್ರ್ಯ ಉತ್ತರಾಭಿಃ ತಿಸೃಭಿಃ ಪರಿಧಾಪ್ಯ ಪರಿಹತಂ ಉತ್ತರಯಾ ಅನುಮಂತ್ರಯತೇ । ಮೌಂಜೀಂ ಮೇಖಲಾಂ ತ್ರಿವೃತಾಂ ತ್ರಿಃ ಪ್ರದಕ್ಷಿಣಂ ಉತ್ತರಾಭ್ಯಾಂ ಪರಿವೀಯಾಜಿನಂ ಉತ್ತರಂ ಉತ್ತರಯಾ ॥

ಆಮೇಲೆ ಅಗ್ನಿ ಪ್ರತಿಷ್ಠೆಯೇ ಮೊದಲಾಗಿ ಆಜ್ಯಭಾಗಾಂತದವರೆಗೆ ಪ್ರಯೋಗವನ್ನು ಮಾಡಿ ಪಾಲಾಶ ಸಮಿತ್ತನ್ನು ಮುಂದಿನ ಮಂತ್ರದಿಂದ ಅಗ್ನಿಯಲ್ಲಿ ಹಾಕಿಸಿ ಅಗ್ನಿಯ ಉತ್ತರದಲ್ಲಿ ವಟುವನ್ನು ಬಲಗಾಲಿನಿಂದ ಕಲ್ಲಿನ ಮೇಲೆ ಆತಿಷ್ಠೇತಿ ಎಂಬ ಮಂತ್ರವನ್ನು ಹೇಳಿ ನಿಲ್ಲಿಸುತ್ತಾನೆ । ಒಂದೇ ದಿನದಲ್ಲಿ ತಯಾರಿಸಿರುವ ಬಟ್ಟೆಯನ್ನು ಮುಂದಿನ ೨ ಮಂತ್ರಗಳಿಂದ ಮುಟ್ಟಿ, ಮುಂದಿನ ೩ ಮಂತ್ರಗಳಿಂದ ಬಟ್ಟೆಯನ್ನು ಕುಮಾರನಿಗೆ ಉಡಿಸಿ ಬಟ್ಟೆ ಉಟ್ಟಿರುವ ಕುಮಾರನನ್ನು ಮುಂದಿನ ಮಂತ್ರದಿಂದ ಅನುಮಂತ್ರಣೇ ಮಾಡುತ್ತಾನೆ । ನೊಜೇ ಹುಲ್ಲಿನಿಂದ ಮಾಡಿದ ೩ ಎಳೆಯಿರುವ ಮೇಖಲೆಯನ್ನು(ಸೊಂಟದ ದಾರ) ಪ್ರದಕ್ಷಿಣೆಯಾಗಿ ೩ ಸುತ್ತು ಮುಂದಿನ ೨ ಮಂತ್ರಗಳಿಂದ ಸುತ್ತಬೇಕು ಮತ್ತು ಕೃಷ್ಣಾಜಿನವನ್ನು ಮುಂದಿನ ಮಂತ್ರದಿಂದ ಉತ್ತರೀಯ ವಸ್ತ್ರವಾಗಿ ಧಾರಣೆ ಮಾಡಬೇಕು ॥

ಉತ್ತರೇಣಾಗ್ನಿಂ ದರ್ಭಾನ್ ಸಂಸ್ತೀರ್ಯ ತೇಷ್ವೇನಂ ಉತ್ತರಯಾ ಅವಸ್ಥಾಪ್ಯ । ಉದಕಾಂಜಲಿಂ ಅಸ್ಯ ಅಂಜಲೌ ಆನೀಯ ಉತ್ತರಯಾ ತ್ರಿಃ ಪ್ರೋಕ್ಷ್ಯ ಉತ್ತರೈಃ ದಕ್ಷಿಣೇ ಹಸ್ತೇ ಗೃಹೀತ್ವಾ ಉತ್ತರೈಃ ದೇವತಾಭ್ಯಃ ಪರಿದಾಯೋತ್ತರೇಣ ಯಜುಷಾ ಉಪನೀಯ ಸುಪ್ರಜಾ ಇತಿ ದಕ್ಷಿಣೇ ಕರ್ಣೇ ಜಪತಿ । ಬ್ರಹ್ಮಚರ್ಯಮಾಗಾಂ ಇತಿ ಕುಮಾರ ಆಹ । ಪ್ರಷ್ಟಂ ಪರಸ್ಯ ಪ್ರತಿವಚನಂ ಕುಮಾರಸ್ಯ । ಶೇಷಂ ಪರೋ ಜಪತಿ । ಪ್ರತ್ಯಗಾಶಿಷಂ ಚೈನಂ ವಾಚಯತಿ??? । ಉಕ್ತಂ ಆಜ್ಯಭಾಗಾಂತರಂ । ಅತ್ರೈನಂ ಉತ್ತರಾ ಆಹುತೀರ್ಹಾವಯಿತ್ವಾ ಜಯಾದಿ ಪ್ರತಿಪದ್ಯತೇ । ಪರಿಷೇಚನಾಂತಂ ಕೃತ್ವಾ ॥

ಅಗ್ನಿಯ ಉತ್ತರದಲ್ಲಿ ದರ್ಭೆಗಳನ್ನು ಹರಡಿ ಮುಂದಿನ ಮಂತ್ರದಿಂದ ಅದರ ಮೇಲೆ ಕುಮಾರನನ್ನು ಕೂರಿಸಬೇಕು । ಬೊಗಸೆಯಲ್ಲಿರುವ ನೀರನ್ನು ಕುಮಾರನ

ಬೊಗಸೆಗೆ ಹಾಕಬೇಕು ಮುಂದಿನ ಮಂತ್ರದಿಂದ ೩ ಸಲ ಪ್ರೋಕ್ಷಿಸಬೇಕು ಮುಂದಿನ ಮಂತ್ರಗಳಿಂದ ಬಲಕ್ಕೆ ಹಿಡಿದುಕೊಂಡು ಮುಂದಿನ ಮಂತ್ರಗಳಿಂದ ದೇವತೆಗಳ ರಕ್ಷಣೆಗೆ ಕೊಟ್ಟು ಮುಂದಿನ ಮಂತ್ರದಿಂದ ಹತ್ತಿರಕ್ಕೆ ಕರೆದುಕೊಂಡು ಸುಪ್ರಜಾಃ – ಎಂಬ ಮಂತ್ರವನ್ನು ಬಲಕಿವಿಯಲ್ಲಿ ಹೇಳಬೇಕು । ಬ್ರಹ್ಮಚರ್ಯಮಾಗಾಂ— ಎಂಬ ಮಂತ್ರವನ್ನು ಕುಮಾರನು ಹೇಳುತ್ತಾನೆ । ಪ್ರಶ್ನೆ ತಂದೆಯದು ಉತ್ತರ ಕುಮಾರನದು । ಮುಂದಿನ ಮಂತ್ರವನ್ನು ಆಚಾರ್ಯರು ಹೇಳುತ್ತಾರೆ । ??? । ಆಜ್ಯಭಾಗಾಂತದ ವರೆಗೆ ಹೇಳಿದ್ದಾಯಿತು । ಮುಂದಿನ ಮಂತ್ರಗಳಿಂದ ಹೋಮವನ್ನು ಮಾಡಿಸಿ ಜಯಾದಿ ಹೋಮಗಳನ್ನು ಮಾಡಬೇಕು । ಪರಿಷೇಚನಾಂತದ ವರೆಗೆ ಪ್ರಯೋಗವನ್ನು ಮಾಡಿ ॥

ಅಪರೇಣಾಗ್ನಿಂ ಉದಗಗ್ರಂ ಕೂರ್ಚಂ ನಿಧಾಯ ತಸ್ಮಿನ್ ಉತ್ತರೇಣ ಯಜುಷಾ ಉಪನಯೇತಾ ಉಪವಿಶತಿ । ಪುರಸ್ತಾತ್ ಪ್ರತ್ಯಕ್ ಆಸೀನಃ ಕುಮಾರೋ ದಕ್ಷಿಣೇನ ಪಾಣಿನಾ ದಕ್ಷಿಣಂ ಪಾದಂ ಅನ್ವಾರಭ್ಯ ಆಹಾ ಸಾವಿತ್ರೀಂ ಭೋ ಅನುಬ್ರೂಹೀತಿ । ತಸ್ಮಾಅನ್ವಾಹ ತತ್ಸವಿತುರಿತಿ । ಪಚ್ಛೋರ್ಧರ್ಚ ಶಸ್ತತಃ ಸರ್ವಾಂ । ವ್ಯಾಹೃತೀಃ ವಿಹೃತಾಃ ಪಾದಾದಿಷ್ವಂತೇಷು ವಾ ತಥ ಅರ್ಧರ್ಚಯೋರುತ್ತಮಾಂ ಕೃತ್ಸ್ನಾಯಾಂ ॥

ಅಗ್ನಿಯ ಪಶ್ಚಿಮದಲ್ಲಿ ಉತ್ತರಕ್ಕೆ ಅಗ್ರವಾಗಿ ಕೂರ್ಚವನ್ನು ಇಟ್ಟು ಆ ಕೂರ್ಚದ ಮೇಲೆ ಉಪನಯನ ಮಾಡುವವನು ಮುಂದಿನ ಮಂತ್ರದಿಂದ ಪೂರ್ವಾಭಿಮುಖವಾಗಿ ಕೂರಬೇಕು । ಅವರ ಮುಂದೆ ಪಶ್ಚಿಮಾಭಿಮುಖವಾಗಿ ಕುಮಾರನು ಕುಳಿತು ಅವನು ತನ್ನ ಬಲಕೈಯಿಂದ ಅವರ ಬಲಕಾಲನ್ನು ಹಿಡಿದು ಸಾವಿತ್ರಿಯನ್ನು ನನಗೆ ಉಪದೇಶಿಸಿರಿ ಎಂದು ಪ್ರಾರ್ಥಿಸುತ್ತಾನೆ । ಆಗ ಆಚಾರ್ಯರು ಅವನಿಗೆ ಉಪದೇಶಿಸುತ್ತಾರೆ, ತತ್ಸವಿತುಃ – ಎಂಬ ಮಂತ್ರವನ್ನು । ಪಾದಪಾದವನ್ನಾಗಿ ಹೇಳಿ ಆಮೇಲೆ ಅರ್ಧಋಕ್ಕನ್ನು ಹೇಳಿ ನಂತರ ಪೂರ್ತಿಯಾಗಿ ಮಂತ್ರವನ್ನು ಉಪದೇಶಿಸುತ್ತಾನೆ । ೩ ವ್ಯಾಹೃತಿಗಳನ್ನು ಪಾದದ ಆದಿ ಅಥವಾ ಅಂತ್ಯದಲ್ಲಿ ಹೇಳುವುದು, ಅರ್ಧಋಕ್ಕನ್ನು ಹೇಳುವಾಗಲೇ ಆಗಲೀ ಪೂರ್ತಿಹೇಳುವಾಗಲೇ ಆಗಲೀ ವ್ಯಾಹೃತಿಗಳನ್ನು ಸೇರಿಸುವುದು ॥

ಕುಮಾರ ಉತ್ತರೇಣ ಮಂತ್ರೇಣ ಉತ್ತರಮೋಷ್ಠಂ ಉಪಸ್ಪೃಶತೇ । ಕರ್ಣಾವುತ್ತರೇಣ । ದಂಡಮುತ್ತರೇಣ ಆದತ್ತೇ । ಪಾಲಾಶೋ ದಂಡೋ ಬ್ರಾಹ್ಮಣಸ್ಯ, ನೈಯ್ಯಗ್ರೋಧಸ್ಸ್ಕಂಧಜೋಽವಾಂಗ್ರೋ ರಾಜನ್ಯಸ್ಯ, ಬಾದರ ಔದುಂಬರೋ ವಾ ವೈಶ್ಯಸ್ಯ । ವಾರ್ಕ್ಷ್ಣೀ ದಂಡ ಇತ್ಯವರ್ಣ ಸಂಯೋಗೇ ನೈಕೇ ಉಪದಿಶಂತಿ ॥

ಕುಮಾರನು ಮುಂದಿನ ಮಂತ್ರದಿಂದ ತನ್ನ ಮೇಲಿನ ತುಟಿಯನ್ನು ಮುಟ್ಟುವುದು । ಮುಂದಿನ ಮಂತ್ರಗಳಿಂದ ಕಿವಿಗಳನ್ನು ಮುಟ್ಟುವುದು । ಮುಂದಿನ ಮಂತ್ರಗಳಿಂದ ದಂಡವನ್ನು ತೆಗೆದುಕೊಳ್ಳುತ್ತಾನೆ । ಪಾಲಾಶ ಮರದ(ಮುತ್ತುಗ) ದಂಡವು ಬ್ರಾಹ್ಮಣರಿಗೆ, ನೆಗ್ರೋಧ ಮರದ (ಆಲ) ದಂಡವು ಹೆಗಲಿನಷ್ಟು ಎತ್ತರದ್ದು, ತುದಿ ಬಾಗಿರುವುದು ಕ್ಷತ್ರಿಯರಿಗೆ, ಔದುಂಬರ (ಅತ್ತಿ) ಅಥವಾ ಬಾದರ (ಒಂದು ರೀತಿಯ ಮರ) ಮರದ ದಂಡವು ವೈಶ್ಯರಿಗೆ । ಯಾರಿಗೇ ಆಗಲೀ ಒಟ್ಟಿನಲ್ಲಿ ಯಜ್ಞೀಯ ವೃಕ್ಷಗಳ ದಂಡವು ಆಗಿರಬೇಕು ಎಂದು ಕೆಲವರ ಅಭಿಮತ ॥

ಸ್ಮೃತಂ ಚ ಮ ಇತ್ಯೇತತ್ ವಾಚಯಿತ್ವಾ ಗುರವೇ ವರಂ ದತ್ವಾ ಉದಾಯುಷೇತಿ ಉತ್ಥಾಪ್ಯ ಉತ್ತರೈಃ ಆದಿತ್ಯಂ ಉಪತಿಷ್ಠತೇ । ಯಂಕಾಮಯೇತ ನಾಯಮಚ್ಛಿದ್ಯೇತೇತಿ ತಮುತ್ತರಯಾ ದಕ್ಷಿಣೇ ಹಸ್ತೇ ಗೃಹ್ಣೀಯಾತ್ । ತ್ರ್ಯಹಮೇತಂ ಅಗ್ನಿಂ ಧಾರಯಂತಿ । ಕ್ಷಾರ ಲವಣ ವರ್ಜನಂಚ । ಪರಿತ್ವೇತಿ ಪರಿಮೃಜ್ಯ ತಸ್ಮಿನ್ ಉತ್ತರೈಃ ಮಂತ್ರೈಃ ಸಮಿಧ ಆದಧ್ಯಾತ್ । ಏವಂ ಅನ್ಯಸ್ಮಿನ್ ಅಪಿ ಸದಾರಣ್ಯಾದೇಧಾನಾಹೃತ್ಯ । ಉತ್ತರಯಾ ಸಂಶಾಸ್ತಿ । ವಾಸಶ್ಚತುರ್ಥೀಂ ಉತ್ತರಯಾದತ್ತೇ ಅನ್ಯತ್ ಪರಿಧಾಪ್ಯ ॥

ಸ್ಮೃತಂ ಚ ಮೇ – ಈ ಮಂತ್ರಗಳನ್ನು ಹೇಳಿಸಿ ಗುರುಗಳಿಗೆ ಹಸುವನ್ನು ದಾನ ಮಾಡಿ ಉದಾಯುಷಾ –ಮಂತ್ರದಿಂದ ಕುಮಾರನನ್ನು ನಿಲ್ಲಿಸಿ ಮುಂದಿನ ಮಂತ್ರಗಳಿಂದ ಆದಿತ್ಯ ಉಪಸ್ಥಾನವನ್ನು ಮಾಡಬೇಕು । ಸಮಾವರ್ತನೆಯವರೆಗೆ ಈ ಬ್ರಹ್ಮಚಾರಿಗೆ ವಿದ್ಯಾಭ್ಯಾಸವನ್ನು ಅವಿಚ್ಛಿನ್ನವಾಗಿ ಮಾಡಿಸುವ ಕಾಮನೆಯುಳ್ಳಂತಹ ವಿದ್ವಾಂಸರು

ಅವನ ಬಲಕೈಯನ್ನು ಮುಂದಿನ ಮಂತ್ರದಿಂದ ಹಿಡಿದುಕೊಳ್ಳಬೇಕು । ೩ ದಿನ ಈ ಅಗ್ನಿಯನ್ನು ಉಳಿಸಿಕೊಳ್ಳಬೇಕು । ಉಪ್ಪು, ಖಾರಗಳನ್ನು ಹೆಚ್ಚಿಗೆ ತಿನ್ನಬಾರದು । ಪರಿತ್ವಾಗ್ನೇ – ಮಂತ್ರದಿಂದ ಅಗ್ನಿಯ ಸುತ್ತಾಸ್ವಚ್ಛಗೊಳಿಸಿ ಆ ಅಗ್ನಿಯಲ್ಲಿ ಮುಂದಿನ ಮಂತ್ರಗಳಿಂದ ಸಮಿತ್ ಹೋಮವನ್ನು ಮಾಡಬೇಕು । ಹೀಗೆ ಸಮಾವರ್ತನೆಯ ವರೆಗೆ ಸಮಿದಾಧಾನವನ್ನು ಮಾಡುತ್ತಿರಬೇಕು । ಮುಂದಿನ ಮಂತ್ರದಿಂದ ತಿಳಿದು ಬರುವ ನಿಯಮಗಳಿಗೆ ಬದ್ಧನಾಗಿರಬೇಕು । ೪ ನೇ ದಿನ ಸ್ನಾನವಾದ ಮೇಲೆ ಮುಂದಿನ ಮಂತ್ರದಿಂದ ದೀಕ್ಷೆಯ ಬಟ್ಟೆಯನ್ನು ತೆಗೆದು, ಬೇರೆವಸ್ತ್ರವನ್ನು ಉಡುತ್ತಾನೆ ॥

ಉಪನಯನಂ – ಪ್ರಯೋಗಃ

ಪೂರ್ವೇದ್ಯುಃ – ಮಂಗಳಸ್ನಾನಂ, ನಿತ್ಯಾಹ್ನಿಕಂ ಚ ಕೃತ್ವಾ । ಆಚಮನಂ – ಆಸನವಿಧಿಂ – ಪವಿತ್ರಧಾರಣಂ – ಪ್ರಾಣಾಯಾಮಂ – ಘಂಟಾನಾದಂ – ದೀಪಪೂಜಾಂ ಚ ಕೃತ್ವಾ ॥

ಹಿಂದಿನ ದಿನ ಬೆಳಿಗ್ಗೆ – ಮಂಗಳ ಸ್ನಾನ, ನಿತ್ಯಾಹ್ನಿಕಗಳನ್ನೂ ಮಾಡಿ । ಆಚಮನವನ್ನೂ, ಆಸನವಿಧಿಯನ್ನೂ, ಪವಿತ್ರಧಾರಣೆಯನ್ನೂ, ಪ್ರಾಣಾಯಾಮವನ್ನೂ, ಘಂಟಾನಾದವನ್ನೂ, ದೀಪಪೂಜೆಗಳನ್ನೂ ಸಹ ಮಾಡಿ ॥

.....ಶ್ರೀಪರಮೇಶ್ವರ ಪ್ರೀತ್ಯರ್ಥಂ, ಪ್ರಾರಿಪ್ಸಿತಸ್ಯ ಕರ್ಮಣಃ ನಿರ್ವಿಘ್ನೇನ ಪರಿಸಮಾಪ್ತ್ಯರ್ಥಂ ಆದೌ ಮಹಾಗಣಪತಿ ಪೂಜಾಂ ಕರಿಷ್ಯೇ, ತದಾದೌ ಕಲಶಪೂಜಾಂ ಚ ಕರಿಷ್ಯೇ, ಇತಿ ಸಂಕಲ್ಪ್ಯ – ಕೃತ್ವಾ ॥

....ಶ್ರೀಪರಮೇಶ್ವರ ಪ್ರೀತ್ಯರ್ಥವಾಗಿ, ಮುಂದೆ ಮಾಡಲಿರುವ ಕರ್ಮದ ನಿರ್ವಿಘ್ನತೆಗಾಗಿ, ಮೊದಲು ಗಣಪತಿಯ ಆರಾಧನೆಯನ್ನು ಅದಕ್ಕೂ ಮೊದಲು ಕಲಶಪೂಜೆಯನ್ನೂ ಮಾಡುತ್ತೇನೆ ಎಂದು ಸಂಕಲ್ಪಿಸಿ – ಪೂಜೆಯನ್ನು ಮಾಡುವುದು ॥

ಸಂಕಲ್ಪ:

ಶುಭೇ ಶೋಭನೇ ಮುಹೂರ್ತೇ.....ಪ್ರೀತ್ಯರ್ಥಂ, ...ಗೋತ್ರೇ ....ನಕ್ಷತ್ರೇ ....ರಾಶೌ ಜಾತಸ್ಯ .....ಶರ್ಮಾ ನಾಮಧೇಯಸ್ಯ, ...ನಕ್ಷತ್ರೇ ....ರಾಶೌ ಜಾತಾಯಾ: .....ನಾಮ್ನ್ಯಾ: ಮಮ ಧರ್ಮಕಾಂತಾಯಾ:, ...ಗೋತ್ರೇ ...ನಕ್ಷತ್ರೇ ...ರಾಶೌ ಜಾತಂ .....ಶರ್ಮಾನಾಮ ಮಮ ಕುಮಾರಂ (ಅದ್ಯ) ಶ್ವಃ ಉಪನಯನ ಕರ್ಮಣಾ ಸಂಸ್ಕರಿಷ್ಯಾಮಿ, ಇತಿ ಸಂಕಲ್ಪ್ಯ ॥

ಸಂಕಲ್ಪವನ್ನು ಆರಂಭಿಸುತ್ತಾ.....ಪರಮೇಶ್ವರನ ಪ್ರೀತ್ಯರ್ಥವಾಗಿ, ಈ ಗೋತ್ರದಲ್ಲಿ, ಈ ನಕ್ಷತ್ರದಲ್ಲಿ, ಈ ರಾಶಿಯಲ್ಲಿ ಜನಿಸಿರುವ ಈ ಹೆಸರಿನ ಹಾಗೂ ಈ ಗೋತ್ರದಲ್ಲಿ, ಈ ನಕ್ಷತ್ರದಲ್ಲಿ, ಈ ರಾಶಿಯಲ್ಲಿ ಜನಿಸಿರುವ, ಈ ಹೆಸರಿನ ನನ್ನ ಪತ್ನಿಯು ಮತ್ತು ಈ ಗೋತ್ರದಲ್ಲಿ, ಈ ನಕ್ಷತ್ರದಲ್ಲಿ, ಈ ರಾಶಿಯಲ್ಲಿ, ಹುಟ್ಟಿರುವ ಈ ಹೆಸರಿನ ನಮ್ಮಿಬ್ಬರ ಮಗನನ್ನು (ಇಂದು) ನಾಳೇ ಉಪನಯನ ಕರ್ಮದಿಂದ ಸಂಸ್ಕರಿಸುತ್ತೇನೆ, ಹೀಗೆ ಸಂಕಲ್ಪಿಸುವುದು ॥

ಕರಿಷ್ಯಮಾಣ ಉಪನಯನಕರ್ಮಾಂಗಭೂತಂ ತದಾದೌ ಸ್ಥಲ ಶುದ್ಧ್ಯರ್ಥಂ ವೃದ್ಧ್ಯರ್ಥಂ ಅಭ್ಯುದಯಾರ್ಥಂ ಚ ಬ್ರಾಹ್ಮಣೈಸ್ಸಹ ಸ್ವಸ್ತಿ ಪುಣ್ಯಾಹವಾಚನಂ ಕರಿಷ್ಯೇ ಇತಿ ಸಂಕಲ್ಪ್ಯ – ಪುಣ್ಯಾಹಂ ಕೃತ್ವಾ ॥

ಮಾಡಲಿರುವ ಉಪನಯನ ಕರ್ಮದ ಅಂಗವಾಗಿ ಸ್ಥಳ, ದ್ರವ್ಯಗಳ ಶುದ್ಧಿಗಾಗಿ ಮತ್ತು ಪುಷ್ಟಿ ಹಾಗೂ ತುಷ್ಟಿಗಾಗಿ ಪುಣ್ಯಾಹವಾಚನವನ್ನು ಮಾಡುತ್ತೇನೆ ಎಂದು ಸಂಕಲ್ಪಿಸುವುದು – ಪುಣ್ಯಾಹವನ್ನು ಮಾಡುವುದು ॥

ಕುಮಾರಸ್ಯ ಕೃಚ್ಛ್ರಃ (ಪೆನಾಲ್ಟಿ) – ವಟುಃ ಆಚಮ್ಯ, ಪವಿತ್ರಂ ಧೃತ್ವಾ । ..... ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಮಮ ಜನ್ಮ ಶುಭಲಗ್ನ ಪ್ರಭೃತಿ

ಏತತ್ ಉಪನಯನ ಶುಭಲಗ್ನ ಪರ್ಯಂತಂ ಮಧ್ಯೇವರ್ತಿಷು ದಿವಸೇಷು ಮಾತಾಪಿತ್ರಾದಿ ಉಪೇಕ್ಷಯಾ ಸವರ್ಣ ಅಸವರ್ಣ ಧಾತ್ರೀ ಜನಯಿತ್ರೀ ಪ್ರಮುಖ ಅನೇಕ ಜನಸ್ತನ್ಯಪಾನ – ಶೂದ್ರೀಯಸ್ತನ್ಯಪಾನ – ಅಜಾಸ್ತನ್ಯಪಾನ – ಅವಿಸ್ತನ್ಯಪಾನ – ಉಚ್ಛಿಷ್ಟಸ್ತನ್ಯಪಾನ – ಇತರ ಜನೈಃ ಸಹಕ್ರೀಡಾ – ಸಸಲ್ಲಾಪ – ಸಹಪಂಕ್ತಿಭೋಜನ – ಪುಷ್ಪವತ್ಯಾ ಸಹಕ್ರೀಡಾ – ಸಸಲ್ಲಾಪ – ಸಹಪಂಕ್ತಿಭೋಜನ – ತಿಷ್ಠನ್‌ಮೂತ್ರ – ಧಾವನ್ಮೂತ್ರ – ಖಟ್ವಾಮೂತ್ರ – ಮೂತ್ರಪುರೀಷ ಉತ್ಸರ್ಜನ – ತತ್ತತ್ ಕಾಲ ಶೌಚಾಭಾವ – ಕಾಮಚಾರ – ಕಾಮಭಕ್ಷಣ – ಕಾಮವಾದ ಪ್ರಭೃತೀನಾಂ ಸರ್ವೇಷಾಂ ಪಾಪಾನಾಂ ಸದ್ಯಃ ಅಪನೋದನಾರ್ಥಂ, ಬ್ರಹ್ಮಚರ್ಯ ಆಶ್ರಮೋಕ್ತ ನಿತ್ಯ ಕರ್ಮಾನುಷ್ಠಾನ ಯೋಗ್ಯತಾ ಸಿದ್ಧ್ಯರ್ಥಂ, ಬ್ರಹ್ಮತೇಜಃ ಅಭಿವೃದ್ಧ್ಯರ್ಥಂ, ಯಜ್ಞೋಪವೀತ ಮೇಖಲ ಅಜಿನ ದಂಡಧಾರಣ ಯೋಗ್ಯತಾ ಸಿದ್ಧ್ಯರ್ಥಂ, ಬ್ರಹ್ಮೋಪದೇಶ ಗಾಯತ್ರೀ ಸ್ವೀಕರಣ ಯೋಗ್ಯತಾ ಸಿದ್ಧ್ಯರ್ಥಂ, ಶ್ರದ್ಧಾ – ಮೇಧಾ – ಪ್ರಜ್ಞಾ – ಸದ್ವಿದ್ಯಾ – ಸದ್ಬುದ್ಧಿ – ಸತ್ಸಂಸ್ಕಾರ ಸಿದ್ಧ್ಯರ್ಥಂ, ಮಮ ಶರೀರ ಶುದ್ಧ್ಯರ್ಥಂ, ಲಕ್ಷ್ಮೀನಾರಾಯಣ ಪ್ರೀತ್ಯರ್ಥಂ, ಪ್ರಾಜಾಪತ್ಯ ಕೃಚ್ಛ್ರಾಚರಣಂ ಕರಿಷ್ಯೇ (ಅಶಕ್ತತ್ವಾತ್ – ಕೃಚ್ಛ್ರ ಪ್ರತಿನಿಧಿ ಯಥಾಶಕ್ತಿ ಹಿರಣ್ಯದಾನಂ ಕರಿಷ್ಯೇ) ಇತಿ ಸಂಕಲ್ಪ್ಯ ॥

ವಟುವಿನ ಪ್ರಾಜಾಪತ್ಯಕೃಚ್ಛ್ರ (ಪೆನಾಲ್ಟಿ) – ಕುಮಾರನು ನಾಮತ್ರಯಗಳಿಂದ ಆಚಮನ ಮಾಡಿ, ಪವಿತ್ರವನ್ನು ಧರಿಸಿ । .....ಶ್ರೀ ಪರಮೇಶ್ವರ ಪ್ರೀತ್ಯರ್ಥವಾಗಿ, ನಾನು ಹುಟ್ಟಿದಾರಭ್ಯ ಈ ಉಪನಯನ ಶುಭಲಗ್ನದ ಕೊನೆಯವರೆಗೆ ಮಧ್ಯದ ದಿನಗಳಲ್ಲಿ ತಂದೆತಾಯಿಗಳ ಉಪೇಕ್ಷೆಯಿಂದ ನನ್ನ ವರ್ಣದಲ್ಲಾಗಲೀ, ಇತರ ವರ್ಣಗಳಲ್ಲಾಗಲೀ ದಾಸಿಯರು(ಸೂಲಗಿತ್ತಿ) ಮುಂತಾದ ಅನೇಕ ಜನರ ಸ್ತನ್ಯಪಾನ – ಶೂದ್ರೀಯರ ಸ್ತನ್ಯಪಾನ – ಆಡಿನ ಸ್ತನ್ಯಪಾನ – ಕುರಿಯ ಸ್ತನ್ಯಪಾನ – ಎಂಜಲಾದ ಸ್ತನ್ಯಪಾನ – ಬೇರೆಯವರ ಜೊತೆ ಆಡುವುದು – ಸಲ್ಲಾಪ –

ಜೊತೆಯಲ್ಲಿ ಊಟ – ಋತುಮತಿಯಾದವರ ಜೊತೆ ಸಹವಾಸ, ಮಾತು, ಊಟ – ನಿಂತು ಮೂತ್ರ, ಓಡುತ್ತಾ ಮೂತ್ರ, ಮಂಚದ ಮೇಲೆ ಮೂತ್ರ ಮಾಡುವುದು – ಮಲವಿಸರ್ಜನೆ – ಆಯಾಯ ಕಾಲಕ್ಕೆ ಸ್ವಚ್ಛವಾಗಿರದೇ ಇರುವುದು – ಸ್ವೇಚ್ಛಾಚಾರ – ಸ್ವೇಚ್ಛಾಮಾತು – ಸ್ವೇಚ್ಛೆಯಿಂದ ಆಹಾರ ಭಕ್ಷಣ ಇತ್ಯಾದಿ ಎಲ್ಲಾ ಪಾಪಗಳನ್ನು ಈಗ ಕಳೆದುಕೊಳ್ಳುವುದಕ್ಕಾಗಿ ಬ್ರಹ್ಮಚರ್ಯ ಆಶ್ರಮಕ್ಕೆ ಉಕ್ತವಾದ ನಿತ್ಯಕರ್ಮಗಳನ್ನು ಮಾಡುವ ಯೋಗ್ಯತೆಯ ಸಂಪಾದನೆಗಾಗಿ, ಯಜ್ಞೋಪವೀತ – ಮೇಖಲಾಜಿನ – ದಂಡಗಳನ್ನು ಧಾರಣೆ ಮಾಡುವ ಯೋಗ್ಯತೆಯ ಸಂಪಾದನೆಗೆ, ಬ್ರಹ್ಮೋಪದೇಶವನ್ನು – ಗಾಯತ್ರೀ ಮಂತ್ರವನ್ನು ಪಡೆಯಲು ಯೋಗ್ಯತೆ ಉಂಟಾಗಲು, ಆಸಕ್ತಿ – ವಿಶೇಷ ತಿಳುವಳಿಕೆ ಹಾಗೂ ಪ್ರಜ್ಞೆಯ ಸಿದ್ಧಿಗೆ, ನನ್ನ ಶರೀರ ಶುದ್ಧಿ ಆಗುವುದಕ್ಕಾಗಿ, ಲಕ್ಷ್ಮೀನಾರಾಯಣ ಪ್ರೀತಿಗಾಗಿ ಪ್ರಾಜಾಪತ್ಯ ಕೃಚ್ಛ್ರಾಚರಣೆಯನ್ನು (ಅಶಕ್ತರಾದವರು ಮಾತ್ರ– ಕೃಚ್ಛ್ರಕ್ಕೆ ಪ್ರತಿನಿಧಿಯಾಗಿ ಯಥಾಶಕ್ತಿ ಹಿರಣ್ಯವನ್ನು ದಾನಮಾಡುತ್ತೇನೆ) ಮಾಡುತ್ತೇನೆ ಎಂದು ಸಂಕಲ್ಪಿಸುವುದು ॥

(ವಿಶೇಷ ವಿಷಯ – ೧ ಪ್ರಾಜಾಪತ್ಯ ಕೃಚ್ಛ್ರವೆಂದರೆ – ೧೦೮ ಸಲ ಸೂರ್ಯನಮಸ್ಕಾರ ಮಾಡುವುದು ಅಥವಾ ೧೦,೦೦೦ ಸಲ ಸೂರ್ಯಮಂತ್ರಜಪ ಮಾಡುವುದು ಅಥವಾ ಸಮುದ್ರವನ್ನು ನೇರವಾಗಿ ಸೇರುವ ನದಿ ಸಮುದ್ರದ ಸಂಗಮ ಸ್ಥಾನದಲ್ಲಿ ಸ್ನಾನವನ್ನು ಮಾಡುವುದು ಅಥವಾ ಪ್ರತ್ಯಕ್ಷ ೧ ಗೋದಾನ ಮಾಡುವುದು ಅಥವಾ ತತ್ಸಮಾನವಾದ ಹಿರಣ್ಯದಾನ ಮಾಡುವುದು ಅಥವಾ ಮೊದಲದಿನ ಹಗಲು ಆಹಾರಸೇವನೆ ಮಾಡಿ ರಾತ್ರಿ ಉಪವಾಸವಿರುವುದು, ೨ನೇದಿನ ಹಗಲು ಉಪವಾಸವಿದ್ದು ರಾತ್ರಿ ಆಹಾರಸೇವನೆ ಮಾಡುವುದು, ೩ನೇ ದಿನ ಪೂರ್ತಿ ಉಪವಾಸ ಮಾಡುವುದು, ೪ನೇ ದಿನ ಯಾರಾದರೂ ಆಹಾರವನ್ನು ಕೊಟ್ಟರೆ ಕೊಟ್ಟಷ್ಟನ್ನು ಮಾತ್ರಾ ಸೇವನೆ ಮಾಡುವುದು ಈ ರೀತಿ ೩ ಆವೃತ್ತಿ ಅಂದರೆ ೧೨ ದಿನ ಮಾಡಿದರೆ ೧ ಪ್ರಾಜಾಪತ್ಯ ಕೃಚ್ಛ್ರವಾಗುತ್ತದೆ)

ತದಂಗತ್ವೇನ ಬ್ರಾಹ್ಮಣ ಪೂಜಾಂ ಕರಿಷ್ಯೇ । ನಮೋಸ್ತ್ವನಂತಾಯ ಸಹಸ್ರಮೂರ್ತಯೇ । ಸಹಸ್ರಪಾದಾಕ್ಷಿ ಶಿರೋರುಬಾಹವೇ । ಸಹಸ್ರನಾಮ್ನೇ

ಪುರುಷಾಯ ಶಾಸತೇ। ಸಹಸ್ರಕೋಟಿಯುಗಧಾರಿಣೇ ನಮಃ। ಲಕ್ಷ್ಮೀನಾರಾಯಣ ಸ್ವರೂಪಾಃ ಬ್ರಾಹ್ಮಣಾಃ ಗಂಧಾದಿ ಸಕಲಾರಾಧನೈಃ ಸ್ವರ್ಚಿತಂ। ಹಿರಣ್ಯಗರ್ಭ ಗರ್ಭಸ್ಥಂ ಹೇಮಬೀಜಂ ವಿಭಾವಸೋಃ । ಅನಂತ ಪುಣ್ಯ ಫಲದಂ ಅತಃ ಶಾಂತಿಂ ಪ್ರಯಚ್ಛಮೇ।

ಮಮ ಜನ್ಮ ಶುಭಲಗ್ನ ಪ್ರಭೃತಿ ಏತತ್ ಉಪನಯನ ಶುಭಲಗ್ನ ಪರ್ಯಂತಂ ಮಧ್ಯೇವರ್ತಿಷು ದಿವಸೇಷು ಯಥಾಸಂಭಾವಿತ ಸಮಸ್ತದೋಷ ಪರಿಹಾರಂ ಕಾಮಯಮಾನಃ, ಬ್ರಹ್ಮಚರ್ಯ ಆಶ್ರಮೋಕ್ತ ನಿತ್ಯ ಕರ್ಮಾನುಷ್ಠಾನ ಯೋಗ್ಯತಾ ಸಿದ್ಧಿಂ ಕಾಮಯಮಾನಃ, ಪೂರ್ವೋಕ್ತ ಸಮಸ್ತ ಯೋಗ್ಯತಾ ಸಿದ್ಧಿಂ ಕಾಮಯಮಾನಃ, ಲಕ್ಷ್ಮೀನಾರಾಯಣ ಪ್ರೀತಿಂ ಕಾಮಯಮಾನಃ ಇದಂ ಪ್ರಾಜಾಪತ್ಯ ಕೃಚ್ಛ್ರ ಪ್ರತಿನಿಧಿ ಯಥಾಶಕ್ತಿ ಹಿರಣ್ಯಂ ನಾನಾ ಗೋತ್ರೇಭ್ಯಃ ಶಾಖಿಭ್ಯಃ ಬ್ರಾಹ್ಮಣೇಭ್ಯಃ ನಾಮಧೇಯೇಭ್ಯಃ ತೇಭ್ಯಃ ತೇಭ್ಯಃ ಸಂಪ್ರದದೇ ಇದಂ ನಮಮ।

ಇದಂ ಸ್ವೀಕೃತ್ಯ, ಮಮ ಜನ್ಮ ಶುಭಲಗ್ನ ಪ್ರಭೃತಿ ಏತತ್ ಉಪನಯನ ಶುಭಲಗ್ನ ಪರ್ಯಂತಂ ಮಧ್ಯೇವರ್ತಿಷು ದಿವಸೇಷು ಯಥಾಸಂಭಾವಿತ ಸಮಸ್ತದೋಷ ಪರಿಹಾರಃ ಅಸ್ತ್ವಿತಿ, ಬ್ರಹ್ಮಚರ್ಯ ಆಶ್ರಮೋಕ್ತ ನಿತ್ಯ ಕರ್ಮಾನುಷ್ಠಾನ ಯೋಗ್ಯತಾ ಸಿದ್ಧಿಃ ಅಸ್ತ್ವಿತಿ, ಪೂರ್ವೋಕ್ತ ಸಮಸ್ತ ಯೋಗ್ಯತಾ ಸಿದ್ಧಿ: ಅಸ್ತ್ವಿತಿ, ಲಕ್ಷ್ಮೀನಾರಾಯಣಃ ಸುಪ್ರೀತಃ ಸುಪ್ರಸನ್ನ: ವರದೋ ಭವಂತು ಇತ್ಯನುಗೃಹ್ಣಂತು। ತಥಾಸ್ತು ಇತಿ ಪ್ರತಿವಚನಂ ॥

ತದಂಗವಾಗಿ ಬ್ರಾಹ್ಮಣರ ಪೂಜೆಯನ್ನು ಮಾಡುತ್ತಿದ್ದೇನೆ । ನಮೋಸ್ತ್ವನಂತಾಯ .....॥ ಲಕ್ಷ್ಮೀನಾರಾಯಣ ಸ್ವರೂಪರಾದ ಬ್ರಾಹ್ಮಣರೇ ತಾವು ಗಂಧಾಕ್ಷತೆಗಳಿಂದ ಆರಾಧಿಸಲ್ಪಟ್ಟಿರಿ । ಹಿರಣ್ಯಗರ್ಭ ....ಮೇ ॥

ನಾನು ಹುಟ್ಟಿದಾರಭ್ಯ ಈ ಉಪನಯನ ಶುಭಲಗ್ನದವರೆಗೆ ಮಾಡಲ್ಪಟ್ಟಿರುವ ಎಲ್ಲಾ ಪಾಪಗಳನ್ನು ಈಗ ಕಳೆದುಕೊಳ್ಳುವುದಕ್ಕಾಗಿ, ಬ್ರಹ್ಮಚರ್ಯ ಆಶ್ರಮಕ್ಕೆ ಉಕ್ತವಾದ ನಿತ್ಯಕರ್ಮಗಳನ್ನು ಮಾಡುವ ಯೋಗ್ಯತೆಯನ್ನು ಅಪೇಕ್ಷಿಸುತ್ತಿರುವ, ಬ್ರಹ್ಮೋಪದೇಶವನ್ನು – ಗಾಯತ್ರೀ ಮಂತ್ರವನ್ನು ಪಡೆಯಲು ಯೋಗ್ಯತೆಯನ್ನು ಹಾಗೂ ಈ ಹಿಂದೆ ತಿಳಿಸಿರುವ ಎಲ್ಲಾ ಯೋಗ್ಯತೆಗಳನ್ನೂ ಅಪೇಕ್ಷಿಸುತ್ತಿರುವ ನಾನು ಈ ಪ್ರಾಜಾಪತ್ಯ ಕೃಚ್ಛ್ರ ಪ್ರತಿನಿಧಿಯಾದ ಯಥಾಶಕ್ತಿ ಹಿರಣ್ಯವನ್ನು ನಾನಾ ಗೋತ್ರದ ನಾನಾ ಶಾಖೆಯ ನಾನಾ ಹೆಸರುಗಳ ಬ್ರಾಹ್ಮಣರಿಗೆ ಸಮರ್ಪಿಸುತ್ತಿದ್ದೇನೆ ॥

ಇದನ್ನು ತಾವುಗಳು ಸ್ವೀಕರಿಸಿ, ಈ ಉಪನಯನ ಶುಭಲಗ್ನದವರೆಗೆ ಮಾಡಲ್ಪಟ್ಟಿರುವ ಎಲ್ಲಾ ಪಾಪಗಳನ್ನು ಈಗ ಕಳೆದುಕೊಳ್ಳುವುದಕ್ಕಾಗಿ ಬ್ರಹ್ಮಚರ್ಯ ಆಶ್ರಮಕ್ಕೆ ಉಕ್ತವಾದ ನಿತ್ಯಕರ್ಮಗಳನ್ನು ಮಾಡುವ ಯೋಗ್ಯತೆಯು ಹಾಗೂ ಈ ಹಿಂದೆ ಪ್ರಾರ್ಥಿಸಿರುವ ಎಲ್ಲಾ ಯೋಗ್ಯತೆಗಳೂ ಸಿಗಲಿ ಎಂದು ತಾವುಗಳು ಅನುಗ್ರಹಿಸಿರಿ । ಹಾಗೆಯೇ ಆಗಲೀ ಎಂದು ಸಭೆಯ ಪ್ರತಿವಚನ ॥

ಜನಕಸ್ಯ ಕೃಚ್ಛ್ರಃ – ಪಿತುಃ ಆಚಮ್ಯ, ಪ್ರಾಣಾನಾಯಮ್ಯ । ಮಮ ಕುಮಾರಸ್ಯ ಬ್ರಹ್ಮೋಪದೇಶ ಪುರಸ್ಸರ ಗಾಯತ್ರೀ ಮಂತ್ರ ಉಪದೇಶ ಯೋಗ್ಯತಾ ಸಿದ್ಧ್ಯರ್ಥಂ ಪ್ರಾಜಾಪತ್ಯ ಕೃಚ್ಛ್ರ ಪ್ರತಿನಿಧಿ ಯಥಾಶಕ್ತಿ ಹಿರಣ್ಯದಾನಂ ಕರಿಷ್ಯೇ, ಇತಿ ಸಂಕಲ್ಪ್ಯ ।

ತದಂಗತ್ವೇನ ಬ್ರಾಹ್ಮಣ ಪೂಜಾಂ ಕರಿಷ್ಯೇ । ನಮೋಸ್ತ್ವನಂತಾಯ ಸಹಸ್ರಮೂರ್ತಯೇ । ಸಹಸ್ರಪಾದಾಕ್ಷಿ ಶಿರೋರುಬಾಹವೇ । ಸಹಸ್ರನಾಮ್ನೇ ಪುರುಷಾಯ ಶಾಸತೇ । ಸಹಸ್ರಕೋಟಿಯುಗಧಾರಿಣೇ ನಮಃ । ಲಕ್ಷ್ಮೀನಾರಾಯಣ ಸ್ವರೂಪಾಃ ಬ್ರಾಹ್ಮಣಾಃ ಗಂಧಾದಿ ಸಕಲಾರಾಧನೈಃ ಸ್ವರ್ಚಿತಂ । ಹಿರಣ್ಯಗರ್ಭ ಗರ್ಭಸ್ಥಂ ಹೇಮಬೀಜಂ ವಿಭಾವಸೋಃ ಅನಂತ ಪುಣ್ಯ ಫಲದಂ ಅತಃ ಶಾಂತಿಂ ಪ್ರಯಚ್ಛಮೇ । ಇದಂ ಪ್ರಾಜಾಪತ್ಯ

ಕೃಚ್ಛ್ರ ಪ್ರತಿನಿಧಿ ಯಥಾಶಕ್ತಿ ಹಿರಣ್ಯಂ ನಾನಾ ಗೋತ್ರೇಭ್ಯಃ ಶಾಖಿಭ್ಯಃ ಬ್ರಾಹ್ಮಣೇಭ್ಯಃ ನಾಮಧೇಯೇಭ್ಯಃ ತೇಭ್ಯಃ ತೇಭ್ಯಃ ಸಂಪ್ರದದೇ ಇದಂ ನಮಮ ।

ಇದಂ ಸ್ವೀಕೃತ್ಯ, ಬ್ರಹ್ಮೋಪದೇಶ ಪುರಸ್ಸರ ಗಾಯತ್ರೀಮಂತ್ರ ಉಪದೇಶ ಯೋಗ್ಯತಾ ಸಿದ್ಧಿರಸ್ತ್ವಿತಿ ಭವಂತಃ ಅನುಗೃಹ್ಣಂತು । ತಥಾಸ್ತು ಇತಿ ಪ್ರತಿವಚನಂ ॥

ತಂದೆಯ ಕೃಚ್ಛ್ರ – ತಂದೆಯೂ ಸಹ (ಕರ್ತೃ) ಪ್ರಾಜಾಪತ್ಯ ಕೃಚ್ಛ್ರವಾಗಲೀ, ತತ್ಸಮಾನವಾದ ಹಿರಣ್ಯದಿಂದಾಗಲೀ ಮೇಲೆ ಹೇಳಿರುವ ರೀತಿಯಲ್ಲಿ ಕೃಚ್ಛ್ರಾಚರಣೆಯನ್ನು ತಾನು ಮಾಡುವ ಮಂತ್ರ ಉಪದೇಶದ ಯೋಗ್ಯತೆಯ ಸಂಪಾದನೆಗಾಗಿ ಮಾಡಬೇಕು ॥

ಮಮ.....ಪ್ರೀತ್ಯರ್ಥಂ, ಶ್ವಃ ಕರಿಷ್ಯಮಾಣ ಉಪನಯನಾಂಗಂ ನಾಂದೀ ಶೋಭನದೇವತಾಃ ಪ್ರೀತ್ಯರ್ಥಂ, ಪ್ರಸಾದ ಸಿದ್ಧ್ಯರ್ಥಂ, ನಾಂದೀ ಸಮಾರಾಧನಂ ಕರೀಷ್ಯೇ, ಇತಿ ಸಂಕಲ್ಪ್ಯ – ನಾಂದೀಂ ಕೃತ್ವಾ ॥

ನಾಳೇ ದಿನ ಮಾಡಲಿರುವ ಉಪನಯನ ಸಂಸ್ಕಾರದ ಅಂಗವಾಗಿ, ನಾಂದೀ ಶೋಭನ ದೇವತೆಗಳ ಪ್ರೀತಿಗಾಗಿ, ಅವರ ಅನುಗ್ರಹಕ್ಕಾಗಿ, ನಾಂದೀಸಮಾರಾಧನೆಯನ್ನು ಮಾಡುತ್ತೇನೆ, ಎಂದು ಸಂಕಲ್ಪಿಸುವುದು – ನಾಂದಿಯನ್ನು ಆಚರಿಸುವುದು ॥

ಉಪನಯನಾಂಗಂ ಅಂಕುರಾರೋಪಣಂ ಕರಿಷ್ಯೇ, ಇತಿ ಸಂಕಲ್ಪ್ಯ – ಅಂಕುರಾರೋಪಣಂ ಕೃತ್ವಾ ॥

ಉಪನಯನದ ಅಂಗವಾಗಿ, ಅಂಕುರಾರೋಪಣ ಕರ್ಮವನ್ನು ಮಾಡುತ್ತೇನೆ, ಎಂದು ಸಂಕಲ್ಪಿಸುವುದು – ಅಂಕುರಾರೋಪಣವನ್ನು ಮಾಡುವುದು ॥

ಉಪನಯನಾಂಗಂ, ತಥಾ ರಕ್ಷೋಬಾಧಾ ನಿವಾರಣಾರ್ಥಂ ರಕ್ಷಾಬಂಧನಂ ಕರಿಷ್ಯೇ, ಇತಿ ಸಂಕಲ್ಪ್ಯ – ರಕ್ಷಾಬಂಧನಂ ಕೃತ್ವಾ ॥

ಉಪನಯನದ ಅಂಗವಾಗಿ, ಹಾಗೆಯೇ ಎಲ್ಲಾ ತೊಂದರೆಗಳ ನಿವಾರಣೆಗಾಗಿ ರಕ್ಷಾಬಂಧನವನ್ನು ಮಾಡುತ್ತೇನೆ, ಎಂದು ಸಂಕಲ್ಪಿಸಿ – ರಕ್ಷಾಬಂಧನವನ್ನು ಮಾಡುವುದು ॥

ಅನಂತರಂ, ಲಗ್ನಾನುಕೂಲತಾ ಸಿದ್ಧ್ಯರ್ಥಂ, ನವಗ್ರಹಾದಿ ದೇವತಾಃ ಶಾಂತಿಹವನಂ ಕುರ್ಯಾತ್ ॥

ನಂತರ, ಲಗ್ನಾನುಕೂಲತೆಯ ಸಿದ್ಧಿಗಾಗಿ ನವಗ್ರಹಪೂಜೆ, ಜಪ, ಹೋಮಗಳನ್ನು, ಮಾಡಬೇಕು ॥

ವಿಶೇಷ ವಿಷಯ –

ಆಪಸ್ತಂಬ ಮಹರ್ಷಿಗಳ ಸೂತ್ರವನ್ನು ಅನುಸರಿಸುವವರು, ಯಾವುದೇ ಸಂಸ್ಕಾರ ಕರ್ಮಗಳಲ್ಲಿ ಉದಕಶಾಂತಿಯನ್ನು ಆಚರಿಸಲೇಬೇಕೆಂಬ ಅನಿವಾರ್ಯತೆಯು ಇಲ್ಲ । ಏಕೆಂದರೆ, ಮಹರ್ಷಿಗಳು ತಮ್ಮ ಗೃಹ್ಯಸೂತ್ರದಲ್ಲಿ ಉದಕಶಾಂತಿಯ ಪ್ರಸ್ತಾಪವನ್ನು ಮಾಡಿಲ್ಲವಾದ್ದರಿಂದ । ಬೋಧಾಯನ ಋಷಿಗಳು ತಮ್ಮ ಗೃಹ್ಯಸೂತ್ರದಲ್ಲಿ ಉದಕಶಾಂತಿಯ ಕ್ರಮವನ್ನು ಉಲ್ಲೇಖಿಸಿದ್ದಾರೆ । ಆದರೆ ಉದಕಶಾಂತಿಯಲ್ಲಿ ಬರುವ ವಿಷಯ, ಆಯ್ದ ಮಂತ್ರಭಾಗಗಳ ಪಾರಾಯಣ, ಹಾಗಾಗಿ ಮಂತ್ರಪಾರಾಯಣವೆಂಬುದು ಎಲ್ಲಾ ಕರ್ಮಗಳಲ್ಲೂ ಪ್ರಸ್ತುತವೇ, ಆ ವಿಷಯದಲ್ಲಿ ಸಂದೇಹವಿಲ್ಲ । ಆದರೂ ಆಪಸ್ತಂಬಸೂತ್ರವನ್ನು ಅನುಸರಿಸುವವರು ತಾವು ಮಾಡುವ ಯಾವುದೇ ಸಂಸ್ಕಾರಕರ್ಮಗಳಲ್ಲಿ ಉದಕಶಾಂತಿಯನ್ನು(ಅದೇ ಕ್ರಮದಲ್ಲಿ)

ಮಾಡದಿದ್ದರೂ ಆ ಉದ್ದೇಶಿತ ಸಂಸ್ಕಾರಕರ್ಮವು ದೋಷವಾಗಲೀ ಭ್ರಷ್ಟವಾದದ್ದಾಗಲೀ ಆಗುವುದಿಲ್ಲವೆಂಬುದು ಅತ್ಯಂತ ಸ್ಪಷ್ಟ ॥

ಪರೇದ್ಯುಃ – ಮಂಗಳಸ್ನಾನಂ, ನಿತ್ಯಾಹ್ನಿಕಂ ಚ ಕೃತ್ವಾ । ಆಚಮನಂ – ಆಸನವಿಧಿಂ – ಪವಿತ್ರಧಾರಣಂ – ಪ್ರಾಣಾಯಾಮಂ – ಘಂಟಾನಾದಂ – ದೀಪಪೂಜಾಂ – ಕಲಶಪೂಜಾಂಚ ಕೃತ್ವಾ ॥

ಮರುದಿನ – ತಂದೆಯು ಮಂಗಳಸ್ನಾನ, ನಿತ್ಯಾನುಷ್ಠಾನಗಳನ್ನು ಮಾಡಿಕೊಂಡು ಆಚಮನವನ್ನೂ – ಆಸನವಿಧಿಯನ್ನೂ – ಪವಿತ್ರಧಾರಣೆಯನ್ನೂ – ಪ್ರಾಣಾಯಾಮವನ್ನೂ – ಘಂಟಾನಾದವನ್ನೂ – ದೀಪಪೂಜೆಯನ್ನೂ – ಕಲಶಪೂಜೆಗಳನ್ನೂ ಸಹ ಮಾಡಿ ॥

ಪ್ರಾರಿಪ್ಸಿತಸ್ಯ ಕರ್ಮಣಃ ನಿರ್ವಿಘ್ನೇನ ಪರಿಸಮಾಪ್ತ್ಯರ್ಥಂ ಗಣಪತಿ ಪೂಜಾಂ ಕರೀಷ್ಯೇ ಇತಿ ಸಂಕಲ್ಪ್ಯ – ಗಣಪತಿಪೂಜಾಂ ಚ ಕೃತ್ವಾ ॥

ಮಾಡಲಿರುವ ಉಪನಯನ ಸಂಸ್ಕಾರ ಕರ್ಮವು ನಿರ್ವಿಘ್ನವಾಗಿ ನೆರವೇರುವುದಕ್ಕಾಗಿ, ಮೊದಲು ಗಣಪತಿ ಆರಾಧನೆಯನ್ನು ಮಾಡುತ್ತೇನೆ, ಎಂದು ಸಂಕಲ್ಪಿಸುವುದು – ಗಣಪತಿಪೂಜೆಯನ್ನು ಮಾಡುವುದು ॥

ಸುಮುಹೂರ್ತಮಸ್ತ್ವಿತಿ ಭವಂತಃ ಅನುಗೃಹ್ಣಂತು ಇತಿ ಬ್ರಾಹ್ಮಣಾನ್ ಪ್ರಾರ್ಥ್ಯ । ಸುಮುಹೂರ್ತೋಽಸ್ತು ಇತಿ ಪ್ರತಿವಚನಂ ॥

ಶುಭೇ ಶೋಭನೇ ಮುಹೂರ್ತೇ.....ಪ್ರೀತ್ಯರ್ಥಂ, ...ಗೋತ್ರೇ ....ನಕ್ಷತ್ರೇ ....ರಾಶೌ ಜಾತಸ್ಯ .....ಶರ್ಮಾ ನಾಮಧೇಯಸ್ಯ, ...ನಕ್ಷತ್ರೇ ....ರಾಶೌ

ಜಾತಾಯಾ: .....ನಾಮ್ನ್ಯಾ: ಮಮ ಧರ್ಮಕಾಂತಾಯಾ:, ...ಗೋತ್ರೇ ...ನಕ್ಷತ್ರೇ ...ರಾಶೌ ಜಾತಂ .....ಶರ್ಮಾನಾಮ ಮಮ ಕುಮಾರಂ (ಅದ್ಯ) ಉಪನಯನ ಕರ್ಮಣಾ ಸಂಸ್ಕರಿಷ್ಯಾಮಿ, ಇತಿ ಸಂಕಲ್ಪ್ಯ ॥

ಕರ್ಮವನ್ನು ಆರಂಭಿಸಲು ಸುಮುಹೂರ್ತವಾಗಿದೆ ಎಂದು ತಾವುಗಳು ಅನುಗ್ರಹಿಸಿರಿ ಎಂಬುದಾಗಿ ಬ್ರಾಹ್ಮಣರನ್ನು (ಸಭೆಯನ್ನು) ಪ್ರಾರ್ಥಿಸುವುದು । ಸುಮುಹೂರ್ತವಾಗಿದೆ ಎಂಬುದು ಸಭೆಯ ಮಾತು ॥

ಸಂಕಲ್ಪವನ್ನು ಆರಂಭಿಸುತ್ತಾ.....ಪರಮೇಶ್ವರನ ಪ್ರೀತ್ಯರ್ಥವಾಗಿ, ಈ ಗೋತ್ರದಲ್ಲಿ, ಈ ನಕ್ಷತ್ರದಲ್ಲಿ, ಈ ರಾಶಿಯಲ್ಲಿ ಜನಿಸಿರುವ ಈ ಹೆಸರಿನ ನಾನು, ಹಾಗೂ ಈ ನಕ್ಷತ್ರದಲ್ಲಿ, ಈ ರಾಶಿಯಲ್ಲಿ ಜನಿಸಿರುವ, ಈ ಹೆಸರಿನ ನನ್ನ ಪತ್ನಿಯು ಮತ್ತು ಈ ಗೋತ್ರದಲ್ಲಿ, ಈ ನಕ್ಷತ್ರದಲ್ಲಿ, ಈ ರಾಶಿಯಲ್ಲಿ, ಹುಟ್ಟಿರುವ ಈ ಹೆಸರಿನ ನನ್ನ ಮಗನನ್ನು (ಇಂದು) ಉಪನಯನ ಕರ್ಮದಿಂದ ಸಂಸ್ಕರಿಸುತ್ತೇನೆ, ಹೀಗೆ ಸಂಕಲ್ಪಿಸುವುದು ॥

ಉಪನಯನಾಂಗಂ, ತದಾದೌ ಸ್ಥಲ, ದ್ರವ್ಯ ಶುದ್ಧ್ಯರ್ಥಂ ವೃದ್ಧ್ಯರ್ಥಂ ಅಭ್ಯುದಯಾರ್ಥಂ ಚ ಬ್ರಾಹ್ಮಣೈಸ್ಸಹ ಸ್ವಸ್ತಿ ಪುಣ್ಯಾಹವಾಚನಂ ಕರಿಷ್ಯೇ, ಇತಿ ಸಂಕಲ್ಪ್ಯ – ಪುಣ್ಯಾಹಂ ಕೃತ್ವಾ ॥

ಉಪನಯನದ ಅಂಗವಾಗಿ, ಮೊದಲು ಸ್ಥಳ, ದ್ರವ್ಯಗಳ ಶುದ್ಧಿಗಾಗಿ, ವೃದ್ಧಿಗಾಗಿ ಹಾಗೂ ಅಭ್ಯುದಯಕ್ಕಾಗಿ ಬ್ರಾಹ್ಮಣರೊಂದಿಗೆ ಪುಣ್ಯಾಹವಾಚನವನ್ನು ಮಾಡುತ್ತೇನೆ, ಎಂದು ಸಂಕಲ್ಪಿಸುವುದು – ಪುಣ್ಯಾಹವನ್ನು ಮಾಡುವುದು ॥

ಮಾತೃ ಭೋಜನಂ – ದ್ವಿರಾಚಮ್ಯ, ಮಾತ್ರಾ ಸಹೈವ ಕುಮಾರಂ ಭೋಜಯೇತ್ । ಕ್ಷಾರ, ಲವಣ ವರ್ಜನಂ ಚ, ತೂಷ್ಣೀಂ ಪರಿವೇಚನಂ ॥

ಮಾತೃಭೋಜನ – ೨ ಸಲ ಆಚಮನವನ್ನು ಮಾಡಿಸಿ, ತಾಯಿಯೊಂದಿಗೆ ಕುಮಾರನನ್ನು ಊಟ ಮಾಡಿಸಬೇಕು । ಆ ಆಹಾರದಲ್ಲಿ ಖಾರ, ಉಪ್ಪು ಹೆಚ್ಚಿಗೆ ಇರಬಾರದು, ಕುಮಾರನ ಕೈಯಲ್ಲಿ ನೀರನ್ನು ಆಹಾರದ ಸುತ್ತಲೂ ಅಮಂತ್ರಕವಾಗಿ, ಪ್ರದಕ್ಷಿಣೆಯಾಗಿ ಹಾಕಿಸಬೇಕು ನಂತರ ಆಹಾರ ಸೇವನೆಯನ್ನು ಮಾಡುವುದು ॥

ಉಪನಯನ ಪ್ರಯೋಗಃ –

ಆಚಾರ್ಯಃ, ಪ್ರಾಣಾನಾಯಮ್ಯ, ...ಪ್ರೀತ್ಯರ್ಥಂ, ಉಪನಯನ ಹವನಾರ್ಥಂ ಸ್ಥಂಡಿಲೋಲ್ಲೇಖನಾದಿ ಅಗ್ನಿಪ್ರತಿಷ್ಠಾಪನಂ ಕರಿಷ್ಯೇ, ಇತಿ ಸಂಕಲ್ಪ್ಯ । ಪರ್ಯುಕ್ಷ್ಯ, ಪರಿಮೃಜ್ಯ । ಜಾತವೇದ ನಾಮಾನಮಗ್ನಿಂ (ಲೌಕಿಕ) ಪ್ರತಿಷ್ಠಾಪ್ಯ, ಪ್ರಜ್ವಾಲ್ಯ । ಪರಿಸ್ತೀರ್ಯ, ಅಗ್ನೇರುಪಸಮಾಧಾನಾದಿ ಷಟ್ಪಾತ್ರ ಪಾತ್ರಪ್ರಯೋಗೇ – ಉಪವೀತ, ಕುಶ, ಅಂಬು, ಕೂರ್ಚ, ವಸ್ತ್ರ, ಅಶ್ಮ, ಅಜಿನ, ದಂಡ, ಮೇಖಲಾಃ, ಪಾಲಾಶೀಂ ಸಮಿಧಂ ಚ ಪ್ರಯುಂಜ್ಯಾತ್ ॥

ಆಚಾರ್ಯರು (ಕರ್ತೃವು) ಪ್ರಾಣಾಯಾಮವನ್ನು ಮಾಡಿ, ...ಪ್ರೀತ್ಯರ್ಥವಾಗಿ, ಉಪನಯನ ಹೋಮಕ್ಕಾಗಿ ಕುಂಡ ಸಂಸ್ಕಾರವೇ(ಉಲ್ಲೇಖನ) ಮೊದಲಾಗಿ ಅಗ್ನಿ ಪ್ರತಿಷ್ಠಾಪನೆಯನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ । ಕುಂಡಕ್ಕೆ ನೀರನ್ನು ಪ್ರೋಕ್ಷಿಸಿ, ತಿಕ್ಕಿ ಸ್ವಚ್ಛಗೊಳಿಸಿ । ಜಾತವೇದ ಎಂಬ ಹೆಸರಿನ ಲೌಕಿಕ ಅಗ್ನಿಯನ್ನು ಪ್ರತಿಷ್ಠಾಪಿಸಿ, ಅಗ್ನಿಯು ಚನ್ನಾಗಿ ಉರಿಯುವಂತೆ ಮಾಡಿ । ಪರಿಸ್ತರಣವನ್ನು ಕ್ರಮವಾಗಿ ಹಾಕಿ । ಅಗ್ನಿ ಸಮೀಪದಲ್ಲಿ ಆರು ಪಾತ್ರೆಗಳ ಪಾತ್ರಪ್ರಯೋಗ ಕಾಲದಲ್ಲಿ – ಈ ಸಂಸ್ಕಾರಕ್ಕೆ ಬೇಕಾದ ವಸ್ತುಗಳಾದ ಉಪವೀತ,

ದರ್ಭೆ, ನೀರಿನ ಕಲಶ, ೨ ದರ್ಭೆಯ ಕೂರ್ಚ, ಅರಿಶಿಣ ಹಾಕಿರುವ ವಸ್ತ್ರ, ಸಾಣೇಕಲ್ಲು, ಕೃಷ್ಣಾಜಿನ, ೩ ಎಲೆಗಳಿರುವ ಪಾಲಾಶ ದಂಡ, ಮೌಂಜೀ ಮೇಖಲಾ(ನೊಜೆಹುಲ್ಲಿನ ಹುರಿ), ೧ ಪಾಲಾಶ ಸಮಿತ್ತು ಇವುಗಳನ್ನು ಇಟ್ಟುಕೊಂಡು ॥

ಯಜ್ಞೋಪವೀತ ಧಾರಣಂ –

.....ಪ್ರೀತ್ಯರ್ಥಂ, ಉಪನಯನಾಂಗಂ, ಯಜ್ಞೋಪವೀತ ಧಾರಣಾರ್ಥಂ, ಯಜ್ಞೋಪವೀತ ಪೂಜಾದಾನಾನಿ ಕರಿಷ್ಯೇ, ಇತಿ ಸಂಕಲ್ಪ್ಯ – ಕೃತ್ವಾ ॥

....ಪ್ರೀತ್ಯರ್ಥವಾಗಿ, ಉಪನಯನದ ಅಂಗವಾಗಿ, ಯಜ್ಞೋಪವೀತವನ್ನು ಧರಿಸುವ ಉದ್ದೇಶದಿಂದ ಯಜ್ಞೋಪವೀತದ ಪೂಜೆ ಮತ್ತು ಅದರ ದಾನವನ್ನು ಮಾಡುತ್ತೇನೆ, ಎಂದು ಸಂಕಲ್ಪಿಸುವುದು – ಪೂಜೆಯನ್ನು ಮತ್ತು ದಾನವನ್ನು ಮಾಡುವುದು(ದಾನವನ್ನು ಕೆಳಗಿನ ಶ್ಲೋಕವನ್ನು ಹೇಳಿ ಕೊಡುವುದು) ॥

ಅಥ ಉಪವೀತ ದಾನಮಂತ್ರಃ – ಬ್ರಹ್ಮತೇಜೋಭವೃದ್ಧ್ಯರ್ಥಂ ಬ್ರಹ್ಮಣಾಕಲ್ಪಿತಂ ಪುರಾ । ಯಜ್ಞೋಪವೀತ ದಾನೇನ ಪ್ರೀಯತಾಂ ಕಮಲಾಪತಿಃ ॥

ವಿಶೇಷ ವಿಷಯ –

ಕಪರ್ದಿಮುನಿಯು ಉಪನಯನ ಪ್ರಕರಣದ ಕಾರಿಕೆಯಲ್ಲಾಗಲೀ, ಅದಕ್ಕಿಂತ ಪ್ರಮುಖವಾಗಿ ಆಪಸ್ತಂಬ ಗೃಹ್ಯಸೂತ್ರದಲ್ಲಾಗಲೀ ಈ ಗೋಪೀಚಂದನದ ಉಲ್ಲೇಖವೇ ಇಲ್ಲ । ಹಾಗೆಯೇ ಸ್ನಾತಕದಲ್ಲಿ– ಬ್ರಹ್ಮಚರ್ಯದಲ್ಲಿ ಉಪಯೋಗಿಸಿದ ವಸ್ತುಗಳನ್ನು ಬಿಡುವ ಸಮಯದಲ್ಲೂ ಇದರ ಉಲ್ಲೇಖವಿಲ್ಲ । ಹಾಗಾಗಿ ಉಪನಯನದ

ಸಮಯದಲ್ಲಿ ಗೋಪೀಚಂದನದ ದಾನವಾಗಲೀ, ಬ್ರಹ್ಮಚಾರಿಗಳು ಅದನ್ನೇ ಹಣೆಯಲ್ಲಿ ಧರಿಸಬೇಕೆಂಬ ನಿಯಮದ ವಿಚಾರಕ್ಕಾಗಲೀ ಯಾವುದೇ ದೃಢತೆಯು ಇಲ್ಲಾ । ಈ ಎಲ್ಲ ಹನ್ನೆಲೆಯಲ್ಲಿ ಭಸ್ಮ ಧಾರಣೆ ಮಾಡುವ ಸಂಪ್ರದಾಯದ ಮನೆಯ ಬ್ರಹ್ಮಚಾರಿಗಳೂ ಸಹ ಉಪನಯನದ ದಿನದಿಂದಲೂ ಭಸ್ಮಧಾರಣೆಯನ್ನು ಮಾಡುವುದು ಶ್ರೇಯಸ್ಕರವೇ ಹೊರತು ಅಶಾಸ್ತ್ರೀಯವಲ್ಲ । ಹಾಗೆಯೇ ಉಪನಯನದ ಸಮಯದಲ್ಲಿ ಗೋಪೀಚಂದನವನ್ನು ದಾನಕೊಡಿಸುವುದರಲ್ಲೂ ಯಾವ ಶಾಸ್ತ್ರೀಯತೆಯನ್ನು ಆಚರಿಸಿದಂತಾಗಲೀ ಆಗುವುದಿಲ್ಲ । ಅಥವಾ ಗೋಪೀಚಂದನವನ್ನು ದಾನ ಕೊಡಿಸದಿದ್ದರೂ, ಧರಿಸದಿದ್ದರೂ ಯಾವ ಶಾಸ್ತ್ರೀಯ ಲೋಪವೂ ಇರುವುದಿಲ್ಲ । ಏಕೆಂದರೆ ಉಪನಯನವೆಂಬ ಸಂಸ್ಕಾರಕ್ಕೆ ಗೃಹ್ಯಸೂತ್ರವೇ ಆಧಾರಗ್ರಂಥ । ಆಪಸ್ತಂಬ ಗೃಹ್ಯಸೂತ್ರವನ್ನು ಅನುಸರಿಸುವವರು, ಅದರಲ್ಲಿ ಉಪನಯನಕ್ಕೆ ಸಂಬಂಧಿಸಿದ ಸೂತ್ರಗಳಲ್ಲಿ ಇರುವ ವಿಷಯವನ್ನು ಅನುಸರಿಸುವುದೇ ಸರಿಯಾದ ಕ್ರಮ ॥

ಆಚಮ್ಯ, ...ಶ್ರೀ ಪರಮೇಶ್ವರ ಪ್ರೀತ್ಯರ್ಥಂ, ಬ್ರಹ್ಮಚರ್ಯಾಶ್ರವೋಕ್ತ ನಿತ್ಯಕರ್ಮಾನುಷ್ಠಾನ ಯೋಗ್ಯತಾಸಿದ್ಧ್ಯರ್ಥಂ, ಯಜ್ಞೋಪವೀತಧಾರಣಂ ಕರಿಷ್ಯೇ, ಇತಿ ಸಂಕಲ್ಪ್ಯ । ಯಜ್ಞೋಪವೀತಂ..... ಇತಿ ಯಜ್ಞೋಪವೀತಂ ಧಾರಯನ್ ವಾಚಯತಿ ।

ಅಸ್ಯ ಶ್ರೀ ಯಜ್ಞೋಪವೀತ ಧಾರಣ ಮಂತ್ರಸ್ಯ, ಗಾಯತ್ರೀಛಂದಃ, ದ್ವಿತೀಯ ತ್ರಿಷ್ಟುಪ್ಛಂದಃ, ತೃತೀಯ ಜಗತೀಛಂದಃ, ಗೌತಮ, ಆತ್ರೇಯ, ವಸಿಷ್ಠ, ಭಾರದ್ವಾಜಋಷಯಃ, ಬ್ರಹ್ಮವಿಷ್ಣುಮಹೇಶ್ವರಾ ದೇವತಾಃ, ರಕ್ತವರ್ಣಂ, ಶ್ವೇತಬೀಜಂ, ಋಗ್ಯಜುಸ್ಸಾಮಾಥರ್ವಣ ವೇದೋಕ್ತಂ ತತ್ವಂ, ಆಹವನೀಯ ಗಾರ್ಹಪತ್ಯ ದಕ್ಷಿಣಾಗ್ನಯಃ, ಯಜ್ಞೋಪವೀತ ಧಾರಣಂ ಕರಿಷ್ಯೇ ॥

ಓಂ ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇರ್ಯತ್ಸಹಜಂ ಪುರಸ್ತಾತ್ । ಆಯುಷ್ಯಮಗ್ರಿಯಂ ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ ॥

ಆಚಮನವನ್ನು ಮಾಡಿ, ಶ್ರೀ ಪರಮೇಶ್ವರ ಪ್ರೀತ್ಯರ್ಥವಾಗಿ, ಬ್ರಹ್ಮಚರ್ಯಾಶ್ರಮೋಕ್ತ ನಿತ್ಯಕರ್ಮಾನುಷ್ಠಾನದ ಯೋಗ್ಯತೆಯ ಸಿದ್ಧಿಗಾಗಿ, ಯಜ್ಞೋಪವೀತದ ಧಾರಣೆಯನ್ನು ಮಾಡುತ್ತಿದ್ದೇನೆ ಎಂದು ಸಂಕಲ್ಪಿಸಿ। ಮೇಲಿನ ಮಂತ್ರದಿಂದ ಯಜ್ಞೋಪವೀತವನ್ನು ಧರಿಸಿ, ನಂತರ ಕುಮಾರನು ಆ ಮಂತ್ರವನ್ನು ಹೇಳಬೇಕು ॥

ಭದ್ರಾಕರಣಂ (ಕ್ಷೌರಂ) –

ಉಷ್ಣೇನ ವಾಯವಿತಿ – ಉಷ್ಣಾಃ ಶೀತಾಃ ಆಪ ಆನೀಯ, ಮಂತ್ರಃ –

ಓಂ ಉಷ್ಣೇನ ವಾಯ ಉದಕೇನೇ ಹ್ಯದಿತಿಃ ಕೇಶಾನ್ ವಪತು ॥

ಮೇಲಿನ ಮಂತ್ರದಿಂದ, ಬಿಸಿ– ತಣ್ಣನೆಯ ನೀರನ್ನು ಸೇರಿಸುವುದು ॥

ಆಪ ಉನ್ದಂತು – ಇತಿ ಕುಮಾರಸ್ಯ ಶಿರ ಉನತ್ತಿ, ಮಂತ್ರಃ –

ಓಂ ಆಪ ಉನ್ದಂತು ಜೀವಸೇ ದೀರ್ಘಾಯುತ್ವಾಯ ವರ್ಚಸೇ । ಜ್ಯೋಕ್ಚ ಸೂರ್ಯಂ ದೃಶೇ ॥

ಮೇಲಿನ ಮಂತ್ರದಿಂದ ನೀರನ್ನು ಕುಮಾರನ ತಲೆಗೆ ಪ್ರೋಕ್ಷಿಸಿ, ಸವರುವುದು ॥

ತ್ರೀನ್ ತ್ರೀನ್ ದರ್ಭಾನ್ ಅಂತರ್ಧಾಯ ಪ್ರತಿದಿಶಂ ಪ್ರವಪತಿ । ಯೇನಾವಪತ್ – ಇತಿ ಪುರಸ್ತಾತ್ ವಪತಿ, ಯಜ್ಞಶರ್ಮೇತಿ ನಾಮಗ್ರಹಣಂ, ಮಂತ್ರಃ –

ಓಂ ಯೇನಾವಪತ್ಸವಿತಾ ಕ್ಷುರೇಣ ಸೋಮಸ್ಯ ರಾಜ್ಞೋ ವರುಣಸ್ಯ ವಿದ್ವಾನ್ । ತೇನ ಬ್ರಹ್ಮಣೋ ವಪತೇದಮಸ್ಯಾಯುಷ್ಮಾನ್ ಜರದಷ್ಟಿರ್ಯಥಾಸದಯಂ.....ಶರ್ಮಾ ॥

ಪ್ರತಿದಿಕ್ಕಿನ ಕೂದಲುಗಳನ್ನು ಕತ್ತರಿಸುವಾಗಲೂ ೩–೩ ದರ್ಭೆಗಳೊಂದಿಗೆ ಹತ್ತಾರು ಕೂದಲುಗಳನ್ನೂ ಕತ್ತರಿಸಬೇಕು । ಮೇಲಿನ ಮಂತ್ರದಿಂದ, ಕುಮಾರನ ತಲೆಯ ಪೂರ್ವಭಾಗದ ಕೂದಲುಗಳನ್ನು ಕತ್ತರಿಸುತ್ತಾನೆ । ಪೂರ್ವದಿಕ್ಕಿನ ಮಂತ್ರದಲ್ಲಿ ಯಜ್ಞಶರ್ಮಾ ಎನ್ನುವಕಡೆ ಕುಮಾರನ ಹೆಸರಿನ ಮುಂದೆ ಶರ್ಮಾ ಎಂಬುದನ್ನು ಸೇರಿಸಿ ಹೇಳಬೇಕು ॥

ದಕ್ಷಿಣತೋ ಮಾತಾ, ಬ್ರಹ್ಮಚಾರೀ ವಾ ಅನಡುಹೇ ಶಕೃತ್ ಪಿಂಡೇ ಯವಾನ್ನಿಧಾಯ ತಸ್ಮಿನ್ ಕೃತ್ತ ಕೇಶಾನ್ ಉಪಯಮ್ಯ । ಅಪ ಉಪಸ್ಪೃಶೇತ್ । ಯತ್ ಕ್ಷುರೇಣ - ಇತಿ ವಪಂತಂ ಅನುಮಂತ್ರಯತೇ, ಮಂತ್ರಃ –

ಓಂ ಯತ್‌ಕ್ಷುರೇಣಮರ್ಚಯತಾ ಸುಪೇಶಸಾ ವಪ್ತ್ರಾ ವಪಸಿ ಕೇಶಾನ್ । ಶುಂಧಿ ಶಿರೋ ಮಾಸ್ಯಾಯುಃ ಪ್ರಮೋಷೀಃ ॥

ವಟುವಿನ ದಕ್ಷಿಣ(ಬಲ)ಭಾಗದಲ್ಲಿ ತಾಯಿಯಾಗಲೀ, ಬ್ರಹ್ಮಚಾರಿಯಾಗಲೀ ನಿಂತುಕೊಂಡು ತಟ್ಟೆಯಲ್ಲಿ ಎತ್ತಿನ ಸಗಣಿ ಉಂಡೆಯನ್ನು ಇಟ್ಟುಕೊಂಡು, ಅದರಲ್ಲಿ ಆರತಿ ನೀರನ್ನು ಹಾಕಿಕೊಂಡು, ಜವೇಗೋಧಿ ಅಥವಾ ಅರಳು ಮತ್ತು ದೂರ್ವೆಗಳನ್ನು ಹಾಕಿಕೊಂಡು, ಕತ್ತರಿಸಿದ ಕೂದಲು ಮತ್ತು

ದರ್ಭೆಗಳನ್ನು ಆ ತಟ್ಟೆಯಲ್ಲಿ ಹಾಕಬೇಕು । ಕೈಯನ್ನು ತೊಳೆದುಕೊಂಡು । ಮೇಲಿನ ಮಂತ್ರವನ್ನು, ತಾಯಿ ಅಥವಾ ಬ್ರಹ್ಮಚಾರಿಯು ತಂದೆಯನ್ನು (ಕರ್ತ್ರ) ಕುರಿತು ಹೇಳಬೇಕು ॥

ಯೇನಪೂಷಾ - ಇತಿ ದಕ್ಷಿಣತಃ, ಮಂತ್ರಃ –

ಓಂ ಯೇನ॑ ಪೂ॒ಷಾ ಬೃ॒ಹಸ್ಪ॑ತೇರ॒ಗ್ನೇರಿಂದ್ರ॑ಸ್ಯ॒ ಚಾಯು॑ಷೇವ॒ಪತ್ ।
ತೇನಾ॒ಸ್ಯಾಯು॑ಷೇ ವಪ॒ ಸೌಶ್ಲೋ॑ಕ್ಯಾಯ॒ ಸ್ವಸ್ತ॑ಯೇ ॥

ಮೇಲಿನ ಮಂತ್ರದಿಂದ ಕುಮಾರನ ತಲೆಯ ದಕ್ಷಿಣ ಭಾಗದ ಕೂದಲುಗಳನ್ನು ದರ್ಭೆಯ ಸಹಿತವಾಗಿ ಕತ್ತರಿಸಿ ತಟ್ಟೆಯಲ್ಲಿ ಹಾಕಬೇಕು ॥

ಯೇನ ಭೂಯಃ – ಇತಿ ಪಶ್ಚಾತ್, ಮಂತ್ರಃ –

ಓಂ ಯೇನ॑ ಭೂ॒ಯಶ್ಚ॑ರಾ॒ತ್ಯಯಂ ಜ್ಯೋಕ್ಚ॑ ಪ॒ಶ್ಯಾ॒ತಿ॒ ಸೂರ್ಯ॑ಮ್ ।
ತೇನಾ॒ಸ್ಯಾಯು॑ಷೇ ವಪ॒ ಸೌಶ್ಲೋ॑ಕ್ಯಾಯ॒ ಸ್ವಸ್ತ॑ಯೇ ॥

ಮೇಲಿನ ಮಂತ್ರದಿಂದ ಕುಮಾರನ ತಲೆಯ ಪಶ್ಚಿಮಭಾಗದ ಕೂದಲುಗಳನ್ನು ದರ್ಭೆಯ ಸಹಿತವಾಗಿ ಕತ್ತರಿಸಿ ತಟ್ಟೆಯಲ್ಲಿ ಹಾಕಬೇಕು ॥

ಯೇನ ಪೂಷಾ – ಇತಿ ಉತ್ತರತಃ, ಯಜ್ಞಶರ್ಮನ್ನ್ ಇತಿ ನಾಮಗ್ರಹಣಂ,

ಮಂತ್ರಃ –

ಓಂ ಯೇನ॑ ಪೂ॒ಷಾ ಬೃ॒ಹಸ್ಪ॑ತೇರ॒ಗ್ನೇರಿಂದ್ರ॑ಸ್ಯ॒ ಚಾಯು॑ಷೇವ॒ಪತ್ । ತೇನ॑ ತೇ ವಪಾಮಿ .....ಶರ್ಮ॑ನ್ನಾ॒ಯು॒ಷಾ ವರ್ಚ॑ಸಾ॒ ಯಥಾ॒ ಜ್ಯೋಕ್ಸು॒ಮನಾ॒ ಅಸಾ॑ಃ ॥

ಮೇಲಿನ ಮಂತ್ರದಿಂದ ಕುಮಾರನ ತಲೆಯ ಉತ್ತರಭಾಗದ ಕೂದಲುಗಳನ್ನು ದರ್ಭೆಯ ಸಹಿತವಾಗಿ ಕತ್ತರಿಸಿ ತಟ್ಟೆಯಲ್ಲಿ ಹಾಕಬೇಕು। ಇಲ್ಲಿ 'ಯಜ್ಞಶರ್ಮನ್' ಎಂಬ ಜಾಗದಲ್ಲಿ ವಟುವಿನ ಹೆಸರಿನ ಮುಂದೆ 'ಶರ್ಮನ್' ಶಬ್ದವನ್ನು ಸೇರಿಸಿ ಹೇಳುವುದು ॥

ದಕ್ಷಿಣತೋ ಮಾತಾ, ಬ್ರಹ್ಮಚಾರೀ ವಾ ಉಪ್ತ್ವಾಯ ಕೇಶಾನ್ - ಇತಿ ತಾನ್ ಉದುಂಬರ ಮೂಲೇ ದರ್ಭಸ್ತಂಬೇ ವಾ ನಿದಧಾತಿ, ಮಂತ್ರಃ –

ಓಂ ಉಪ್ತ್ವಾಯ ಕೇಶಾನ್, ವರುಣಸ್ಯ ರಾಜ್ಞೋ ಬೃಹಸ್ಪತಿಸ್ತ್ವಿತಾ ಸೋಮೋ ಅಗ್ನಿಃ । ತೇಭ್ಯೋ ನಿಧಾನಂ ಬಹುಧಾನ್ವವಿಂದನ್ನಂತರಾ ದ್ಯಾವಾಪೃಥಿವೀ ಅಪಸ್ಸುವಃ ॥ ಸ್ನಾನಂ ॥

ವಟುವಿನ ದಕ್ಷಿಣ ಭಾಗದಲ್ಲಿ ನಿಂತಿರುವ ತಾಯಿ ಅಥವಾ ಬ್ರಹ್ಮಚಾರಿಯು, ಮೇಲಿನ ಮಂತ್ರದಿಂದ ಔದುಂಬರ ವೃಕ್ಷದ ಬುಡದಲ್ಲಾಗಲೀ ದರ್ಭೆಗಳ ಮೇಲಾಗಲೀ ರಂಗವಲ್ಲಿಯನ್ನು ಹಾಕಿ ಆ ತಟ್ಟೆಯನ್ನು ಅಲ್ಲಿ ಇಡುತ್ತಾರೆ । ವಟುವಿಗೆ ಮಂಗಳ ಸ್ನಾನ ಮಾಡಿಸುವುದು ॥

ಪ್ರೋಕ್ಷಣೀ ಸಂಸ್ಕಾರಾದಾರಭ್ಯ ಆಜ್ಯಭಾಗಾಂತಂ ಕೃತ್ವಾ । ಮುಖಾಹುತಿ: ನ । ಕುಂಡೇ ಉಪಚಾರ ಪೂಜಾಂ ಆರಭ್ಯ ಧೂಪ ದೀಪಾಂತಂ ಕೃತ್ವಾ ॥

ಪ್ರೋಕ್ಷಣೀಪಾತ್ರೆಯ ಸಂಸ್ಕಾರದಿಂದ ಆರಂಭಿಸಿ, ಆಜ್ಯಭಾಗಾಂತದವರೆಗೆ ಪ್ರಯೋಗವನ್ನು ಮಾಡಿ । ಮುಖಾಹುತಿಯು ಇಲ್ಲ । ಕುಂಡದಲ್ಲಿರುವ ಅಗ್ನಿದೇವನಿಗೆ ಉಪಚಾರಪೂಜೆಯನ್ನು ಆರಂಭಿಸಿ, ಧೂಪ ದೀಪಗಳನ್ನು ಮಾಡಿ ॥

ಪಾಲಾಶೀಂ ಸಮಿಧಂ ಆಯುರ್ದಾ – ಇತಿ ಆಚಾರ್ಯಃ ಉಕ್ತ್ವಾ, ಕುಮಾರೇಣ ಆಧಾಪಯತಿ, ಮಂತ್ರಃ –

ಓಂ ಆಯುರ್ದಾ ದೇವ ಜರಸಂ ಗೃಣಾನೋ ಘೃತಪ್ರತೀಕೋ ಘೃತ ಪೃಷ್ಠೋ ಅಗ್ನೇ । ಘೃತಂ ಪಿಬನ್ನಮೃತಂ ಚಾರುಗವ್ಯಂ ಪಿತೇವ ಪುತ್ರಂ ಜರಸೇನ ಯೇಮಮ್ ॥

ಮೇಲಿನ ಮಂತ್ರವನ್ನು ಆಚಾರ್ಯರು ಹೇಳಿ, ಕುಮಾರನು ಪಾಲಾಶ ಸಮಿತ್ತನ್ನು ಹೋಮಿಸಬೇಕು ॥

ಉತ್ತರೇಣಾಗ್ನಿಂ ದಕ್ಷಿಣೇನ ಪದಾ ಅಶ್ಮಾನಂ ಆಸ್ಥಾಪಯತಿ ಆತಿಷ್ಠೇತಿ, ಮಂತ್ರಃ –

ಓಂ ಆತಿಷ್ಠೇಮಮಶ್ಮಾನಮಶ್ಮೇವ ತ್ವಗ್ಂ ಸ್ಥಿರೋಭವ । ಅಭಿತಿಷ್ಠ ಪೃತನ್ಯತಸ್ಸಹಸ್ವ ಪೃತನಾಯತಃ ॥

ಅಗ್ನಿಯ ಉತ್ತರದಲ್ಲಿರುವ ಕಲ್ಲಿನ ಮೇಲೆ, ಮೇಲಿನ ಮಂತ್ರದಿಂದ ಮಟುವನ್ನು ಬಲಕಾಲಿನ ಮೂಲಕ ನಿಲ್ಲಿಸಬೇಕು ॥

ವಾಸಃ ಸದ್ಯಃ ಕೃತ್ವೋತಂ ರೇವತೀಸ್ತ್ವೇತಿ ದ್ವಾಭ್ಯಾಂ - ಅಭಿಮಂತ್ರ್ಯ, ಮಂತ್ರೌ –

ಓಂ ರೇವತೀಸ್ತ್ವಾ ವ್ಯಕ್ಷಣ್ಯತ್ತಿಕಾ ಶ್ಚಾಕೃನ್ತ್ಗ್ಂ ಸ್ತ್ವಾ । ಧಿಯೋ ವಯನ್ನವಗ್ಂ ಅವ್ಯಂಜನ್ ಸಹಸ್ರ ಮಂತಾಗ್ಂ ಅಭಿತೋ ಅಯಚ್ಛನ್ ॥ ದೇವೀರ್ದೇವಾಯ ಪರಿಧೀ ಸವಿತ್ರೇ ಮಹತ್ತದಾಸಾಮಭವನ್ಮಹಿತ್ವನಂ ।

ಒಂದೇ ದಿನದಲ್ಲಿ ತಯಾರಿಸಿರುವಂತಹ ನೂತನವಸ್ತ್ರವನ್ನು, ಮೇಲಿನ ೨ ಮಂತ್ರಗಳಿಂದ ಆಚಾರ್ಯರು ಮುಟ್ಟಿ ಅಭಿಮಂತ್ರಿಸಬೇಕು ॥

ಯಾ ಅಕೃಂತನ್ – ಇತಿ ತಿಸೃಭಿಃ ವಾಸಃ ಪರಿಧಾಪ್ಯ, ಮಂತ್ರಾಃ –

ಓಂ ಯಾ ಅಕೃಂತನ್ನವಯನ್, ಯಾ ಅತನ್ವತ ಯಾಶ್ಚ ದೇವೀ ರಂತಾನಭಿತೋ ದದಂತ । ತಾಸ್ತ್ವಾದೇವೀರ್ಜರಸೇ ಸಂವ್ಯಯಂತ್ವಾಯುಷ್ಮಾನಿದಂ ಪರಿಧತ್ಸ್ವ ವಾಸಃ ॥

ಪರಿಧತ್ತ ಧತ್ತವಾಸ ಸ್ಯೆನಗ್ಂ ಶತಾಯುಷಂ ಕೃಣುತ ದೀರ್ಘಮಾಯುಃ । ಬೃಹಸ್ಪತಿಃ ಪ್ರಾಯಚ್ಛದ್ವಾಸ ಏತತ್ ಸೋಮಾಯ ರಾಜ್ಞೇ ಪರಿಧಾತಾ ವಾ ಉ ॥

ಜರಾಂಗಚ್ಛಾಸಿ ಪರಿಧತ್ಸ್ವ ವಾಸೋ ಭವಾ ಕೃಷ್ಟೀನಾಮಭಿಶಸ್ತಿ ಪಾವಾ । ಶತಂ ಚ ಜೀವ ಶರದಸ್ಸವರ್ಚಾ ರಾಯಶ್ಚ ಪೋಷಮುಪ ಸಂವ್ಯಯಸ್ವ ॥

ಮೇಲಿನ ೩ ಮಂತ್ರಗಳಿಂದ ವಸ್ತ್ರವನ್ನು ವಟುವಿಗೆ ಉಡಿಸಬೇಕು ॥

ಪರೀದಂ ವಾಸಃ – ಇತಿ ಪರಿಹತಂ ಕುಮಾರಂ ಅನುಮಂತ್ರಯತೇ,

ಮಂತ್ರಃ– ಓಂ ಪರೀದಂ ವಾಸೋ ಅಧಿಧಾಸ್ಸ್ವಸ್ತಯೇ ಭೂರಾಪೀನಾಮಭಿಶಸ್ತಿಪಾವಾ । ಶತಂ ಚ ಜೀವ ಶರದಃ ಪುರೂಚೀರ್ವಸೂನಿಚಾರ್ಯೋ ವಿಭಜಾಸಿ ಜೀವನ್ ॥

ಮೇಲಿನ ಮಂತ್ರದಿಂದ, ವಸ್ತ್ರವನ್ನು ಉಟ್ಟ ಕುಮಾರನನ್ನು ಮುಟ್ಟಿ ಅಭಿಮಂತ್ರಿಸಬೇಕು ॥

ಮೌಂಜೀಂ ಮೇಖಲಾಂ ತ್ರಿವೃತಾಂ ತ್ರಿಃ ಪ್ರದಕ್ಷಿಣಂ, ಇಯಂ ದುರುಕ್ತಾತ್ ಇತಿ ದ್ವಾಭ್ಯಾಂ – ಪರಿವೀಯ, ಇಯಂ ದುರುಕ್ತಾತ್ ಇತಿ ವಾಚಯಿತ್ವಾ, ಮಂತ್ರೌ – ಓಂ ಇಯಂದುರುಕ್ತಾತ್ಪರಿ ಬಾಧಮಾನಾಃ ಶರ್ಮವರೂಥಂ ಪುನತೀನ ಆಗಾತ್ । ಪ್ರಾಣಾಪಾನಾಭ್ಯಾಂ ಬಲಮಾಭರಂತೀ ಪ್ರಿಯಾ ದೇವಾನಾಗ್ಂ ಸುಭಗಾ ಮೇಖಲೇಯಂ ॥

ಋತಸ್ಯ ಗೋಪ್ತ್ರೀ ತಪಸಃ ಪರಸ್ಪೀ ಘ್ನತೀ ರಕ್ಷಸ್ಸಹಮಾನಾ ಅರಾತೀಃ । ಸಾನಸ್ಸಮಂತ ಮನು ಪರೀಹಿ ಭದ್ರಯಾ ಭರ್ತಾರಸ್ತೇ ಮೇಖಲೇ ಮಾರಿಷಾಮ ॥

೩ ಎಳೆಯಾಗಿ ಹೊಸೆದಿರುವಂತಹ ಮೌಂಜಿ ಮೇಖಲೆಯನ್ನು (ನೊಜೆಹುಲ್ಲನ್ನು) ವಟುವಿನ ಸೊಂಟಕ್ಕೆ, ಮೇಲಿನ ೨ ಮಂತ್ರಗಳಿಂದ ೩ ಸುತ್ತು ಸುತ್ತಬೇಕು ಮತ್ತು ಮೇಲಿನ ೨ ಮಂತ್ರಗಳನ್ನು ವಟುವಿನ ಹತ್ತಿರ ಹೇಳಿಸಬೇಕು ॥

ಮಿತ್ರಸ್ಯ ಚಕ್ಷುಃ – ಇತಿ ಕೃಷ್ಣಾಜಿನಂ ಧಾರಯಿತ್ವಾ, ಮಿತ್ರಸ್ಯ ಚಕ್ಷುಃ - ಇತಿ ವಾಚಯಿತ್ವಾ, ಮಂತ್ರಃ –

ಓಂ ಮಿತ್ರಸ್ಯ ಚಕ್ಷುರ್ಧರುಣಂ ಬಲೀಯಸ್ತೇಜೋ ಯಶಸ್ವಿ ಸ್ಥವಿರಗ್ಂ ಸಮಿದ್ಧಂ । ಅನಾಹನಸ್ಯಂ ವಸನಂ ಜರಿಷ್ಣು ಪರೀದಂ ವಾಜ್ಯಜಿನಂ ದಧೇಽಹಮ್ ॥

ಮೇಲಿನ ಮಂತ್ರದಿಂದ, ಅಜಿನವನ್ನು ಧಾರಣೆಮಾಡಿಸಬೇಕು ಮತ್ತು ಆ ಮಂತ್ರವನ್ನು ಕುಮಾರನ ಹತ್ತಿರ ಹೇಳಿಸಬೇಕು ॥

ಉತ್ತರೇಣಾಗ್ನಿಂ ದರ್ಭಾನ್ ಸಂಸ್ತೀರ್ಯ, ತೇಷ್ವೇನಂ ಆಗಂತ್ರಾ ಇತಿ – ಅವಸ್ಥಾಪ್ಯ, ಆಗಂತ್ರೇತಿ – ವಾಚಯಿತ್ವಾ, ಮಂತ್ರಃ –

ಓಂ ಆಗಂತ್ರಾ ಸಮಗನ್ಮಹಿ ಪ್ರಸುಮ್ಯತ್ಯುಂ ಯುಯೋತನ ।
ಅರಿಷ್ಟಾಸ್ಸಂಚರೇಮಹಿ ಸ್ವಸ್ತಿಚರತಾದಿಹ ಸ್ವಸ್ತ್ಯಾ ಗೃಹೇಭ್ಯಃ ॥

ಅಗ್ನಿಯ ಉತ್ತರದಲ್ಲಿ ದರ್ಭೆಗಳನ್ನು ಹಾಸಬೇಕು, ಅದರಮೇಲೆ ಕುಮಾರನನ್ನು ಮೇಲಿನ ಮಂತ್ರದಿಂದ, ಆಚಾರ್ಯರಿಗೆ ಅಭಿಮುಖವಾಗಿ(ಪಶ್ಚಿಮಕ್ಕೆ ಮುಖಮಾಡಿ) ಕೂರಿಸಬೇಕು ಮತ್ತು ಆ ಮಂತ್ರವನ್ನು ಕುಮಾರನ ಹತ್ತಿರ ಹೇಳಿಸಬೇಕು ॥

ಉದಕಾಂಜಲಿಂ ಅಸ್ಯಾಂಜಲೌ ತೂಷ್ಣೀಂ ಆನೀಯ ॥

ಆಚಾರ್ಯರು ತನ್ನ ಬೊಗಸೆಯಲ್ಲಿ ನೀರನ್ನು ತೆಗೆದುಕೊಂಡು ಅದನ್ನು ವಟುವಿನ ಬೊಗಸೆಯಲ್ಲಿ ಅಮಂತ್ರಕವಾಗಿ ಹಾಕಬೇಕು ॥

ಸಮುದ್ರಾದೂರ್ಮಿಃ – ಇತಿ ಮಾಣವಕಂ ತ್ರಿಃ ಪ್ರೋಕ್ಷತಿ, ಸಕೃನ್ ಮಂತ್ರೇಣ ದ್ವಿಸ್ತೂಷ್ಣೀಂ, ಸಮುದ್ರಾದೂರ್ಮಿಃ – ಇತಿ ವಾಚಯಿತ್ವಾ, ಮಂತ್ರಃ –

ಓಂ ಸಮುದ್ರಾದೂರ್ಮಿರ್ಮಧುಮಾಗ್ಂ ಉದಾರದುಪಾಗ್ಂ ಶುನಾ
ಸಮಮೃತತ್ವ ಮಶ್ಯಾಮ್ । ಇಮೇನುತೇ ರಶ್ಮಯಸ್ಸೂರ್ಯಸ್ಯ
ಯೇಭಿಸ್ಸಪಿತ್ವಂ ಪಿತರೋ ನ ಆಯನ್ನ್ ॥

ಆಚಾರ್ಯರು ಮೇಲಿನ ಮಂತ್ರದಿಂದ, ಬ್ರಹ್ಮಚಾರಿಯನ್ನು ೩ ಬಾರಿ ದರ್ಭೆಗಳಿಂದ ನೀರನ್ನು ಪ್ರೋಕ್ಷಿಸಬೇಕು, ೧ ಸಲ ಮಂತ್ರ ಸಹಿತ – ಇನ್ನೆರೆಡು ಸಲ ಅಮಂತ್ರಕವಾಗಿ ಹಾಗೂ ಈ ಮಂತ್ರವನ್ನು ವಟುವಿನ ಹತ್ತಿರ ಹೇಳಿಸಬೇಕು ॥

ಅಗ್ನಿಷ್ಟೇ ಹಸ್ತಮಗ್ರಭೀತ್ – ಇತಿ ದಶಭಿರಂತೇ, ಹಸ್ತಂ ಗೃಹ್ಣಾತಿ, ಮಂತ್ರಾಃ –

ಓಂ ಅಗ್ನಿಷ್ಟೇ ಹಸ್ತಮಗ್ರಭೀತ್ । ಸೋಮಸ್ತೇ ಹಸ್ತಮಗ್ರಭೀತ್ । ಸವಿತಾತೇ ಹಸ್ತಮಗ್ರಭೀತ್ । ಸರಸ್ವತೀ ತೇ ಹಸ್ತಮಗ್ರಭೀತ್ । ಪೂಷಾ ತೇ ಹಸ್ತಮಗ್ರಭೀತ್ । ಅರ್ಯಮಾತೇ ಹಸ್ತಮಗ್ರಭೀತ್ । ಅಗ್ಂಶಸ್ತೇ ಹಸ್ತಮಗ್ರಭೀತ್ । ಭಗಸ್ತೇ ಹಸ್ತಮಗ್ರಭೀತ್ । ಮಿತ್ರಸ್ತೇ ಹಸ್ತಮಗ್ರಭೀತ್ । ಮಿತ್ರಸ್ತ್ವಮಸಿ ಧರ್ಮಣಾಽಗ್ನಿರಾ ಚಾರ್ಯಸ್ತವ ॥

ಮೇಲಿನ ೧೦ ಮಂತ್ರಗಳನ್ನು ವಟುವಿನ ಹತ್ತಿರ ಹೇಳಿಸಿ, ನಂತರ ವಟುವಿನ ಕೈಯನ್ನು ಆಚಾರ್ಯರು ಹಿಡಿದುಕೊಳ್ಳಬೇಕು ॥

ಅಗ್ನಯೇತ್ವಾ ಪರಿದದಾಮಿ – ಇತಿ ಏಕಾದಶಭಿಃ ಪ್ರತಿಮಂತ್ರಂ ಯಜ್ಞಶರ್ಮನ್, ಇತಿ ನಾಮಗ್ರಹಣ ಪೂರ್ವಕಂ ದೇವತಾಭ್ಯೋ ರಕ್ಷಣಾಯ ದತ್ವಾ, ಮಂತ್ರಾಃ –

ಓಂ ಅಗ್ನಯೇ ತ್ವಾ ಪರಿದದಾಮಿ .....ಶರ್ಮನ್ । ಸೋಮಾಯ ತ್ವಾ ಪರಿದದಾಮಿ .....ಶರ್ಮನ್ । ಸವಿತ್ರೇ ತ್ವಾ ಪರಿದದಾಮಿ ....ಶರ್ಮನ್ ।

ಸರಸ್ವತ್ಯೈ ತ್ವಾ ಪರಿದದಾಮಿ .....ಶರ್ಮನ್ । ಮೃತ್ಯವೇ ತ್ವಾ ಪರಿದದಾಮಿ .....ಶರ್ಮನ್ । ಯಮಾಯ ತ್ವಾ ಪರಿದದಾಮಿ ....ಶರ್ಮನ್ । ಗದಾಯ ತ್ವಾ ಪರಿದದಾಮಿ .....ಶರ್ಮನ್ । ಅಂತಕಾಯ ತ್ವಾ ಪರಿದದಾಮಿ ...ಶರ್ಮನ್ । ಅದ್ಭ್ಯಃ ತ್ವಾ ಪರಿದದಾಮಿ ...ಶರ್ಮನ್ । ಓಷಧೀಭ್ಯಃ ತ್ವಾ ಪರಿದದಾಮಿ ...ಶರ್ಮನ್ । ಪೃಥಿವ್ಯೈ ತ್ವಾ ಸ ವೈಶ್ವಾನರಾಯ್ಯೈ ಪರಿದದಾಮಿ .....ಶರ್ಮನ್ ॥

ಮೇಲಿನ ೧೧ ಮಂತ್ರಗಳಲ್ಲಿ, ಪ್ರತಿ ಮಂತ್ರದ ತುದಿಯಲ್ಲೂ ವಟುವಿನ ಹೆಸರಿನ ಮುಂದೆ 'ಶರ್ಮನ್' ಶಬ್ದವನ್ನು ಸೇರಿಸಿ ಹೇಳಿಸುತ್ತಾ, ದೇವತೆಗಳ ಬಳಿಗೆ ರಕ್ಷಣೆಗಾಗಿ ಒಪ್ಪಿಸುವುದು ॥

ಓಂ ದೇವಸ್ಯತ್ವಾ ಸವಿತುಃ ಪ್ರಸವ ಉಪನಯೇ ....ಶರ್ಮನ್, ಇತಿ ಆತ್ಮಸಮೀಪಂ ನೀತ್ವಾ ॥

ಮೇಲಿನ ಮಂತ್ರದಿಂದ, ವಟುವಿನ ಹೆಸರಿನ ಮುಂದೆ ''ಶರ್ಮನ್'' ಶಬ್ದವನ್ನು ಸೇರಿಸಿ ಹೇಳಿ ವಟುವನ್ನು ಆಚಾರ್ಯರು ತನ್ನ ಸಮೀಪಕ್ಕೆ ಕರೆದು ಕೊಳ್ಳುವುದು ॥

ಬ್ರಹ್ಮೋಪದೇಶ –

ತದೇವಲಗ್ನಂ..... ಇತಿ ಪರಿತ್ವಾ । ಸುಪ್ರಜಾಃ – ಇತಿ ದಕ್ಷಿಣೇ ಕರ್ಣೇ ಜಪತಿ, ಮಂತ್ರಃ – ಓಂ ಸುಪ್ರಜಾಃ ಪ್ರಜಯಾ ಭೂಯಾಸ್ಸುವೀರೋ ವೀರೈಸ್ಸುವರ್ಚಾ ವರ್ಚಸಾ ಸುಪೋಷಃ ಪೋಷೈಃ । ಬ್ರಹ್ಮೋಪದೇಶ

ಮುಹೂರ್ತಃ ಸುಮೂಹರ್ತಃ ಇತಿ ಭವಂತಃ ಅನುಗ್ರಹ್ಣಂತು ।

ಸುಮುಹೂರ್ತೋಸ್ತು ಇತಿ ಪ್ರತಿವಚನಂ ॥

ಆಮೇಲೆ, ತದೇವ ಲಗ್ನಂ – ಎಂಬ ಶ್ಲೋಕವನ್ನು ಹೇಳಿ, ವಟುವಿನ ಬಲಕಿವಿಯಲ್ಲಿ ಮೇಲಿನ ಮಂತ್ರವನ್ನು ಹೇಳುವುದು, ಇದೇ ಬ್ರಹ್ಮೋಪದೇಶ । ನಂತರ ಬ್ರಹ್ಮೋಪದೇಶದ ಮುಹೂರ್ತವು ಸುಮುಹೂರ್ತವಾಗಿದೆ ಎಂದು ತಾವೆಲ್ಲರೂ ಅನುಗ್ರಹಿಸಿ ಎಂದು ಸಭೆಗೆ ಪ್ರಾರ್ಥಿಸುವುದು। ಸುಮುಹೂರ್ತವಾಗಿದೆ ಎಂಬುದು ಸಭೆಯ ಮಾತು ॥

ಬ್ರಹ್ಮಚರ್ಯಮಾಗಾಂ – ಇತಿ ಕುಮಾರ ಆಹ, ಮಂತ್ರಃ –

ಓಂ ಬ್ರಹ್ಮಚರ್ಯಮಾಗಾಮುಪ ಮಾನಯಸ್ವ ದೇವೇನ ಸವಿತ್ರಾ ಪ್ರಸೂತಃ ॥

ಮೇಲಿನ ಮಂತ್ರದಿಂದ ಬ್ರಹ್ಮಚರ್ಯವನ್ನು ನಾನು ಹೊಂದಿದೆ ಎಂದು ವಟುವು ಹೇಳುತ್ತಾನೆ ॥

ಕೋನಾಮಾಸಿ ಇತಿ ಆಚಾರ್ಯಃ ? ।

ನಿನ್ನ ಹೆಸರೇನು ? ಎಂದು ಆಚಾರ್ಯರು ಕೇಳುತ್ತಾರೆ ।

----ಶರ್ಮಾನಾಮಾಸ್ಮಿ ಇತಿ ಕುಮಾರಃ ।

ವಟುವು, ನನ್ನ ಹೆಸರು ....ಶರ್ಮಾ ಎಂದು ಹೇಳಬೇಕು ।

ಕಸ್ಯ ಬ್ರಹ್ಮಚಾರ್ಯಸಿ .....ಶರ್ಮನ್ ಇತಿ ಆಚಾರ್ಯಃ ? ।

ಯಾರ ಬ್ರಹ್ಮಚಾರಿಯಾಗಿದ್ದಿಯೇ ? ಎಂದು ವಟುವಿನ ಹೆಸರಿನ ಮುಂದೆ ಶರ್ಮನ್ ಶಬ್ದವನ್ನು ಸೇರಿಸಿ ಆಚಾರ್ಯರು ವಟುವನ್ನು ಕೇಳಬೇಕು ।

ಪ್ರಾಣಸ್ಯ ಬ್ರಹ್ಮಚಾರ್ಯಸ್ಮಿ ಇತಿ ಕುಮಾರಃ ।

ಅದಕ್ಕೆ ವಟುವು, ಪ್ರಾಣನ ಬ್ರಹ್ಮಚಾರಿ ಆಗಿದ್ದೇನೆ ಎನ್ನುತ್ತಾನೆ ।

....ಶರ್ಮೈಷ ತೇ ದೇವ ಸಂಚರ .....ಶರ್ಮನ್, ಇತ್ಯಂತಂ ಆಚಾರ್ಯೋ ಜಪತಿ, ಮಂತ್ರಾಃ –

.....ಶರ್ಮೈಷ ತೇ ದೇವ ಸೂರ್ಯ ಬ್ರಹ್ಮಚಾರೀ ತಂ ಗೋಪಾಯ ಸಮಾಮ್ಯೈಷ ತೇ ಸೂರ್ಯಪುತ್ರಸ್ಸ ದೀರ್ಘಾಯುಸ್ತಮಾಮೃತ । ಯಾಗ್ ಸ್ವಸ್ತಿಮಗ್ನಿರ್ವಾಯುಸ್ಸೂರ್ಯಶ್ಚಂದ್ರಮಾ ಆಪೋನು ಸಂಚರಂತಿ ತಾಗ್ ಸ್ವಸ್ತಿಮನುಸಂಚರ .....ಶರ್ಮನ್ ॥

ನಾಮಗ್ರಹಣ ಪೂರ್ವಕವಾಗಿ ಎಲೈ ಬ್ರಹ್ಮಚಾರಿಯೇ, ನೀನು ಪ್ರೇರಕ ದೇವನಾದ ಸೂರ್ಯನ ಸ್ವರೂಪವಾಗಿದ್ದೀಯೇ, ಆ ನಿನ್ನ ಬ್ರಹ್ಮಚರ್ಯವನ್ನು ರಕ್ಷಣೆಮಾಡಿಕೋ, ಆ ಸೂರ್ಯನು ನಿನಗೆ ದೀರ್ಘಾಯುವನ್ನೂ, ಆರೋಗ್ಯವನ್ನೂ ಕೊಡಲಿ ಎಂಬ ಆರ್ಥವುಳ್ಳ ಮೇಲಿನ ಮಂತ್ರವನ್ನು ಆಚಾರ್ಯರು ಹೇಳಬೇಕು ॥

ಅಧ್ವನಾಮಧ್ವಪತ, ಇತಿ ಕುಮಾರಃ ಜಪತಿ ವಾಚಯತಿ, ಮಂತ್ರಃ –

ಓಂ ಅಧ್ವನಾಮಧ್ವಪತೇ ಶ್ರೇಷ್ಠಸ್ಯಾಧ್ವನಃ ಪಾರಮಶೀಯ ॥

ಮೇಲಿನ ಮಂತ್ರವನ್ನು ಆಚಾರ್ಯರು ಹೇಳಿ, ವಟುವಿನ ಹತ್ತಿರ ಹೇಳಿಸಬೇಕು ॥

ಆಜ್ಯ ಹೋಮಃ –

ವಟುಃ ಪುನಃ ಅಪರೇಣಾಗ್ನಿಂ ಉಪವಿಶ್ಯ । ನೈವೇದ್ಯಸ್ಥಾನೇ ಪ್ರಾಧಾನಾಹುತೀರ್ಹುತ್ವಾ ।

ಯೋಗೇ ಯೋಗೇ, ಇತಿ ಏಕಾದಶಭಿಃ ಆಜ್ಯಾಹುತೀಃ ಪ್ರತಿಮಂತ್ರಂ ವಾಚಯನ್, ಹಾವಯತಿ, ಮಂತ್ರಾಃ –

೧. ಓಂ ಯೋಗೇ ಯೋಗೇ ತವಸ್ತರಂ ವಾಜೇವಾಜೇ ಹವಾಮಹೇ । ಸಖಾಯ ಇಂದ್ರಮೂತಯೇ ಸ್ವಾಹಾ । ಇಂದ್ರಾಯೇದಂ ನಮಮ ॥

ಇಮಮಗ್ನೇ – ಇತಿ ಆಚಾರ್ಯೋ ಬ್ರೂಯಾತ್, ಕುಮಾರೋ ಜುಹುಯಾತ್, ಮಂತ್ರಃ –

೨. ಓಂ ಇಮಮಗ್ನ ಆಯುಷೇ ವರ್ಚಸೇ ಕೃಧಿ ಪ್ರಿಯಗ್ಂ ರೇತೋವರುಣ ಸೋಮರಾಜನ್ । ಮಾತೇವಾಸ್ಮಾ ಅದಿತೇ ಶರ್ಮಯಚ್ಛ ವಿಶ್ವೇದೇವಾ ಜರದಷ್ಟಿರ್ಯಥಾ ಸತ್ ಸ್ವಾಹಾ । ಅಗ್ನೀವರುಣಸೋಮಾದಿತಿರ್ವಿಶ್ವೇಭ್ಯೋ ದೇವೇಭ್ಯಃ ಇದಂ ನಮಮ ॥

೩. ಓಂ ಶತಮಿನ್ನು ಶರದೋ ಅಂತಿದೇವಾ ಯತ್ರಾನಶ್ಚಕ್ರಾ ಜರಸಂ ತನೂನಾಂ । ಪುತ್ರಾಸೋ ಯತ್ರ ಪಿತರೋ ಭವಂತಿ ಮಾನೋ ಮಧ್ಯಾ ರೀರಿಷತಾಯುರ್ಗಂತೋಃ ಸ್ವಾಹಾ । ದೇವೇಭ್ಯ ಇದಂ ನಮಮ ॥

ಅಗ್ನಿಷ್ಟ ಆಯುಃ – ಇತಿ ಆಚಾರ್ಯೋ ಬ್ರೂಯಾತ್, ಕುಮಾರೋ ಜುಹುಯಾತ್, ಮಂತ್ರಃ –

೪. ಅಗ್ನಿಷ್ಟ ಆಯುಃ ಪ್ರತರಾಂ ದಧಾತ್ವಗ್ನಿಷ್ಟೇ ಪುಷ್ಟಿಂ ಪ್ರತರಾಂ ಕೃಣೋತು। ಇಂದ್ರೋ ಮರುದ್ಭಿರ್ ಋತುಥಾ ಕೃಣೋತ್ವಾದಿತ್ಯೈಸ್ತೇ ವಸುಭಿರಾದಧಾತು ಸ್ವಾಹಾ। ಅಗ್ನೀಂದ್ರಮರುದಾದಿತ್ಯ ವಸುಭ್ಯಃ ಇದಂ ನಮಮ ॥

೫. ಓಂ ಮೇಧಾಂ ಮಹ್ಯಮಂಗಿರಸೋ ಮೇಧಾಗ್ಂ ಸಪ್ತಋಷಯೋ ದದುಃ। ಮೇಧಾಂ ಮಹ್ಯಂ ಪ್ರಜಾಪತಿರ್ಮೇಧಾಮಗ್ನಿರ್ದದಾತು ಮೇ ಸ್ವಾಹಾ। ಅಂಗಿರಸಸ್ಸಪ್ತಋಷಿಃಪ್ರಾಜಾಪತ್ಯಗ್ನಿಭ್ಯಃ ಇದಂ ನಮಮ ॥

೬. ಓಂ ಅಪ್ಸರಾಸು ಚ ಯಾ ಮೇಧಾ ಗಂಧರ್ವೇಷು ಚ ಯದ್ಯಶಃ। ದೈವೀ ಯಾ ಮಾನುಷೀ ಮೇಧಾ ಸಾ ಮಾಮಾ ವಿಶತಾದಿಹ ಸ್ವಾಹಾ। ಮೇಧಾಯಾ ಇದಂ ನಮಮ ॥

೭. ಓಂ ಇಮಂ ಮೇ ವರುಣ ಶ್ರುಧೀ ಹವಮದ್ಯಾ ಚ ಮೃಡಯ। ತ್ವಾಮವಸ್ಯು ರಾಚಕೇ ಸ್ವಾಹಾ। ವರುಣಾಯೇದಂ ನಮಮ ॥

೮. ಓಂ ತತ್ತ್ವಾಯಾಮಿ ಬ್ರಹ್ಮಣಾ ವಂದಮಾನಸ್ತದಾಶಾಸ್ತೇ ಯಜಮಾನೋ ಹವಿರ್ಭಿಃ । ಅಹೇಡಮಾನೋ ವರುಣೇಹ ಬೋಧ್ಯುರುಶಗ್ಂ ಸಮಾನ ಆಯುಃ ಪ್ರಮೋಷೀಃ ಸ್ವಾಹಾ । ವರುಣಾಯೇದಂ ನಮಮ ॥

೯. ಓಂ ತ್ವನ್ನೋ ಅಗ್ನೇ ವರುಣಸ್ಯ ವಿದ್ವಾನ್ ದೇವಸ್ಯ ಹೇಡೋಽವಯಾಸಿಸೀಷ್ಠಾಃ । ಯಜಿಷ್ಠೋ ವಹ್ನಿತಮಶ್ಶೋಶುಚಾನೋ ವಿಶ್ವಾದ್ವೇಷಾಗ್ಂಸಿ ಪ್ರಮುಮುಗ್ಧ್ಯಸ್ಮತ್ ಸ್ವಾಹಾ। ಅಗ್ನೀ ವರುಣಾಭ್ಯಾಂ ಇದಂ ನಮಮ ॥

೧೦. ಓಂ ಸತ್ವನ್ನೋ ಅಗ್ನೇಽವಮೋಭವೋತೀ ನೇದಿಷ್ಠೋ ಅಸ್ಯಾ ಉಷಸೋ ವ್ಯುಷ್ಟೌ । ಅವಯಕ್ಷ್ವನೋ ವರುಣಗ್ಂ ರರಾಣೋ ವೀಹಿ ಮೃಡೀಕಗ್ಂ ಸುಹವೋ ನ ಏಧಿ ಸ್ವಾಹಾ । ಅಗ್ನೀವರುಣಾಭ್ಯಾಂ ಇದಂ ನಮಮ ॥

೧೧. ಓಂ ತ್ವಮಗ್ನೇ ಅಯಾಸ್ಯಯಾ ಸನ್ಮನಸಾಹಿತಃ । ಅಯಾಸನ್, ಹವ್ಯ ಮೂಹಿಷೇಯಾನೋ ಧೇಹಿ ಭೇಷಜಗ್ಂ ಸ್ವಾಹಾ । ಅಗ್ನಯ ಇದಂ ನಮಮ ॥

ವಟುವು ಪುನಃ ಅಗ್ನಿಯ ಪಶ್ಚಿಮದಲ್ಲಿ (ಪೂರ್ವಾಭಿಮುಖವಾಗಿ) ಕೂರುವುದು । ನೈವೇದ್ಯದ ಸ್ಥಾನದಲ್ಲಿ ಪ್ರಧಾನ ಆಹುತಿಗಳನ್ನು ಹೋಮಿಸುವುದು ॥ ಮೇಲಿನ ಯೋಗೇಯೋಗೇ – ಎಂಬ ೧೧ ಮಂತ್ರಗಳಿಂದ ಪ್ರತಿ ಮಂತ್ರವನ್ನೂ ವಟುವಿನ ಹತ್ತಿರ ಹೇಳಿಸುತ್ತಾ, ಆಜ್ಯದಿಂದ ಹೋಮ ಮಾಡಿಸಬೇಕು । ಆದರೆ ಅವುಗಳಲ್ಲಿ

೨ನೇ ಇಮಮಗ್ನೇ – ಮತ್ತು ೪ನೇ ಅಗ್ನಿಷ್ಟ ಆಯುಃ – ಎಂಬ ೨ ಮಂತ್ರಗಳನ್ನು ಮಾತ್ರ ಆಚಾರ್ಯರು ಮಾತ್ರವೇ ಹೇಳಿ, ವಟುವಿನ ಹತ್ತಿರ ಹೋಮವನ್ನು ಮಾತ್ರ ಮಾಡಿಸಬೇಕು ॥

ಸ್ವಿಷ್ಟಕೃತ್ ಹೋಮಃ ನ । ಅನಂತರಂ ಆಚಾರ್ಯಃ, ಅನೂಯಾಜ ಸಮಿಧಹೋಮಂ, ಇಧ್ಮಸನ್ನಹನ ಹೋಮಂ ಚ ಕೃತ್ವಾ । ಜಯಾದಿಹೋಮಂ ಹುತ್ವಾ(ಅತ್ರ, ಕೇಚಿತ್ ಪಕ್ಷೇ, ರಾಷ್ಟ್ರಭೃತ್ ಹೋಮಃ ನ) । ಪರಿಧ್ಯಂಜನಂ ನ । ಲೇಪಕಾರ್ಯಂ ನ । ಪರಿಧಿ (ಶಮ್ಯಾಃ) ನಿರಸನಂ ಕೃತ್ವಾ । ಸಂಸ್ರಾವಹೋಮಃ ನ । ಅನಾಜ್ಞಾತ ಪ್ರಾಯಶ್ಚಿತ್ತ ಹೋಮಂ, ತಥಾ ಸರ್ವಪ್ರಾಯಶ್ಚಿತ್ತ ಹೋಮಂ ಚ ಕೃತ್ವಾ । ಪೂರ್ಣಾಹುತಿಃ ನ । ಉತ್ತರಪರಿಷೇಚನಂ ಕೃತ್ವಾ ॥

ಸ್ವಿಷ್ಟಕೃತ್ ಹೋಮವು ಇಲ್ಲ । ನಂತರ, ಆಚಾರ್ಯರು ಅನೂಯಾಜ ಸಮಿತ್ತನ್ನು ನೀರಿನಲ್ಲಿ ತಿಕ್ಕಿ, ಅಗ್ನಿಗೆ ಹಾಕಿ ಮತ್ತು ಇಧ್ಮವನ್ನು ಕಟ್ಟಿದ ನಾರನ್ನು ನೀರಿನಲ್ಲಿ ತಿಕ್ಕಿ ಅಗ್ನಿಗೆ ಹಾಕುವುದು । ಜಯಾದಿ ಹೋಮವನ್ನು ಮಾಡುವುದು (ಕೆಲವರ ಪ್ರಕಾರ, ಉಪನಯನ ಕರ್ಮದಲ್ಲಿ, ರಾಷ್ಟ್ರಭೃತ್ ಹೋಮವನ್ನು(ಋತಾಷಾಟ್...) ಮಾಡುವ ಅಗತ್ಯವಿಲ್ಲ, ಹೆಚ್ಚಿನ ವಿವರಣೆಗೆ – ಸಂಸ್ಕಾರ ತರಂಗಿಣೀ ಪುಷ್ಪ ೬ ರಲ್ಲಿ, ಕಪರ್ದಿಕಾರಿಕಾ ಪುಟ ೧೩೫ ರಲ್ಲಿ ರಾಷ್ಟ್ರಭೃತ್ ಹೋಮ ಪ್ರಕರಣವನ್ನು ನೋಡಿರಿ) । ಪರಿಧ್ಯಂಜನ ಇಲ್ಲ । ಲೇಪಕಾರ್ಯ ಇಲ್ಲ । ಪರಿಧಿಗಳನ್ನು (ಶಮ್ಯೆ) ಅಗ್ನಿಗೆ ಹಾಕದೇ ನಿರಸನ ಅಂದರೆ ಕುಂಡದ ಹೊರಗೆ ಉತ್ತರಭಾಗದಲ್ಲಿ ಹಾಕುವುದು । ಸಂಸ್ರಾವಹೋಮ ಇಲ್ಲ । ಅನಾಜ್ಞಾತ ಪ್ರಾಯಶ್ಚಿತ್ತಹೋಮ ಮತ್ತು ಸರ್ವಪ್ರಾಯಶ್ಚಿತ್ತ ಹೋಮಗಳನ್ನು ಮಾಡುವುದು । ಪೂರ್ಣಾಹುತಿ ಇಲ್ಲ । ಉತ್ತರ ಪರಿಷೇಚನವನ್ನು ಮಾಡುವುದು ॥

ಅಪರೇಣಾಗ್ನಿಂ ಉದಗಗ್ರಂ ವಟುಃ ಕೂರ್ಚಂ ನಿಧಾಯ । ತಸ್ಮಿನ್ ರಾಷ್ಟ್ರಭೃದಸಿ – ಇತಿ ಯಜುಷಾ ಆಚಾರ್ಯಃ ಉಪವಿಶತಿ, ಮಂತ್ರಃ – ಓಂ ರಾಷ್ಟ್ರಭೃದಸ್ಯಾಚಾರ್ಯಾ ಸಂದೀಮಾ ತ್ವದ್ಯೋಷಮ್ ॥

ಅಗ್ನಿಯ ಮುಂದೆ(ಪಶ್ಚಿಮದಲ್ಲಿ) ಉದಗಗ್ರವಾಗಿ ವಟುವು ಕೂರ್ಚವನ್ನು ಇಡಬೇಕು । ಅದರಮೇಲೆ ಆಚಾರ್ಯರು ಮೇಲಿನ ಮಂತ್ರವನ್ನು ಹೇಳಿ, ಪೂರ್ವಾಭಿಮುಖವಾಗಿ ಕೂರಬೇಕು ॥

ಸಾವಿತ್ರೀ ಉಪದೇಶಃ –

ತಸ್ಯ ಪುರಸ್ತಾತ್ ಅಭಿಮುಖಂ ಆಸೀನಃ । ವಟುಃ ಸಾವೀತ್ರೀ ಗ್ರಹಣಾರ್ಥಂ ಆಚಾರ್ಯ ಪೂಜಾಂ ಕರಿಷ್ಯೇ ಇತಿ ಸಂಕಲ್ಪ್ಯ, ಕೃತ್ವಾ ॥

ಸಾವಿತ್ರ್ಯುಪದೇಶ – ವಟುವು ಆಚಾರ್ಯರಿಗೆ ಅಭಿಮುಖವಾಗಿ (ಪಶ್ಚಿಮವನ್ನು ನೋಡುವರೀತಿ) ಕುಳಿತು, ಸಾವಿತ್ರೀ ಉಪದೇಶಕ್ಕಾಗಿ ಆಚಾರ್ಯ ಪೂಜೆ ಮಾಡುತ್ತಿದ್ದೇನೆಂದು ಸಂಕಲ್ಪಿಸಿ, ಆಚಾರ್ಯರಿಗೆ ಉಪಚಾರ ಪೂಜೆಯನ್ನು ಮಾಡಬೇಕು (ಇಲ್ಲಿ ಗಣಪತಿಪೂಜೆಯನ್ನು ಕೆಲವರು ಮಾಡುತ್ತಾರೆ, ಆದರೆ ಗಣಪತಿಗೆ ಈ ಎಲ್ಲಾ ಕರ್ಮದ ಪ್ರಾರಂಭಕ್ಕೂ ಮೊದಲೇ ಆರಾಧನೆಯನ್ನು ಮಾಡಿಯಾಗಿರುತ್ತದೆ ಅಲ್ಲದೇ ಈ ಸಂದರ್ಭದಲ್ಲಿ ಗಾಯತ್ರೀ ಮಂತ್ರೋಪದೇಶವನ್ನು ಮಾಡುವವರನ್ನೇ ಉಪಚರಿಸಿ ಪೂಜಿಸಬೇಕು । ಏಕೆಂದರೆ ಸೂತ್ರಕಾರರೂ ಸಹ ಉಪದೇಶ ಮಾಡುವವರನ್ನೇ ಉಪಚರಿಸಿ ಎಂದು ಹೇಳಿರುವುದರಿಂದ । ಸೂತ್ರಕಾರರು ಏನು ಹೇಳುತ್ತಾರೋ ಅದನ್ನೇ ಮತ್ತು ಅಷ್ಟನ್ನೇ ಆಚರಿಸಲು ಅವಶ್ಯವಾಗಿ ಪ್ರಯತ್ನಿಸುವುದೇ ಅತ್ಯಂತ ಉತ್ತಮವು ॥)

ಆಚಾರ್ಯಸ್ಯ ದಕ್ಷಿಣಂ ಪಾದಂ ಅನ್ವಾರಭ್ಯ ಆಹ, ಸಾವಿತ್ರೀಂ ಭೋ ಅನುಬ್ರೂಹಿ ಇತಿ ॥

ಆಚಾರ್ಯರ ಬಲಕಾಲನ್ನು ಹಿಡಿದು, 'ನನಗೆ' ಸಾವಿತ್ರೀ ಮಂತ್ರವನ್ನು ಅನುಗ್ರಹಿಸಿರಿ ಎಂದು ಹೇಳಬೇಕು ॥

ತದೇವ ಲಗ್ನಂ ..... ಇತಿ ಪಠಿತ್ವಾ । ತಸ್ಮೈ ಪ್ರಣವ ಪೂರ್ವಕಂ ಅನ್ವಾಹ ಓಂ ಭೂಃ ಇತಿ ಪ್ರಥಮ ಪಾದಾದೌ – ಓಂ ಭುವಃ ಇತಿ ದ್ವಿತೀಯ ಪಾದಾದೌ – ಓಗ್ಂ ಸುವಃ ಇತಿ ತೃತೀಯ ಪಾದಾದೌ, ಪಾದಾಂತೇ ಪಾದಾಂತೇ ಅವಸಾಯ । ತತೋ ಭೂಃ ಪುರ್ವಕಂ ಅರ್ಧರ್ಚೇವಸಾಯ । ಭುವಃ ಪೂರ್ವಕಂ ಉತ್ತರಾರ್ಧರ್ಚಮುಕ್ತ್ವಾ । ಸುವಃ ಪೂರ್ವಕಂ ಸರ್ವಂ ಅನವಸಾಯ ಬ್ರೂಯಾತ್ ॥

ಪ್ರಥಮ ಆವರ್ತೆ –

ಓಂ ಭೂಃ ತತ್ಸವಿತುರ್ವರೇಣ್ಯಂ । ಓಂ ಭುವಃ ಭರ್ಗೋ ದೇವಸ್ಯ ಧೀಮಹಿ । ಓಗ್ಂಸುವಃ ಧಿಯೋ ಯೋನಃ ಪ್ರಚೋದಯಾತ್ ॥

ದ್ವಿತೀಯ ಆವರ್ತೆ –

ಓಂ ಭೂಃ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಓಂ ಭುವಃ ಧಿಯೋ ಯೋನಃ ಪ್ರಚೋದಯಾತ್ ॥

ತೃತೀಯ ಆವರ್ತೆ –

ಓಗ್ಂ ಸುವಃ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋನಃ ಪ್ರಚೋದಯಾತ್ ॥

ಆ ವಟುವಿಗೆ, ಆಚಾರ್ಯರು ಓಂಕಾರ ಪೂರ್ವಕವಾಗಿ ಮೊದಲು ಪಾದ ಪಾದ ವಿಭಾಗವಾಗಿ ಅಂದರೆ – ಮೇಲಿನ ಮೊದಲ ಆವರ್ತದಲ್ಲಿ ತಿಳಿಸಿರುವಂತೆ ಉಪದೇಶಿಸಬೇಕು ॥

ನಂತರ ಭೂಃ ಎಂದು ಪೂರ್ವಾರ್ಧವಾಗಿ, ಭುವಃ ಎಂದು ಉತ್ತರಾರ್ಧವಾಗಿ ಅಂದರೆ – ಮೇಲಿನ ಎರಡನೇ ಆವರ್ತದಲ್ಲಿ ತಿಳಿಸಿರುವಂತೆ ಉಪದೇಶಿಸಬೇಕು ॥

ನಂತರ, ಸುವಃ ಎಂದು ಪೂರ್ತಿಯಾಗಿ ಗಾಯತ್ರೀ ಮಂತ್ರವನ್ನು ಮಧ್ಯೆ ನಿಲ್ಲಿಪದಂತೆ ಸಂತತವಾಗಿ ಹೇಳಬೇಕು ಅಂದರೆ ಮೇಲಿನ ಮೂರನೇ ಆವರ್ತದಲ್ಲಿ ತಿಳಿಸಿರುವಂತೆ ಉಪದೇಶಿಸಬೇಕು ॥

ಗೃಹೀತಂ ಅಸಮರ್ಥೋಪಿ ಸರ್ವಾ ಏವ ನಿಗದ್ಯತೇ । ಸಾವಿತ್ರ್ಯುಪದೇಶ ಮುಹೂರ್ತಃ ಸುಮುಹೂರ್ತಃ ಅಸ್ತ್ವಿತಿ ಭವಂತಃ ಅನುಗೃಹ್ಣಂತು । ಸುಮುಹೂರ್ತೋಸ್ತು ಇತಿ ಪ್ರತಿವಚನಂ ॥

ತದೇವ ಲಗ್ನಂ..... ಶ್ಲೋಕವನ್ನು ಹೇಳಿ । ವಟುವು ಮಂತ್ರವನ್ನು ಗ್ರಹಿಸಲು (ಹೇಳಲು) ಅಸಮರ್ಥನಾಗಿದ್ದರೂ ಸಹ ಪೂರ್ತಿಯಾಗಿಯೇ, ಮೇಲೆ ಹೇಳಿದ ವಿಧಾನದಲ್ಲಿಯೇ ಉಪದೇಶಿಸಬೇಕು । ಸಾವಿತ್ರೀ ಮಂತ್ರ ಉಪದೇಶದ ಮುಹೂರ್ತವು ಸುಮುಹೂರ್ತವಾಗಿರಲೆಂದು ಪ್ರಾರ್ಥಿಸಬೇಕು । ಸುಮುಹೂರ್ತವಾಗಿದೆ ಎಂದು ಸಭೆಯ ಪ್ರತಿವಚನ ॥

ಅವೃಧಮಿತಿ – ವಾಚಿತೇನ ಉತ್ತರೋಷ್ಠಂ ಉಪಸ್ಪೃಶತೇ, ಮಂತ್ರಃ – ಓಂ ಅವೃಧಮಸೌ ಸೌಮ್ಯ ಪ್ರಾಣ ಸ್ವಂ ಮೇ ಗೋಪಾಯ ॥ ಅಪ ಉಪಸ್ಪೃಶ್ಯ ॥

ಮೇಲಿನ ಮಂತ್ರದಿಂದ ವಟುವು ಉತ್ತರ(ಮೇಲಿನ) ತುಟಿಯನ್ನು ಮುಟ್ಟಬೇಕು ॥ ನೀರಲ್ಲಿ ಕೈತೊಳೆಯಬೇಕು ॥

ಆಚಮನಂ, ಬ್ರಹ್ಮಣ ಆಣೀಸ್ಥಃ - ಇತಿ ಯುಗಪತ್ ಕರ್ಣೌ ಸ್ಪರ್ಶತಿ,
ಮಂತ್ರಃ– ಓಂ ಬ್ರಹ್ಮಣ ಆಣೀಸ್ಥಃ ॥

ನಂತರ ಆಚಮನ ಮಾಡಿ, ಮೇಲಿನ ಮಂತ್ರವನ್ನು ಹೇಳಿ, ಒಟ್ಟಿಗೆ ೨ ಕಿವಿಗಳನ್ನು ವಟುವು ಹಿಡಿದುಕೊಳ್ಳಬೇಕು ॥

ದಂಡಧಾರಣಂ –

ವಿಶೇಷ ವಿಷಯ – ವಟುವು ಗ್ರಹಣ ಮಾಡುವ ದಂಡದ (ಕೋಲು) ವಿಷಯದಲ್ಲಿಯೂ ಬಹಳ ತಪ್ಪಾದ ನಡವಳಿಕೆಗಳನ್ನು ಅನುಸರಿಸುತ್ತಿರುವುದನ್ನು ನಾವುಗಳು ಕಾಣುತ್ತಿದ್ದೇವೆ । ಅದೇನೆಂದರೆ, ಮೇಖಲೆ(ನೊಜೆಹುಲ್ಲಿನ ಉಡುದಾರ) – ಕೃಷ್ಣಾಜಿನ – ದಂಡ – ಯಜ್ಞೋಪವೀತ – ಶಿಖೆ ಇವಿಷ್ಟೂ ಬ್ರಹ್ಮಚರ್ಯಾಶ್ರಮದ ಗುರುತುಗಳು । ಸಾವಿತ್ರೀ(ಗಾಯತ್ರೀ) ಮಂತ್ರದ ಉಪದೇಶವಾದ ಕ್ಷಣದಿಂದ ಆ ವಟುವಿಗೆ ಅಧಿಕೃತವಾಗಿ, ಮಂತ್ರೋಕ್ತವಾಗಿ ಪ್ರಾಪ್ತವಾಗುವ ಇವಿಷ್ಟೂ ಸಹ ಆ ವಟುವು ಸಮಾವರ್ತನೆಯನ್ನು(ಸ್ನಾತಕ) ಮಾಡಿಕೊಳ್ಳುವವರೆಗೂ ಕಡ್ಡಾಯವಾಗಿ ಅವನ ಬಳಿಯೇ ಇರತಕ್ಕವುಗಳು । ಆದರೆ ಪ್ರತಿ ವರ್ಷದ ಉಪಾಕರ್ಮದಂದು ಹೊಸದಾದ ಇವಿಷ್ಟನ್ನೂ ಮಂತ್ರಪೂರ್ವಕವಾಗಿ ಸ್ವೀಕರಿಸಿ, ನಂತರ ತನ್ನ

ಬಳಿಯಿರುವಂತಹ ಹಿಂದಿನವರ್ಷದ ಅವುಗಳನ್ನು ನೀರಿನಲ್ಲಿ ಬಿಡಬೇಕು(ಸಮಾವರ್ತನೆಯವರೆಗೂ ಹೀಗೆಯೇ) । ಈ ಕ್ರಮ ಶಾಸ್ತ್ರೀಯವಾದದ್ದು, ಗೃಹ್ಯಸೂತ್ರದಲ್ಲಿರುವುದು । ಆದರೆ ನಾವು ಮಾಡುತ್ತಿರುವುದೇನು ?, ಯಜ್ಞೋಪವೀತವನ್ನು ಬಿಟ್ಟು, ಉಳಿದೆಲ್ಲವನ್ನೂ ಉಪನಯನವಾದ ಸ್ವಲ್ಪ ಸಮಯದಲ್ಲಿಯೇ ತೆಗೆದುಬಿಡುತ್ತೇವೆ । ಅದರಲ್ಲಿಯೂ ದಂಡವನ್ನು ಅರಳಿಮರದಲ್ಲಿ ಇಟ್ಟುಬರುತ್ತೇವೆ ಹಾಗೆ ಇಟ್ಟುಬರುವುದೇ ಶಾಸ್ತ್ರವೆಂದು ತಿಳಿದಿದ್ದೇವೆ !। ಆದರೆ ಆ ಬ್ರಹಚಾರಿಯು ದಂಡವನ್ನು ಹೇಗೆ ಉಪಯೋಗಿಸಬೇಕೆಂದರೆ – ಮನೆಯಲ್ಲಿರುವ ದೇವರ ಕೋಣೆಯಲ್ಲಿ ಅದನ್ನು ಇಟ್ಟಿರಬೇಕು, ಸಂಧ್ಯಾವಂದನೆಯಾದ ನಂತರ ಆ ದಂಡವನ್ನು ಹಿಡಿದುಕೊಂಡು ದೇವರಿಗೆ, ನಂತರ ತಂದೆತಾಯಿಯರಿಗೆ ೪ ಅಥವ ೮ ನಮಸ್ಕಾರಗಳನ್ನು(ದಂಡನಮಸ್ಕಾರ) ಮಾಡಿ, ನಂತರ ದಂಡವನ್ನು ಹಿಡಿದುಕೊಂಡು, ಎರಡೇ ಮನೆಗಳಲ್ಲಾಗಲೀ ಹೋಗಿ ಭಿಕ್ಷೆ ಬೇಡಿ, ವಾಪಸ್ಸುಬಂದು, ಸಂಗ್ರಹವಾದ ಪದಾರ್ಥವನ್ನು ತಾಯಿಗೆ ಕೊಟ್ಟು, ದಂಡವನ್ನು ಪುನ: ದೇವರಕೋಣೆಯಲ್ಲಿ ಇಡಬೇಕು, ಇದು ಸರಿಯಾದ ವಿಧಾನ । ಹೀಗೆಯೂ ಒಮ್ಮೆ ಯೋಚಿಸೋಣ – ಭಿಕ್ಷೆ ಬೇಡುವುದನ್ನು ಬಿಡಿ(ಇಂದಿನ ಮಕ್ಕಳಿಗೆ, ಪೋಷಕರಿಗೆ ಅದು ಕಲ್ಪನೆಗೂ ಮೀರಿದ ಅಪಮಾನ!!), ನಮಸ್ಕಾರವನ್ನಾದರೂ ಮಾಡಬಹುದು(ಈ ಕ್ರಿಯೆಯು, ಮಗ ಹಾಗೂ ತಂದೆತಾಯಿಯರಿಗೆ ಅದೆಂತಹ ಅಮೂಲ್ಯವಾದ ಬೆಸುಗೆಯನ್ನು

ತರುತ್ತದೆ ಗೊತ್ತೇ??!!) ಇದಾವುದನ್ನೂ ಮಾಡದೆಯೂ ಸಹ ದಂಡವನ್ನು ಅದರ ಪಾಡಿಗೆ ಅದನ್ನು ದೇವರ ಕೋಣೆಯಲ್ಲಿ ಇಡುವುದಕ್ಕಾದರೂ ಇರುವ ತೊಂದರೆ ಏನು ? ತಾಂತ್ರಿಕ ದೃಷ್ಟಿಯಿಂದ ನೋಡಿದರೂ ಯಾವ ಕಷ್ಟವೂ ಇಲ್ಲ, ಏಕೆಂದರೆ ಅದಕ್ಕೆ ಬೇಕಾದ ಜಾಗ ಕೇವಲ ೨ ಇಂಚುಗಳು ಮಾತ್ರ !! । ಹೀಗೆ ಮಾಡುವುದನ್ನು ಬಿಟ್ಟು, ಅರಳೀಮರಕ್ಕೆ ಇಡುವುದೆಂದರೇನು ? ಆ ಮರಕ್ಕೂ ಈ ದಂಡಕ್ಕೂ ಯಾವುದೇ ಸಂಬಂಧವಿಲ್ಲವೆಂಬುದನ್ನೂ ಪ್ರತಿಯೊಬ್ಬರೂ ತಿಳಿಯಬೇಕು । ಮಾತ್ರವಲ್ಲದೇ, ಇಡುವುದರಿಂದಲೇ ದೋಷವೆಂಬುದನ್ನೂ ನಾವು ತಿಳಿಯಬೇಕಾಗಿದೆ । ಏಕೆಂದರೆ, ಬ್ರಹ್ಮಚರ್ಯಾಶ್ರಮದ ಗುರುತುಗಳಾದ, ಮುಂತ್ರೋಕ್ತವಾಗಿ ಸ್ವೀಕರಿಸಲ್ಪಟ್ಟಂತಹ ಇವುಗಳನ್ನು ನಮಗೆ ತೋಚಿದ ಕಡೆ ಇಡುವುದಕ್ಕಾಗಲೀ ತ್ಯಾಗ ಮಾಡುವುದಕ್ಕಾಗಲೀ(ಬಿಟ್ಟುಬಿಡುವುದಕಾಗಲೀ) ಅವಕಾಶವಿಲ್ಲ । ಅವುಗಳನ್ನು ಸ್ನಾತಕದವರೆಗೂ ಇಟ್ಟುಕೊಳ್ಳುವುದಕ್ಕಾಗಿಯೇ ಕೊಡುವುದಾದಾಗ, ಬಿಡುವ ಪ್ರಶ್ನೆ ಎಲ್ಲಿಂದ ಬರುತ್ತದೆ ?? । ಹೀಗಿದ್ದೂ ಅವುಗಳನ್ನು ಬಿಟ್ಟರೆ, ಅದನ್ನು ದೊಡ್ಡ ದೋಷವೆಂದೇ ಶಾಸ್ತ್ರಗಳು ಪರಿಗಣಿಸುತ್ತವೆ ಅಲ್ಲದೇ ಈ ರೀತಿಯ ನಡವಳಿಕೆಗಳು ನಮ್ಮ ಜೀವನದಲ್ಲಿ ಬರುವ ಅನೇಕ ತೊಂದರೆ, ಹಿಂಸೆಗಳಿಗೆ ಆಂತರಿಕ ಕಾರಣಗಳಾಗಿರುತ್ತವೆ ಎಂಬುದನ್ನೂ ನಾವುಗಳು ಮರೆಯಬಾರದು ॥

ಸುಶ್ರವಃ – ಇತಿ ವಾಚಿತೇನ ದಂಡಮಾದತ್ತೇ, ಮಂತ್ರಃ –

ಓಂ ಸುಶ್ರವಸ್ಸುಶ್ರವಸಂ ಮಾ ಕುರು ಯಥಾತ್ವಗ್ಂ ಸುಶ್ರವಸ್ಸುಶ್ರವಾ ಅಸ್ಯೇವ ಮಹಗ್ಂ ಸುಶ್ರವಸ್ಸುಶ್ರವಾ ಭೂಯಾಸಂ ಯಥಾ ತ್ವಗ್ಂ ಸುಶ್ರವಸ್ಸುಶ್ರವೋ ದೇವಾನಾಂ ನಿಧಿಗೋಪೋಽಸ್ಯೇವ ಮಹಂ ಬ್ರಾಹ್ಮಣಾನಾಂ ಬ್ರಹ್ಮಣೋ ನಿಧಿಗೋಪೋ ಭೂಯಾಸಮ್ ॥

ಮೇಲಿನ ಮಂತ್ರವನ್ನು ಆಚಾರ್ಯರಿಂದ ಹೇಳಿಸಿಕೊಂಡು, ಪಾಲಾಶ(ಮುತ್ತುಗ)ದಂಡವನ್ನು ವಟುವು ಪಡೆದುಕೊಳ್ಳಬೇಕು ॥

ಸ್ಮೃತಂ ಚ ಮ – ಇತ್ಯಾದಿ ವಾಚಯತಿ, ಮಂತ್ರಾಃ –

ನಂತರ ಸ್ಮೃತಂ ಚ ಮೇ – ಮುಂತಾದ ಮಂತ್ರಗಳನ್ನು ಗುರುವು ಹೇಳಿಕೊಡಬೇಕು ॥

ಓಂ ಸ್ಮೃತಂ ಚ ಮೇಽಸ್ಮೃತಂ ಚ ಮೇ ತನ್ಮ ಉಭಯಂ ವ್ರತಂ ॥

ಒಳ್ಳೆಯ ವಿಷಯಗಳನ್ನು ಸದಾ ಸ್ಮರಣೆ ಮಾಡುವ ಮತ್ತು ಕೆಟ್ಟ ವಿಷಯಗಳನ್ನು ಯಾವಾಗಲೂ ಸ್ಮರಣೆ ಮಾಡದಿರುವ ಈ ಎರಡೂ ನಡವಳಿಕೆಗಳೂ ನನ್ನ ವ್ರತವಾಗಲಿ(ನಿಯಮವಾಗಲಿ, ಕರ್ತವ್ಯವಾಗಲಿ) ॥

ಓಂ ನಿಂದಾ ಚ ಮೇಽನಿಂದಾ ಚ ಮೇ ತನ್ಮ ಉಭಯಂ ವ್ರತಂ ॥

ಧರ್ಮ ವಿರುದ್ಧದ ನಡವಳಿಕೆಗಳನ್ನು ನಿಂದೆ ಮಾಡುವುದೂ ಮತ್ತು ಧರ್ಮದ ವಿಷಯಗಳನ್ನು ನಿಂದೆ ಮಾಡದಿರುವ ಈ ಎರಡೂ ನಡವಳಿಕೆಗಳೂ ನನ್ನ ವ್ರತವಾಗಲಿ ॥

ಓಂ ಶ್ರದ್ಧಾ ಚ ಮೇಽಶ್ರದ್ಧಾ ಚ ಮೇ ತನ್ಮ ಉಭಯಂ ವ್ರತಂ ॥

ಒಳ್ಳೆಯ ವಿಷಯಗಳನ್ನು ಕಲಿಯುವುದರಲ್ಲಿ ಶ್ರದ್ಧೆಯೂ ಮತ್ತು ಕೆಟ್ಟ ವಿಷಯಗಳನ್ನು ಕಲಿಯುವುದರಲ್ಲಿ ಅಶ್ರದ್ಧೆಯೂ ಈ ಎರಡೂ ನಡವಳಿಕೆಗಳೂ ನನ್ನ ವ್ರತವಾಗಲಿ ॥

ಓಂ ವಿದ್ಯಾ ಚ ಮೇಽವಿದ್ಯಾ ಚ ಮೇ ತನ್ಮ ಉಭಯಂ ವ್ರತಂ ॥

ಧರ್ಮ ಸಮ್ಮತವಾದ ವಿದ್ಯೆಗಳನ್ನು ಕಲಿಯುವುದೂ ಮತ್ತು ಧರ್ಮ ಸಮ್ಮತವಲ್ಲದ ವಿದ್ಯೆಗಳನ್ನು ಕಲಿಯದಿರುವುದೂ ಈ ಎರಡೂ ನನ್ನ ವ್ರತವಾಗಲಿ ॥

ಓಂ ಶ್ರುತಂ ಚ ಮೇಽಶ್ರುತಂ ಚ ಮೇ ತನ್ಮ ಉಭಯಂ ವ್ರತಂ ॥

ಒಳ್ಳೆಯ (ಧರ್ಮ ಸಮ್ಮತವಾದ) ವಿಷಯಗಳನ್ನು ಕೇಳುವುದೂ ಮತ್ತು ಕೆಟ್ಟ (ಅಧರ್ಮದ) ವಿಷಯಗಳನ್ನು ಕೇಳದಿರುವುದೂ ಈ ಎರಡೂ ನನ್ನ ವ್ರತವಾಗಲಿ ॥

ಓಂ ಸತ್ಯಂ ಚ ಮೇಽನೃತಂ ಚ ಮೇ ತನ್ಮ ಉಭಯಂ ವ್ರತಂ ॥

ಸತ್ಯದ ಮಾರ್ಗದಲ್ಲಿ ನಡೆಯುವ ಮತ್ತು ಸುಳ್ಳಿನ ಮಾರ್ಗದಲ್ಲಿ ನಡೆಯದಿರುವ ಈ ಎರಡೂ ನನ್ನ ವ್ರತವಾಗಲಿ ॥

ಓಂ ತಪಶ್ಚ ಮೇಽತಪಶ್ಚ ಮೇ ತನ್ಮ ಉಭಯಂ ವ್ರತಂ ॥

ಬ್ರಹ್ಮಚರ್ಯದ ಕರ್ತವ್ಯಗಳನ್ನು ಬಿಡದೇ ಮಾಡುವುದೇ ತಪಸ್ಸಾದ್ದರಿಂದ, ಅಂತಹ ತಪಸ್ಸನ್ನು ಮಾಡುವ ಮತ್ತು ಆ ತಪಸ್ಸಿನಿಂದ ವಿಮುಖನಾಗದಿರುವ ಈ ಎರಡೂ ನಡವಳಿಕೆಗಳೂ ನನ್ನ ವ್ರತವಾಗಲಿ ॥

ಓಂ ವ್ರತಂ ಚ ಮೇಽವ್ರತಂ ಚ ಮೇ ತನ್ಮ ಉಭಯಂ ವ್ರತಂ ॥

ಮೇಲೆ ತಿಳಿಸಿರುವ ಎಲ್ಲಾ ಕಟ್ಟಲೆ, ನಿಯಮಗಳನ್ನು ಕರ್ತವ್ಯದಂತೆ ಪಾಲಿಸುವ ಮತ್ತು ಇವುಗಳನ್ನು ತಿರಸ್ಕರಿಸದಿರುವ ಈ ಎರಡೂ ನಡವಳಿಕೆಗಳೂ ನನ್ನ ವ್ರತವಾಗಲಿ ॥

ಓಂ ಯದ್ಬ್ರಾಹ್ಮಣಾನಾಂ ಬ್ರಹ್ಮಣಿ ವ್ರತಂ ಯದಗ್ನೇಸ್ಸೋಂದ್ರಸ್ಯ ಸಪ್ರಜಾಪತಿಕಸ್ಯ ಸದೇವಸ್ಯ ಸದೇವರಾಜಸ್ಯ ಸಮನುಷ್ಯಸ್ಯ ಸಮನುಷ್ಯರಾಜಸ್ಯ ಸಪಿತೃಕಸ್ಯ ಸಪಿತೃರಾಜಸ್ಯ ಸಗಂಧರ್ವಾಪ್ಸರಸ್ಕಸ್ಯ । ಯನ್ಮ ಆತ್ಮನ ಆತ್ಮನಿ ವ್ರತಂ ತೇನಾಹಗ್ಂ ಸರ್ವ ವ್ರತೋ ಭೂಯಾಸಮ್ ॥

ಗೋದಾನಂ –

ವಟುಃ ಸಾವಿತ್ರೀ ಸ್ವೀಕರಣ ಸಾಂಗತಾ ಫಲ ಸಿದ್ಧ್ಯರ್ಥಂ, ಗೋದಾನಂ ಕರಿಷ್ಯೇ – ಇತಿ ಸಂಕಲ್ಪ್ಯ, ಆಚಾರ್ಯಾಯ 'ಗುರವೇ ವರಂ ದದಾಮಿ' ಇತಿ ಗೋದಾನಂ ದತ್ವಾ ॥

ಗೋದಾನ – ವಟುವು, ಗುರುಗಳಿಗೆ ಸಾವಿತ್ರೀ ಮಂತ್ರವನ್ನು ಉಪದೇಶಿಸಿದ್ದಕ್ಕಾಗಿ, ಹಸುವನ್ನು ದಾನವಾಗಿ ಕೊಡುತ್ತೇನೆ – ಎಂದು ಸಂಕಲ್ಪಿಸಿ, ಆಚಾರ್ಯರಿಗೆ, ಗುರುಗಳೇ ದಕ್ಷಿಣೆಯನ್ನು ಕೊಡುತ್ತೇನೆ ಎಂದು ಹೇಳಿ, ಹಸುವನ್ನು ಕೊಡಬೇಕು ॥

ಮಂತ್ರೇಣ ಪ್ರತಿಗೃಹ್ಯ, ಮಂತ್ರಃ –

ಓಂ ದೇವಸ್ಯತ್ವಾ ಸವಿತುಃ ಪ್ರಸವೇಽಶ್ವಿನೋರ್ಬಾಹುಭ್ಯಾಂ ಪೂಷ್ಣೋ ಹಸ್ತಾಭ್ಯಾಂ ಪ್ರತಿಗೃಹ್ಣಾಮಿ । ರಾಜಾತ್ವಾ ವರುಣೋ ನಯತು ದೇವಿ ದಕ್ಷಿಣೇ ರುದ್ರಾಯ ಗಾಮ್ । ತೇನಾಮೃತತ್ವಮಶ್ಯಾಮ್ । ವಯೋದಾತ್ರೇ । ಮಯೋ ಮಹ್ಯಮಸ್ತು ಪ್ರತಿಗ್ರಹೀತ್ರೇ । ಕ ಇದಂ ಕಸ್ಮಾ ಅದಾತ್ । ಕಾಮಃಕಾಮಾಯ । ಕಾಮೋ ದಾತಾ । ಕಾಮಃ ಪ್ರತಿಗ್ರಹೀತಾ । ಕಾಮಗ್ಂ ಸಮುದ್ರಮಾವಿಶ । ಕಾಮೇನ ತ್ವಾ ಪ್ರತಿಗೃಹ್ಣಾಮಿ । ಕಾಮೈತತ್ತೇ । ಏಷಾ ತೇ ಕಾಮ ದಕ್ಷಿಣಾ । ಉತ್ತಾನಸ್ತ್ವಂಗೀರಸಃ ಪ್ರತಿಗೃಹ್ಣಾತು ॥

ಆಚಾರ್ಯರು, ಅದನ್ನು ಮೇಲಿನ ಮಂತ್ರದಿಂದ, ಮಂತ್ರಪೂರ್ವಕವಾಗಿ (ಮಂತ್ರವನ್ನು ಹೇಳಿದ ನಂತರ) ಸ್ವೀಕರಿಸಬೇಕು ॥

ಉದಾಯುಷೇತಿ – ಉತ್ಥಾಪ್ಯ, ಉದಾಯುಷೇತಿ - ವಾಚಯಿತ್ವಾ, ಮಂತ್ರಃ - ಓಂ ಉದಾಯುಷಾ ಸ್ವಾಯುಷೋದೋಷಧೀನಾಗ್ಂ ರಸೇನೋತ್ಪರ್ಜನ್ಯಸ್ಯ ಶುಷ್ಮೇಣೋದಸ್ಥಾಮಮೃತಾಗ್ಂ ಅನು ॥

ಆಚಾರ್ಯರು ಮೇಲಿನ ಮಂತ್ರದಿಂದ, ವಟುವನ್ನು ಏಳಿಸಿ ಅದೇ ಮಂತ್ರವನ್ನು ವಟುವಿನ ಹತ್ತಿರ ಹೇಳಿಸಬೇಕು ॥

ಆದಿತ್ಯೋಪಸ್ಥಾನಂ –

ತಚ್ಚಕ್ಷುರಿತಿ - ವಾಚಿತ್ಯೈಃ, ಆದಿತ್ಯಂ ಉಪತಿಷ್ಠತೇ, ಮಂತ್ರಃ –

ಓಂ ತಚ್ಚಕ್ಷುರ್ದೇವಹಿತಂ ಪುರಸ್ತಾಚ್ಛುಕ್ರಮುಚ್ಚರತ್ । ಪಶ್ಯೇಮ ಶರದಶ್ಶತಂ ಜೀವೇಮ ಶರದಶ್ಶತಂ ನಂದಾಮ ಶರದಶ್ಶತಂ ಮೋದಾಮ ಶರದಶ್ಶತಂ ಭವಾಮ ಶರದಶ್ಶತಗ್ಂ ಶೃಣವಾಮ ಶರದಶ್ಶತಂ ಪ್ರಬ್ರವಾಮ ಶರದಶ್ಶತಮಜೀತಾಸ್ಯಾಮ ಶರದಶ್ಶತಂ ಜ್ಯೋಕ್ಚ ಸೂರ್ಯಂ ದೃಶೇ ॥

ಆದಿತ್ಯ ಉಪಸ್ಥಾನ – ಮೇಲಿನ ಮಂತ್ರವನ್ನು ವಾಚನ ಮಾಡಿಸಿ, ಆದಿತ್ಯ ಉಪಸ್ಥಾನವನ್ನು ಮಾಡಿಸಬೇಕು(ಸೂರ್ಯನನ್ನು ನೋಡಿಸಬೇಕು) ॥

ಸರ್ವಂ ಶಾಸ್ತ್ರಂ ಉಪದೇಶ್ಯನ್, ಯಸ್ಮಿನ್ ಭೂತಂ – ಇತಿ ದಕ್ಷಿಣೇಹಸ್ತೇ ಗೃಹ್ಣೀಯಾತ್ ಯಥಾ ಸ್ಥಾನಂ ಉಪವೇಶ್ಯ, ಮಂತ್ರಃ –

ಓಂ ಯಸ್ಮಿನ್ ಭೂತಂ ಚ ಭವ್ಯಂ ಚ ಸರ್ವೇ ಲೋಕಾಸ್ಸಮಾಹಿತಾಃ । ತೇನ ಗೃಹ್ಣಾಮಿತ್ವಾಮಹಂ ಮಹ್ಯಂ ಗೃಹ್ಣಾಮಿತ್ವಾಮಹಂ ಪ್ರಜಾಪತಿನಾತ್ವಾ ಮಹ್ಯಂ ಗೃಹ್ಣಾಮಿ .....ಶರ್ಮನ್ ॥

ಈ ಸಮಯದಲ್ಲಿಯೇ ಆಚಾರ್ಯರು ಶಿಷ್ಯನಿಗೆ ಎಲ್ಲಾ ಶಾಸ್ತ್ರಗಳನ್ನೂ ಉಪದೇಶಿಸುವುದಕ್ಕಾಗಿ ಮೇಲಿನ ಮಂತ್ರದಿಂದ ಬಲಕೈಯನ್ನು ಹಿಡಿದುಕೊಂಡು ವಟುವನ್ನು ಯಥಾ ಸ್ಥಾನದಲ್ಲಿ ಕೂರಿಸಬೇಕು ॥

ಪ್ರಣೀತಾ ಮೋಕ್ಷಣಂ, ಬ್ರಹ್ಮವಿಸರ್ಜನಂ ಚ ಕೃತ್ವಾ ॥

ಪ್ರಣೀತಾ ಮೋಕ್ಷಣ ಮತ್ತು ಬ್ರಹ್ಮವಿಸರ್ಜನೆಗಳನ್ನು ಮಾಡಿ ॥

ಸಮಿದಾಧಾನಂ –

.....ಪ್ರೀತ್ಯರ್ಥಂ, ಪ್ರಾತಸ್ಸಮಿದಾಧಾನಂ ಕರಿಷ್ಯೇ, ಇತಿ ಸಂಕಲ್ಪ್ಯ ಪರಿತ್ವೇತಿ – ಪರ್ಯುಕ್ಷ್ಯ, ಪರಿಮೃಜ್ಯ ಮಂತ್ರಃ–

ಓಂ ಪರಿತ್ವಾಗ್ನೇ ಪರಿಮೃಜಾಮ್ಯಾಯುಷಾ ಚ ಧನೇನ ಚ । ಸುಪ್ರಜಾಃ ಪ್ರಜಯಾ ಭೂಯಾಸಗ್ಂ ಸುವೀರೋ ವೀರೈಃ ಸುವರ್ಚಾ ವರ್ಚಸಾ ಸುಪೋಷಃ ಪೋಷೈಃ ಸುಗೃಹೋ ಗೃಹೈಸ್ಸುಪತಿಃ ಪತ್ಯಾ ಸುಮೇಧಾ ಮೇಧಯಾ ಸುಬ್ರಹ್ಮಾ ಬ್ರಹ್ಮಚಾರಿಭಿಃ ॥

ಸಮಿದಾಧಾನ – ಮೇಲಿನ ಮಂತ್ರದಿಂದ ಅಗ್ನಿಯನ್ನು ಮತ್ತು ಕುಂಡವನ್ನು ನೀರಿನಿಂದ(ಪ್ರೋಕ್ಷಿಸಿ), ತಿಕ್ಕಿ ಸ್ವಚ್ಛಗೊಳಿಸಬೇಕು ॥

ಅಗ್ನೇಃಪರಿಷೇಚನಂ –

ಅಗ್ನಿಯನ್ನು ನೀರಿನಿಂದ ಕೆಳಗಿನ ಮಂತ್ರಗಳಿಂದ ವಿಧಿಯಂತೆ (ಸುತ್ತುಗಟ್ಟಬೇಕು)ಪರಿಷೇಚನ ಮಾಡಬೇಕು ॥

ಅದಿತೇಽನು ಮನ್ಯಸ್ವ । ಅನುಮತೇಽನು ಮನ್ಯಸ್ವ । ಸರಸ್ವತೇಽನು ಮನ್ಯಸ್ವ । ದೇವಸವಿತಃ ಪ್ರಸುವ ॥

ಅಗ್ನಯೇ ಸಮಿಧಂ – ಇತ್ಯಾದಿಭಿಃ ಸಮಿಧಂ ಆದಧ್ಯಾತ್, ಮಂತ್ರಾಃ –

ಕೆಳಗಿನ ಮಂತ್ರಗಳನ್ನು ಹೇಳಿಸಿ, ಸಮಿದಾಧಾನ(ಸಮಿತ್ತಿನಹೋಮ)ಮಾಡಿಸಬೇಕು ॥

೧. ಓಂ ಅಗ್ನಯೇ ಸಮಿಧ ಮಾಹಾರ್ಷಂ ಬೃಹತೇ ಜಾತವೇದಸೇ ಯಥಾತ್ವಮಗ್ನೇ ಸಮಿಧಾ ಸಮಿಧ್ಯಸ ಏವಂ ಮಾ ಮಾಯುಷಾ ವರ್ಚಸಾ ಸನ್ಯಾ ಮೇಧಯಾ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನಾನ್ನಾದ್ಯೇನ ಸಮೇಧಯಸ್ವಾಹಾ ॥

೨. ಓಂ ಏಧೋಸ್ಯೇಧಿಷೀ ಮಹಿ ಸ್ವಾಹಾ ॥

೩. ಓಂ ಸಮಿದಸಿ ಸಮೇಧಿಷೀ ಮಹಿ ಸ್ವಾಹಾ ॥

೪. ಓಂ ತೇಜೋಸಿ ತೇಜೋಮಯಿಧೇಹಿ ಸ್ವಾಹಾ ॥

೫. ಓಂ ಅಪೋ ಅದ್ಯಾನ್ವಚಾರಿಷಗ್ಂ ರಸೇನ ಸಮಸೃಕ್ಷ್ಮಹಿ । ಪಯಸ್ವಾಗ್ಂ ಅಗ್ನ ಆಗಮಂ ತಂ ಮಾ ಸಗ್ಂಸೃಜ ವರ್ಚಸಾ ಸ್ವಾಹಾ ॥

೬. ಓಂ ಸಂಮಾಗ್ನೇ ವರ್ಚಸಾ ಸೃಜ ಪ್ರಜಯಾ ಚ ಧನೇನ ಚ ಸ್ವಾಹಾ ॥

೭. ಓಂ ವಿದ್ಯುನ್ಮೇ ಅಸ್ಯ ದೇವಾ ಇಂದ್ರೋ ವಿದ್ಯಾತ್ಸಹ ಋಷಿಭಿಃ ಸ್ವಾಹಾ ॥

೮. ಓಂ ಅಗ್ನಯೇ ಬೃಹತೇ ನಾಕಾಯ ಸ್ವಾಹಾ ॥

೯. ಓಂ ದ್ಯಾವಾ ಪೃಥಿವೀಭ್ಯಾಗ್ಂ ಸ್ವಾಹಾ ॥

೧೦. ಓಂ ಏಷಾತೇ ಅಗ್ನೇ ಸಮಿತ್ತಯಾ ವರ್ಧಸ್ವ ಚಾಪ್ಯಾಯಸ್ವ ಚಿತಯಾಹಂ ವರ್ಧಮಾನೋ ಭೂಯಾಸ ಮಾಪ್ಯಾಯಮಾನಶ್ಚ ಸ್ವಾಹಾ ॥

೧೧. ಓಂ ಯೋಮಾಗ್ನೇ ಭಾಗಿನಗ್ಂ ಸಂತಮಥಾ ಭಾಗಂ ಚಿಕೀರ್ಷತ್ಯಭಾಗಮಗ್ನೇ ತಂ ಕುರು ಮಾ ಮಗ್ನೇ ಭಾಗಿನಂ ಕುರು ಸ್ವಾಹಾ ॥

೧೨. ಓಂ ಸಮಿಧಮಾಧಾಯಾಗ್ನೇ ಸರ್ವವ್ರತೋ ಭೂಯಾಸಗ್ಂ ಸ್ವಾಹಾ ॥

೧೩. ಓಂ ಭೂಸ್ಸ್ವಾಹಾ ॥

೧೪. ಓಂ ಭುವಸ್ಸ್ವಾಹಾ ॥

೧೫. ಓಗ್ಂ ಸುವಸ್ಸ್ವಾಹಾ ॥

೧೬. ಓಂ ಭೂರ್ಭುವಸ್ಸುವಸ್ಸ್ವಾಹಾ ॥

ಅಗ್ನೇಃ ಉತ್ತರಪರಿಷೇಚನಂ –

ಅಗ್ನಿಯನ್ನು ನೀರಿನಿಂದ ಕೆಳಗಿನ ಮಂತ್ರಗಳಿಂದ ವಿಧಿಯಂತೆ ಉತ್ತರ ಪರಿಷೇಚನ(ಸುತ್ತುಗಟ್ಟಬೇಕು) ಮಾಡಬೇಕು ॥

ಅದಿತೇऽನ್ವಮಗ್ಂ ಸ್ಥಾಃ । ಅನುಮತೇऽನ್ವಮಗ್ಂ ಸ್ಥಾಃ । ಸರಸ್ವತೇऽನ್ವಮಗ್ಂ ಸ್ಥಾಃ । ದೇವಸವಿತಃ ಪ್ರಾಸಾವೀಃ ॥

ಅಗ್ನೇಃ ಉಪಸ್ಥಾನಂ –

ನಿಂತುಕೊಂಡು, ಕೈಮುಗಿದುಕೊಂಡು ಕೆಳಗಿನ ಮಂತ್ರಗಳನ್ನು ಹೇಳುವುದು ॥

ಓಂ ಯತ್ತೇ ಅಗ್ನೇ ತೇಜಸ್ತೇನಾಹಂ ತೇಜಸ್ವೀ ಭೂಯಾಸಂ ಯತ್ತೇಅಗ್ನೇ ವರ್ಚಸ್ತೇನಾಹಂ ವರ್ಚಸ್ವೀ ಭೂಯಾಸಂ ಯತ್ತೇ ಅಗ್ನೇ ಹರಸ್ತೇನಾಹಗ್ಂ ಹರಸ್ವೀ ಭೂಯಾಸಮ್ । ಮಯಿಮೇಧಾಂ ಮಯಿ ಪ್ರಜಾಂ ಮಯ್ಯಗ್ನಿಸ್ತೇಜೋದಧಾತು ಮಯಿ ಮೇಧಾಂ ಮಯಿ ಪ್ರಜಾಂ ಮಯೀಂದ್ರ ಇಂದ್ರಿಯಂ ದಧಾತು ಮಯಿ ಮೇಧಾಂ ಮಯಿ ಪ್ರಜಾಂ ಮಯಿ ಸೂರ್ಯೋ ಭ್ರಾಜೋದಧಾತು ॥

ಸ್ವಸ್ತಿ ಶ್ರದ್ಧಾಂ ಮೇಧಾಂ ಯಶಃ ಪ್ರಜ್ಞಾಂ ವಿದ್ಯಾಂ ಬುದ್ಧಿಂ ಶ್ರಿಯಂ ಬಲಂ ಆಯುಷ್ಯಂ ತೇಜ ಆರೋಗ್ಯಂ ದೇಹಿ ಮೇ ಹವ್ಯವಾಹನ ಶ್ರಿಯಂ ದೇಹಿ

ಮೇ – ಇತಿ ಅಗ್ನಿಂ ಪ್ರಾರ್ಥ್ಯ । ನಮಸ್ಕೃತ್ಯ (ಅಭಿವಾದಯೇ) ॥

ಮೇಲಿನ ಮಂತ್ರದಿಂದ ಯಜ್ಞೇಶ್ವರನನ್ನು ಪ್ರಾರ್ಥಿಸಿ । ನಮಸ್ಕರಿಸಿ ॥

ಉಪವಿಶ್ಯ, ಅಗ್ನೇರುತ್ತರತೋ ಭಸ್ಮಂ ಗೃಹೀತ್ವಾ, ತಿಲಕಾನಿ ಧೃತ್ವಾ, ಮಂತ್ರಾಃ –

ಕುಳಿತು, ಮಾನಸ್ತೋಕೇ ಮಂತ್ರದಿಂದ ಭಸ್ಮವನ್ನು ತೆಗೆದುಕೊಂಡು, ಕೆಳಗಿನ ವಾಕ್ಯಗಳನ್ನು ಹೇಳುತ್ತಾ, ಆ ವಾಕ್ಯಗಳಲ್ಲೇ ಬರುವ ದೇಹದ ಆಯಾಯಾ ಅಂಗಗಳಿಗೆ ಅಗ್ನಿ (ಕಾಡಿಗೆ)ರಕ್ಷೆಯನ್ನು ಹಚ್ಚಿಕೊಳ್ಳುವುದು ॥

ಓಂ ಮಾನಸ್ತೋಕೇ ತನಯೇ ಮಾನ ಆಯುಷಿ ಮಾನೋ ಗೋಷು ಮಾನೋ ಅಶ್ವೇಷು ರೀರಿಷಃ । ವೀರಾನ್ಮಾನೋ ರುದ್ರಭಾಮಿತೋ ವಧೀರ್ ಹವಿಷ್ಮಂತೋ ನಮಸಾ ವಿಧೇಮತೇ ॥

ತ್ರ್ಯಾಯುಷಂ ಜಮದಗ್ನೇರಿತಿ – ಲಲಾಟೇ, ಕಶ್ಯಪಸ್ಯ ತ್ರ್ಯಾಯುಷಮಿತಿ – ಕಂಠೇ, ಅಗಸ್ತ್ಯಸ್ಯ ತ್ರ್ಯಾಯುಷಮಿತಿ – ನಾಭೌ, ಯದ್ದೇವಾನಾಂ ತ್ರ್ಯಾಯುಷಮಿತಿ – ದಕ್ಷಿಣಸ್ಕಂಧೇ, ತನ್ಮೇಅಸ್ತು ತ್ರ್ಯಾಯುಷಮಿತಿ – ವಾಮಸ್ಕಂಧೇ, ಸರ್ವಮಸ್ತು ಶತಾಯುಷಮಿತಿ – ಶಿರಸಿ ॥

ಮೇಧಾವೀ ಭೂಯಾಸಂ । ತೇಜಸ್ವೀ ಭೂಯಾಸಂ । ವರ್ಚಸ್ವೀ ಭೂಯಾಸಂ । ಬ್ರಹ್ಮವರ್ಚಸೀ ಭೂಯಾಸಂ । ಆಯುಷ್ಮಾನ್

ಭೂಯಾಸಂ । ಅನ್ನಾದೋ ಭೂಯಾಸಂ । ಯಶಸ್ವೀ ಭೂಯಾಸಂ । ಸರ್ವಸಮ್ಯದ್ಧೋ ಭೂಯಾಸಂ ॥

ಅನೇನ ಮಯಾ ಕೃತ ಪ್ರಾತಃ/ಸಾಯಂ ಸಮಿದಾಧಾನೇನ ಭಗವಾನ್ ಸರ್ವಾತ್ಮಕಃ ಶ್ರೀ ಯಜ್ಞೇಶ್ವರಃ ಪ್ರೀಣಾತು, ಇತಿ ಕಿಂಚಿಜ್ಜಲಂ ವಿಸೃಜೇತ್ । ಏವಂ ಆಸಮಾವರ್ತನಂ ಸಾಯಂ ಪ್ರಾತಃ ಸಮಿಧ ಆದಧ್ಯಾತ್ ಜಪೇತ್ ವಾ ॥

ಮೇಲಿನ ರೀತಿ ಕರ್ಮಸಮಾಪನೆಯನ್ನು ಮಾಡಿ ಸ್ವಲ್ಪ ನೀರನ್ನು ಬಿಡುವುದು । ಈ ರೀತಿಯಾಗಿ ಸಮಾವರ್ತನೆಯವರೆಗೂ ಪ್ರತಿದಿನ ಬೆಳಿಗ್ಗೆ ಸಂಜೆ ಸಮಿದಾಧಾನ ಮಾಡಬೇಕು ಅಥವಾ ಮಂತ್ರಗಳನ್ನಾದರೂ ಜಪಿಸಬೇಕು ॥

ಬ್ರಹ್ಮಚಾರೇಃ ನಿಯಮಾಃ –

ಬ್ರಹ್ಮಚಾರ್ಯಸಿ – ಇತ್ಯಾದಿನಾ ಸಂಶಾಸ್ತಿ 'ಬಾಢಂ' ಇತಿ ಪ್ರತಿ ವಚನಮ್ ॥

ಬ್ರಹ್ಮಚಾರಿಯ ನಿಯಮಗಳು – ಕೆಳಗಿನ ಬ್ರಹ್ಮಚಾರ್ಯಸಿ ಮುಂತಾದ ಮಂತ್ರಗಳಿಂದ ಶಾಸನ(ನಿಯಮ) ಮಾಡಬೇಕು । ಅದಕ್ಕೆ ವಟುವು ಪ್ರತಿಮಾತಿಗೂ ಬಾಢಂ(ಒಪ್ಪಿಗೆ) ಎಂದು ಪ್ರತಿಯಾಗಿ ಹೇಳಬೇಕು ॥

೧ ಆಚಾರ್ಯಃ – ಬ್ರಹ್ಮಚಾರ್ಯಸಿ ? ।

ಬ್ರಹ್ಮಚಾರಿಯು ಆಗಿದ್ದೀಯೇ ? ॥

ಕುಮಾರಃ – ಬಾಢಂ (ಹೌದು) ।

ಮೇ – ಇತಿ ಅಗ್ನಿಂ ಪ್ರಾರ್ಥ್ಯ । ನಮಸ್ಕೃತ್ಯ (ಅಭಿವಾದಯೇ) ॥

ಮೇಲಿನ ಮಂತ್ರದಿಂದ ಯಜ್ಞೇಶ್ವರನನ್ನು ಪ್ರಾರ್ಥಿಸಿ । ನಮಸ್ಕರಿಸಿ ॥

ಉಪವಿಶ್ಯ, ಅಗ್ನೇರುತ್ತರತೋ ಭಸ್ಮಂ ಗೃಹೀತ್ವಾ, ತಿಲಕಾನಿ ಧೃತ್ವಾ, ಮಂತ್ರಾಃ –

ಕುಳಿತು, ಮಾನಸ್ತೋಕೇ ಮಂತ್ರದಿಂದ ಭಸ್ಮವನ್ನು ತೆಗೆದುಕೊಂಡು, ಕೆಳಗಿನ ವಾಕ್ಯಗಳನ್ನು ಹೇಳುತ್ತಾ, ಆ ವಾಕ್ಯಗಳಲ್ಲೇ ಬರುವ ದೇಹದ ಆಯಾಯಾ ಅಂಗಗಳಿಗೆ ಅಗ್ನಿ (ಕಾಡಿಗೆ)ರಕ್ಷೆಯನ್ನು ಹಚ್ಚಿಕೊಳ್ಳುವುದು ॥

ಓಂ ಮಾನಸ್ತೋಕೇ ತನಯೇ ಮಾನ ಆಯುಷಿ ಮಾನೋ ಗೋಷು ಮಾನೋ ಅಶ್ವೇಷು ರೀರಿಷಃ । ವೀರಾನ್ಮಾನೋ ರುದ್ರಭಾಮಿತೋ ವಧೀರ್ ಹವಿಷ್ಮಂತೋ ನಮಸಾ ವಿಧೇಮತೇ ॥

ತ್ರ್ಯಾಯುಷಂ ಜಮದಗ್ನೇರಿತಿ – ಲಲಾಟೇ, ಕಶ್ಯಪಸ್ಯ ತ್ರ್ಯಾಯುಷಮಿತಿ – ಕಂಠೇ, ಅಗಸ್ತ್ಯಸ್ಯ ತ್ರ್ಯಾಯುಷಮಿತಿ – ನಾಭೌ, ಯದ್ದೇವಾನಾಂ ತ್ರ್ಯಾಯುಷಮಿತಿ – ದಕ್ಷಿಣಸ್ಕಂಧೇ, ತನ್ಮೇಅಸ್ತು ತ್ರ್ಯಾಯುಷಮಿತಿ – ವಾಮಸ್ಕಂಧೇ, ಸರ್ವಮಸ್ತು ಶತಾಯುಷಮಿತಿ – ಶಿರಸಿ ॥

ಮೇಧಾವೀ ಭೂಯಾಸಂ । ತೇಜಸ್ವೀ ಭೂಯಾಸಂ । ವರ್ಚಸ್ವೀ ಭೂಯಾಸಂ । ಬ್ರಹ್ಮವರ್ಚಸೀ ಭೂಯಾಸಂ । ಆಯುಷ್ಮಾನ್

ಭೂಯಾಸಂ । ಅನ್ನಾದೋ ಭೂಯಾಸಂ । ಯಶಸ್ವೀ ಭೂಯಾಸಂ । ಸರ್ವಸಮೃದ್ಧೋ ಭೂಯಾಸಂ ॥

ಅನೇನ ಮಯಾ ಕೃತ ಪ್ರಾತಃ/ಸಾಯಂ ಸಮಿದಾಧಾನೇನ ಭಗವಾನ್ ಸರ್ವಾತ್ಮಕಃ ಶ್ರೀ ಯಜ್ಞೇಶ್ವರಃ ಪ್ರೀಣಾತು, ಇತಿ ಕಿಂಚಿಜ್ಜಲಂ ವಿಸೃಜೇತ್ । ಏವಂ ಆಸಮಾವರ್ತನಂ ಸಾಯಂ ಪ್ರಾತಃ ಸಮಿಧ ಆದಧ್ಯಾತ್ ಜಪೇತ್ ವಾ ॥

ಮೇಲಿನ ರೀತಿ ಕರ್ಮಸಮಾಪನೆಯನ್ನು ಮಾಡಿ ಸ್ವಲ್ಪ ನೀರನ್ನು ಬಿಡುವುದು । ಈ ರೀತಿಯಾಗಿ ಸಮಾವರ್ತನೆಯವರೆಗೂ ಪ್ರತಿದಿನ ಬೆಳಿಗ್ಗೆ ಸಂಜೆ ಸಮಿದಾಧಾನ ಮಾಡಬೇಕು ಅಥವಾ ಮಂತ್ರಗಳನ್ನಾದರೂ ಜಪಿಸಬೇಕು ॥

ಬ್ರಹ್ಮಚಾರೇಃ ನಿಯಮಾಃ –

ಬ್ರಹ್ಮಚಾರ್ಯಸಿ – ಇತ್ಯಾದಿನಾ ಸಂಶಾಸ್ತಿ 'ಬಾಢಂ' ಇತಿ ಪ್ರತಿ ವಚನಮ್ ॥

ಬ್ರಹ್ಮಚಾರಿಯ ನಿಯಮಗಳು – ಕೆಳಗಿನ ಬ್ರಹ್ಮಚಾರ್ಯಸಿ ಮುಂತಾದ ಮಂತ್ರಗಳಿಂದ ಶಾಸನ(ನಿಯಮ) ಮಾಡಬೇಕು । ಅದಕ್ಕೆ ವಟುವು ಪ್ರತಿಮಾತಿಗೂ ಬಾಢಂ(ಒಪ್ಪಿಗೆ) ಎಂದು ಪ್ರತಿಯಾಗಿ ಹೇಳಬೇಕು ॥

೧ ಆಚಾರ್ಯಃ – ಬ್ರಹ್ಮಚಾರ್ಯಸಿ ? ।

ಬ್ರಹ್ಮಚಾರಿಯು ಆಗಿದ್ದೀಯೇ ? ॥

ಕುಮಾರಃ – ಬಾಢಂ (ಹೌದು) ।

೨ ಆಚಾರ್ಯಃ – ಅಪ್ಪೋಶಾನ ।

ನೀರನ್ನು ಮಾತ್ರ ಕುಡಿದುಕೊಂಡು ಇರಬೇಕು । ಅಂದರೆ, ಇದರ ಅರ್ಥ – ಮಿತವಾದ ಆಹಾರ ಕ್ರಮವನ್ನು ಅನುಸರಿಸುವುದರ ಜೊತೆಗೆ, ನೀರನ್ನು ಬಿಟ್ಟು ಇನ್ಯಾವುದೇ ಪಾನೀಯಗಳನ್ನು ಕುಡಿಯಬಾರದು ॥

ಕುಮಾರಃ – ಬಾಢಂ (ಆಗಲಿ) ।

೩ ಆಚಾರ್ಯಃ – ಕರ್ಮ ಕುರು ।

ಕೆಲಸವನ್ನು ಮಾಡು । ಅಂದರೆ, ಇದರ ಅರ್ಥ – ಗುರುಗಳು ಅಥವ ತಂದೆತಾಯಿಯರು ಹೇಳುವ ಕೆಲಸವನ್ನು (ಬ್ರಹ್ಮಚರ್ಯದ ನಿತ್ಯ ಕರ್ತವ್ಯಗಳನ್ನು) ಅವಶ್ಯವಾಗಿ ಮಾಡುವುದು ॥

ಕುಮಾರಃ – ಬಾಢಂ (ಆಗಲಿ) ।

೪ ಆಚಾರ್ಯಃ – ಮಾಸುಷುಪ್ಥಾಃ ? ।

ಮಲಗಬೇಡ । ಅಂದರೆ, ಇದರ ಅರ್ಥ – ಹಗಲಲ್ಲಿ ಮಲಗಬಾರದು ಹಾಗೂ ರಾತ್ರಿಯಲ್ಲಿ ಬೇಗ ಮಲಗಿ, ಬೆಳಿಗ್ಗೆ ಬೇಗ ಏಳಬೇಕು ॥

ಕುಮಾರಃ – ಬಾಢಂ (ಆಗಲಿ) ।

೫ ಆಚಾರ್ಯಃ – ಭಿಕ್ಷಾಚರ್ಯಂ ಚರ ? ।

ಭಿಕ್ಷೆಯನ್ನು ಬೇಡು । ಅಂದರೆ, ಇದರ ಅರ್ಥ – ಸುಖ ಜೀವನಶೈಲಿಗೆ ದಾಸನಾಗದೇ, ತನ್ನ ಆಹಾರವನ್ನು ತಾನೇ ಸಂಗ್ರಹಿಸುವುದನ್ನು ಅಭ್ಯಾಸ ಮಾಡಬೇಕು ॥

ಕುಮಾರಃ – ಬಾಢಂ (ಆಗಲಿ) ।

೬ ಆಚಾರ್ಯಃ – ಆಚಾರ್ಯಾಧೀನೋ ಭವ ।

ಆಚಾರ್ಯರಿಗೆ ಅಧೀನನಾಗಿರು । ಅಂದರೆ, ಇದರ ಅರ್ಥ – ಗುರುಗಳು ಮತ್ತು ತಂದೆತಾಯಿಯರು ಹೇಳಿದ ಹಾಗೆ ಇರಬೇಕು ಮತ್ತು ಅವರಿಗೆ ಯಾವುದೇ ರೀತಿಯ ಅಗೌರವವನ್ನು ತೋರಿಸಬಾರದು ॥

ಕುಮಾರಃ – ಬಾಢಂ (ಆಗಲಿ) ।

೭ ಭವದ್ಭಿರನುಜ್ಞಾತಸ್ಸರ್ವಾನ್ ಯಜನ ಯಾಜನಾದಿ ಕರ್ಮ ನ ಕರೋಮಿ ।

ಗುರುಗಳ ಮತ್ತು ತಂದೆತಾಯಿಯರ ಒಪ್ಪಿಗೆ ಇಲ್ಲದೇ(ಅವರಿಗೆ ತಿಳಿಯದಂತೆ) ಯಾವ ಕೆಲಸವನ್ನೂ ಮಾಡುವುದಿಲ್ಲ ಮತ್ತು ಮಾಡಿಸುವುದೂ ಇಲ್ಲ ॥

ಮಂಗಲ ನೀರಾಜನಂ, ಮಂತ್ರಪುಷ್ಪಾಂಜಲಿಂ ಚ ಕೃತ್ವಾ । ಅಗ್ನೇನಯ – ಇತಿ ಅಗ್ನಿಪ್ರದಕ್ಷಿಣಂ ಕೃತ್ವಾ, ಮಂತ್ರಃ –

ಓಂ ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್ ವಿಶ್ವಾನಿ ದೇವ ವಯುನಾನಿ ವಿದ್ವಾನ್ । ಯುಯೋಧ್ಯಸ್ಮಜ್ಜುಹುರಾಣಮೇನೋ ಭೂಯಿಷ್ಠಾಂತೇ ನಮ ಉಕ್ತಿಂ ವಿಧೇಮ ॥

ಅಗ್ನಿದೇವನಿಗೆ ಮಂಗಳಾರತಿಯನ್ನು ಮತ್ತು ಪುಷ್ಪಾಂಜಲಿಯನ್ನು ಸಹ ಮಾಡಿ । ಮೇಲಿನ ಮಂತ್ರದಿಂದ ಅಗ್ನಿಪ್ರದಕ್ಷಿಣೆಯನ್ನು ಮಾಡಿ ॥

ಸ್ವಸ್ತಿ ಶ್ರದ್ಧಾಂ ಮೇಧಾಂ ಯಶಃ ಪ್ರಜ್ಞಾಂ ವಿದ್ಯಾಂ ಬುದ್ಧಿಂ ಶ್ರಿಯಂ ಬಲಂ ಆಯುಷ್ಯಂ ತೇಜ ಆರೋಗ್ಯಂ ದೇಹಿ ಮೇ ಹವ್ಯವಾಹನ ಶ್ರಿಯಂ ದೇಹಿ ಮೇ – ಇತಿ ಅಗ್ನಿಂ ಪ್ರಾರ್ಥ್ಯ । ನಮಸ್ಕೃತ್ಯ (ಅಭಿವಾದಯೇ) ॥

ಮೇಲಿನ ಶ್ಲೋಕದಿಂದ ಅಗ್ನಿದೇವನನ್ನು ಪ್ರಾರ್ಥಿಸಿ । ನಮಸ್ಕರಿಸುವುದು ॥

ಉಪವಿಶ್ಯ, ಪ್ರಾಗಾದಿ ಪರಿಸ್ತರಣಂ ಉತ್ತರೇ ವಿಸೃಜೇತ್ । ಕರ್ಮ ಸಮಾಪನಂ :– ಯಸ್ಯಸ್ಮೃತ್ಯಾ ಚ ನಾಮೋಕ್ತ್ಯಾ ತಪಃ ಪೂಜಾ ಕ್ರಿಯಾದಿಷು । ನ್ಯೂನಂ ಸಂಪೂರ್ಣತಾಂ ಯಾತು ಸದ್ಯೋ ವಂದೇ ತಮಚ್ಯುತಂ । ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ । ಯತ್ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ । ಅನೇನ ಮಯಾ ಆಚರಿತ ಉಪನಯನ ಕರ್ಮಣಾ ಭಗವಾನ್ ಸರ್ವಾತ್ಮಕಃ ವಾಸುದೇವಃ ಪ್ರೀಯತಾಂ । ಮಧ್ಯೇ ಮಂತ್ರ ತಂತ್ರ ಸ್ವರ ವರ್ಣ ನ್ಯೂನ ಅತಿರಿಕ್ತ ಲೋಪ ದೋಷ ಪ್ರಾಯಶ್ಚಿತ್ತಾರ್ಥಂ ಮಹಾಮಂತ್ರ ಜಪಂ ಕರಿಷ್ಯೇ । ಅಚ್ಯುತಾಯ ನಮಃ । ಅನಂತಾಯ ನಮಃ । ಗೋವಿಂದಾಯ ನಮಃ ॥

ಕುಳಿತು, ಕುಂಡದ ಪೂರ್ವಭಾಗದಿಂದ ಕ್ರಮವಾಗಿ ಪರಿಸ್ತರಣಗಳನ್ನು ತೆಗೆದು, ಕುಂಡದ ಹೊರಗೆ ಉತ್ತರಭಾಗದಲ್ಲಿ ಹಾಕುವುದು । ಯಸ್ಯಸ್ಮೃತ್ಯದಿಂದ ಕರ್ಮಸಮಾಪನೆ ಮಾಡುವುದು ॥

ಪವಿತ್ರಗ್ರಂಥಿಂ ವಿಸ್ರಸ್ಯ । ಆಚಮ್ಯ– ಆಸನ ವಿಧಿಃ – ಓಂ ಅದ್ಯಾನೋ ದೇವ ಸವಿತಃ ಪ್ರಜಾವತ್ಸಾವೀಸ್ಸೌಭಗಂ । ಪರಾ ದುಷ್ವಪ್ನಿಯಗ್ಂ ಸುವ । ವಿಶ್ವಾನಿ ದೇವ ಸವಿತರ್ದುರಿತಾನಿಪರಾಸುವ । ಯದ್ಭದ್ರಂ ತನ್ನ ಆಸುವ ॥ ಮಯಿ ಮಹಃ, ಮಯಿ ಯಶಃ, ಮಯೀಂದ್ರಿಯಂ, ವೀರ್ಯಂ ॥

ಪವಿತ್ರದ ಗಂಟನ್ನು ಬಿಚ್ಚಿ । ಆಚಮನವನ್ನು ಮಾಡಿ, ಮೇಲಿನ ಮಂತ್ರದಿಂದ ಆಸನವಿಧಿಯನ್ನು ಮಾಡಬೇಕು ॥

ಭಿಕ್ಷಾ –

ತತೋ ರಿಕ್ತಪಾತ್ರಂ ಹಸ್ತೇ ಗೃಹೀತ್ವಾ ‘ಭವತಿ ಭಿಕ್ಷಾಂ ದೇಹಿ’ ಇತಿ ತ್ರಿರಾವರ್ತ್ಯ ಮಾತುರಮೇವಾಗ್ರೇ ಭಿಕ್ಷೇತ ಸಾ ತಂಡುಲ ಭಿಕ್ಷಾಂ ಪ್ರಯಚ್ಛೇತ್ ಏವಂ ಮಾತೃಶ್ವಸಾರಂ ಭಗಿನೀಂ ಚ ॥

ವಿಶೇಷ ವಿಷಯ –

ಖಾಲಿಪಾತ್ರೆಯನ್ನು ಹಿಡಿದು ಮೊದಲು ವಟುವು ತಾಯಿಯಲ್ಲಿ ಭಿಕ್ಷೆ ಕೇಳಬೇಕು, ತಾಯಿಯು ಅಕ್ಕಿಯನ್ನು ಭಿಕ್ಷೆಯಾಗಿ ಕೊಡಬೇಕು, ಹೀಗೆ ಅತ್ತೆ, ಅಕ್ಕ, ಚಿಕ್ಕಮ್ಮ, ದೊಡ್ಡಮ್ಮ ಎಲ್ಲರ ಹತ್ತಿರ ಭಿಕ್ಷೆ ಕೇಳಿ ತೆಗೆದುಕೊಳ್ಳಬೇಕು । ಭಿಕ್ಷೆಯನ್ನು ಪ್ರತಿಯೊಬ್ಬರಲ್ಲಿಯೂ ೩ ಬಾರಿ ಕೇಳಬೇಕು। ಈ ರೀತಿಯ ಕ್ರಮವನ್ನು ನಾವುಗಳು ನೋಡುತ್ತಿದ್ದೇವೆ, ಮಾಡುತ್ತಿದ್ದೇವೆಯಷ್ಟೆ!! ।

ಆದರೆ ಈ ಕ್ರಮವು ಯಾವುದೇ ದೃಷ್ಟಿಕೋನದಿಂದ ವಿವೇಚಿಸಿದರೂ ಸರಿಯೆಂದು ತೋರುವುದಿಲ್ಲವೆಂಬುದಂತೂ ವಾಸ್ತವ। ಹೇಗೆಂದು ಈಗ ನಾವು ನೋಡೋಣ – ಬ್ರಹ್ಮಚಾರಿಯ ಆಶ್ರಮ ಕರ್ತವ್ಯಗಳಲ್ಲಿ, ಪ್ರತಿದಿನವೂ ನಾಲ್ಕಾರು ಮನೆಗಳಲ್ಲಿ ಭಿಕ್ಷೆಯನ್ನು ಬೇಡುವುದೂ ಒಂದು ಕರ್ತವ್ಯ। ಹೀಗೆ ದೊರೆತಂತಹ ಆಹಾರವನ್ನು ತನ್ನ ಆಶ್ರಯದಾತರಿಗೆ ಕೊಟ್ಟು, ಪುನ: ಅವರು ಕೊಟ್ಟಷ್ಟು ಆಹಾರವನ್ನು ಮಾತ್ರ ಸೇವಿಸಿ, ತನ್ನ ಮಿಕ್ಕ ಕರ್ತವ್ಯಗಳನ್ನು ಮಾಡುತ್ತಲಿರುವುದು ಇವನ ದಿನಚರಿ। ಅದುಬಿಟ್ಟು, ಉಪನಯನವಾದ ತಕ್ಷಣವೇ ಅಲ್ಲಿದ್ದ ಅಷ್ಟೂ ಹೆಂಗಸರೇ ಸ್ವತ: ಇವನ ಬಳಿಬಂದು,! ಇವನ ಮನೆಯ ಅಕ್ಕಿಯನ್ನೇ ನಮ್ಮ ಮನೆಯ, ನಾವೇ ತಂದಿರುವ ಅಕ್ಕಿಯೆಂದು ಭಾವಿಸಿಕೊಂಡು,! ಒಂದೇ ದಿನವೇ ಸಂಖ್ಯೆಯ ಮಿತಿಯೇ ಇಲ್ಲದಂತೆ, ಬಂದವರೆಲ್ಲಾ ಭಿಕ್ಷೆಯನ್ನು ಕೊಡುವುದೆಂದರೆ, ಪಾಪ ಆ ವಟು ಕೆಲವೇ ಗಂಟೆಗಳ ಹಿಂದಷ್ಟೇ ಹೇಳಿಸಿಕೊಂಡಿರುವ ಗೋತ್ರಪ್ರವರವನ್ನೇ ಹೇಳಿ ನಮಸ್ಕರಿಸಬೇಕು ಎಂಬ ಆಗ್ರಹದೊಂದಿಗೆ, ಅದರಲ್ಲಿಯೂ ಒಂದು ಪ್ರತಿಷ್ಠೆ, ಗತ್ತು, ತೋರಿಕೆಯ ರೀತಿ ಬೇರೆ! (ಯಾವ ವಸ್ತುವನ್ನೇ ಆಗಲಿ ಇನ್ನೊಬ್ಬರಿಗೆ ಕೊಡುವಾಗ ಆ ವಸ್ತು ನಮ್ಮದಾಗಿರಬೇಕು ಮತ್ತು ವಿನಯ ಭಾವವಿರಬೇಕು ಎಂಬುದು ಶಾಸ್ತ್ರಗಳ ಆದೇಶ) ಹಾಗಾಗಿ ಈ ಯಾವ ನಡವಳಿಕೆಗಳೂ, ಭಿಕ್ಷೆಯನ್ನು ಯಾಚಿಸುವ ರೀತಿಯನ್ನಾಗಲೀ ಮತ್ತು ಭಿಕ್ಷೆಯನ್ನು ಕೊಟ್ಟಂತಹ ರೀತಿಯನ್ನಾಗಲೀ ಸಮರ್ಥಿಸುವುದಿಲ್ಲ।

ಇಷ್ಟಕ್ಕೂ ಸೂತ್ರಕಾರರು ಈ ರೀತಿ ಹೇಳಿಯೇ ಇಲ್ಲ, ಅವರು ಹೇಳಿರುವುದು – ಭಿಕ್ಷಾಟನೆ ಎಂಬುದು ಬ್ರಹ್ಮಚಾರಿಯ ನಿತ್ಯಕರ್ತವ್ಯಗಳಲ್ಲಿ ಒಂದಾದ್ದರಿಂದ, ಪ್ರತಿದಿನವೂ ನಿಯಮಿತವಾಗಿ ಕೆಲವೇ ಮನೆಗಳಲ್ಲಿ ತಾನೇ ಸ್ವತಃ ಹೋಗಿ ಬೇಡಬೇಕು, ಇದರಿಂದಾಗಿ ಅವನಿಗೆ ಅನ್ನದ ಬೆಲೆ, ಕಷ್ಟದ ಪರಿಚಯ ಆಗಬೇಕು, ಈ ನಡವಳಿಕೆ ಅವನ ಮುಂದಿನ ಜೀವನಕ್ಕೆ ಅನೇಕ ರೀತಿಯಲ್ಲಿ ಪಾಠವಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಕರ್ಮಭಾಗದ ಪಿತೃಗಳು (ಋಷಿಗಳು) ಈ ನಿಯಮವನ್ನು ವಿಧಿಸಿದ್ದಾರೆಯೇ ಹೊರತು ನಿತ್ಯವೂ ಮಾಡಲಾಗುವುದಿಲ್ಲವಲ್ಲಾ ಹಾಗಾಗಿ

ಒಂದೇದಿನ ಅದರಲ್ಲಿಯೂ ಉಪನಯನವಾದ ದಿನವೇ ಸಿಕ್ಕಿದಷ್ಟು ಭೀಕ್ಷೆ ಹಾಕಿಸಿಬಿಡೋಣ ಎಂದು ಅವರೆಲ್ಲಿಯೂ ಆದೇಶಿಸಿಲ್ಲ, ಹಾಗೆ ಮಾಡುವುದಾಗಿದ್ದರೆ, ಸಂಧ್ಯಾವಂದನೆಯನ್ನೂ ಮೊದಲ ದಿನ ಮಾತ್ರ ಮಾಡಿ, ನಂತರ ಬಿಡಿ ಎಂದೂ ಹೇಳುತ್ತಿದ್ದರು!! । ಹಾಗಾಗಿ ಈಗ ನಾವು ಸರ್ವತ್ರ ಉಪನಯನದಲ್ಲಿ ಆಚರಿಸುತ್ತಿರುವ –ಭಿಕ್ಷೆ– ಎಂಬ ಕೆಲಸವು ಆ ಹೆಸರಿಗೇ ವಿರುದ್ಧವಾದ ಆಚರಣೆಯಾಗಿದೆಯಲ್ಲದೇ, ಸಮಯದ ವ್ಯರ್ಥದ ಜೊತೆಗೇ ವಟುವಿನ ವಿಪರೀತ ಆಯಾಸಕ್ಕೂ ಕಾರಣವಾಗಿದೆ । ಈ ಎಲ್ಲಾ ಹಿನ್ನಲೆಯಲ್ಲಿ, ಸತ್ವರಹಿತವಾದ ಈ ನಡವಳಿಕೆಯನ್ನು ಸರಿಪಡಿಸಿಕೊಳ್ಳಬೇಕಿರುವುದು ಅವಶ್ಯಕವಾಗಿದೆ ॥

ಅವಶ್ಯಂ ಚೇತ್, ಫಲಪೂಜಾಂ ಸಭಾಪೂಜಾಂ ಚ ಕೃತ್ವಾ, ಬ್ರಾಹ್ಮಣ ಭೋಜನಂ ಆಶೀರ್ವಚನಂ ಚ ॥

ಅವಶ್ಯಕತೆ ಇದ್ದಲ್ಲಿ – ಫಲಪೂಜೆ ಮತ್ತು ಸಭಾಪೂಜೆಗಳನ್ನು ಮಾಡಿ, ಬಂದವರಿಗೆಲ್ಲಾ ಭೋಜನವನ್ನು ಮಾಡಿಸುವುದು ॥

ತ್ರ್ಯಹ ಮೇತಂ ಅಗ್ನಿಂ ಧಾರಯಂತಿ । ಕ್ಷಾರಲವಣ ವರ್ಜನಂ ಚ ॥

ವಟುವು ಈ ಅಗ್ನಿಯನ್ನು ೩ ದಿನಗಳು ನಿರಂತರವಾಗಿ ಧಾರಣೆಮಾಡಿ, ಕಾಪಾಡಿ ಅದರಲ್ಲಿಯೇ ಸಮಿದಾಧಾನ ಮಾಡಬೇಕು । ಉಪ್ಪು, ಖಾರಾ ಹೆಚ್ಚಿಗೆ ಇಲ್ಲದ ಊಟ ಮಾಡಬೇಕು ॥

ಚತುರ್ಥೇಹನಿ ಮಂಗಳ ಸ್ನಾನಾನಂತರಂ ಕುಮಾರಸ್ಯ ಅನ್ಯದ್ವಸ್ತ್ರಂ ಪರಿಧಾಪ್ಯ ॥

೪ನೇ ದಿನ ಕುಮಾರನು ಸ್ನಾನ ಮಾಡಿ ಬೇರೆ ವಸ್ತ್ರವನ್ನು ಧರಿಸಬೇಕು ॥

ಗುರೋವಾಸಸ್ತೇ ದದಾಮಿ, ಇತಿ ವಾಚಯಿತ್ವಾ ॥

ವಟುವು ತಾನು ೩ ದಿನ ಉಟ್ಟಂತಹ ವಸ್ತ್ರವನ್ನು "ಗುರೋವಾಸಸ್ತೇ ದದಾಮಿ" ಎಂದು ಹೇಳಿ ಆಚಾರ್ಯರಿಗೆ ಕೊಡಬೇಕು ॥

ಯಸ್ಯತೇ ಪ್ರಥಮವಾಸ್ಯಂ – ಇತಿ ಉಪನಯನ ವಾಸೋ ಗುರುಃ ಪ್ರತಿಗೃಹ್ಣಾತಿ, ಮಂತ್ರಃ –

ಓಂ ಯಸ್ಯತೇ ಪ್ರಥಮ ವಾಸ್ಯಗ್ಂ ಹರಾಮಸ್ತಂತ್ವಾ ವಿಶ್ವೇ ಅವಂತು ದೇವಾಃ । ತಂತ್ವಾ ಭ್ರಾತರಸ್ಸುವೃಧೋ ವರ್ಧಮಾನಮನುಜಾಯಂತಾಂ ಬಹವಸ್ಸುಜಾತಮ್ ॥

ಆಚಾರ್ಯರು ಮೇಲಿನ ಮಂತ್ರವನ್ನು ಹೇಳಿ, ಆ ವಸ್ತ್ರವನ್ನು ಸ್ವೀಕರಿಸಬೇಕು ॥

ಶ್ಲೋಕ – ಕಂಕಣಂ ಮೋಚಯಾಮ್ಯದ್ಯ ರಕ್ಷಾಂಸಿ ನ ಕದಾಚನ । ಮಯಿ ರಕ್ಷಾಂ ಸ್ಥಿರಾಂ ಕೃತ್ವಾ ದೇವತ್ವಂ ಗಚ್ಛ ಕಂಕಣಂ । ಇತಿ ಪ್ರಾರ್ಥ್ಯ, ಕಂಕಣಂ ವಿಸೃಜೇತ್ । ಕ್ಷೀರಮಿಶ್ರಿತ ಆಜ್ಯೇನ ಕಂಕಣಂ ಸ್ನಾಪಯಿತ್ವಾ ತುಲಸೀ ಸನ್ನಿಧೌ ವಿಸೃಜೇತ್ । ತೇನೈವ ಕ್ಷೀರಾಜ್ಯೇನ ಅಗ್ನಿಂ ಪ್ರೋಕ್ಷೇತ್ ॥

ಳನೇ ದಿನ ಮಂಗಳ ಸ್ನಾನವಾದ ಮೇಲೆ ಮೇಲಿನ ಶ್ಲೋಕದಿಂದ ಕಂಕಣವನ್ನು ತೆಗೆದು । ಅದನ್ನು ಹಾಲುಮಿಶ್ರಿತ ತುಪ್ಪದಲ್ಲಿ ನೆನೆಸಿ ತುಳಸೀ ಸನ್ನಿಧಿಯಲ್ಲಿ ಹಾಕಬೇಕು । ಆ ಕ್ಷೀರಾಜ್ಯದಿಂದ ಅಗ್ನಿಯನ್ನು ಪ್ರೋಕ್ಷಿಸಬೇಕು, ಉದ್ವಾಸನೆ ಮಾಡಬೇಕು ॥

~~~~~~~~
~~~~~~~~

2004ರಲ್ಲಿ ಜಗದ್ಗುರು
ಶ್ರೀ ಭಾರತೀತೀರ್ಥ
ಮಹಾಸ್ವಾಮಿಗಳವರ
ಸೂಚನೆಯಂತೆ
ಶ್ರೀಯುತ ಶರ್ಮರನ್ನು
ಬೆಂಗಳೂರಿನ ಶ್ರೀ
ಸೀತಾರಾಮಾಂಜನೇಯ
ವೇದಪಾಠಶಾಲೆ
ವತಿಯಿಂದ
'ವೇದಭೂಷಣ'
ಬಿರುದಿನೊಂದಿಗೆ
ಸನ್ಮಾನಿಸುತ್ತಿರುವುದು

ಯುತ ಶರ್ಮರನ್ನು
12ರಲ್ಲಿ ಶಿವಮೊಗ್ಗದ
ಯಿಕ ಪರಿಷತ್
ಯಿಂದ ಕರ್ನಾಟಕ
ಷಣ ಮಹಾಸಭಾದ
ಕ್ಷರಾದ ಶ್ರೀ ಬಿ.ಎನ್.
ಸುಬ್ರಹ್ಮಣ್ಯ,
ರ್ಯಾಟಕ ರಾಜ್ಯದ
ಮುಖ್ಯಮಂತ್ರಿಗಳಾದ
ಈಶ್ವರಪ್ಪನವರು
ನ್ಮಾನಿಸುತ್ತಿರುವುದು

ಶ್ರೀಯುತ
ಶರ್ಮರನ್ನು
2012ರಲ್ಲಿ
ಶಿವಮೊಗ್ಗದಲ್ಲಿ
ಕಾರ್ಯನಿರ್ವಹಿಸು
ತ್ತಿರುವ ದೆಹಲಿಯ
'ಭಾರತೀಯ
ಜ್ಯೋತಿರ್ವಿಜ್ಞಾನ
ಸಂಸ್ಥೆ'ಯ
ವತಿಯಿಂದ
ಸನ್ಮಾನಿಸುತ್ತಿರುವುದು



ಅನುವಾದಕ ಲೇಖಕರು ಮತ್ತು ಪ್ರಕಾಶಕರು :

ವೇದ ಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ

ಚೈತನ್ಯ ಗುರುನಾಥ ಪ್ರಕಾಶನ

ಸಿ/ಂ. ಶ್ರೀಮಾನ್ ಸುಬ್ರಹ್ಮಣ್ಯ ಪ್ರಸಾದ್‌ರವರು

448 'ಸಂಹಿತಾ', 4ನೇ ತಿರುವು, ರವೀಂದ್ರನಗರ

ಶಿವಮೊಗ್ಗ, ಕರ್ನಾಟಕ

ಮೊ : 9686497982